

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 19 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 153 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಜಾತಿ ಗಣತಿಯೇ ಬೇಡ...!

● ಸಂಪುಟ ಸಭೆಯಲ್ಲಿ ಡಿಸಿಎಂ ಡಿಕೆಶಿ, ಎಂ.ಬಿ.ಪಾಟೀಲ್, ಈಶ್ವರ ಖಂಡ್ರೆ, ಮಲ್ಲಿಕಾರ್ಜುನ್ ಇತರರಿಂದ ತೀವ್ರ ಆಕ್ಷೇಪ ● ಹಿಂದುಳಿದ ಆಯೋಗ ರೂಪಿಸಿರುವ ಪಟ್ಟಿಯಿಂದ ಸಮಾಜಗಳ ನಡುವೆ ಸಾಮರಸ್ಯ ಹಾಳಾಗುತ್ತಿದೆ ● ಬಿಜೆಪಿ ಇದೇ ಅಸ್ತ್ರವನ್ನ ಬಳಸಿ ಪಕ್ಷ, ಸರ್ಕಾರದ ವಿರುದ್ಧ ದಾಳಿ ನಡೆಸುತ್ತಿದೆ

ಬೆಂಗಳೂರು, ಸೆ.18(ಕೆಎಂಶಿ)– ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲಿರುವ ಜಾತಿ ಗಣತಿ ಸಮೀಕ್ಷೆ ಕೈಬಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟ ಸಭೆಯಲ್ಲೇ ಒತ್ತಾಯಿಸಿದ್ದಾರೆ.

ಶಿವಕುಮಾರ್ ಮಾತಿಗೆ ಧ್ವನಿಗೂಡಿಸಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಸಮಾಜ–ಸಮಾಜದ ನಡುವೆ ಗೊಂದಲ ಸೃಷ್ಟಿಸಲು ಹಿಂದುಳಿದ ಆಯೋಗ ಹೊರಟಿದೆ ಎಂದು ಕಿಡಿಕಾರಿದ್ದಾರೆ. ಸಮಾಜದಲ್ಲಿ ಗೊಂದಲ ಮೂಡಿಸಲಿರುವ ಈ ಸಮೀಕ್ಷೆ ಕಾರ್ಯವೇ ಬೇಡ ಎಂದು ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ಈಶ್ವರ ಖಂಡ್ರೆ ಸಹ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದ್ದಾರೆ.

ಸಮೀಕ್ಷೆ ದಿನಾಂಕ ಸಮೀಪವಾಗುತ್ತಿದ್ದಂತೆ ಜಾತಿ–ಜಾತಿಯಲ್ಲಿ ಸಾಮರಸ್ಯ ಹದಗೆಡುವ ಹಂತಕ್ಕೆ ತಲುಪಿದೆ. ನಾವು ಸಾಮರಸ್ಯ ಮೂಡಿಸಿ ಅಭಿವೃದ್ಧಿ ಕಡೆ ಚಿಂತನೆ ಮಾಡುವ ಬದಲು ಇಂತಹ ಸಮೀಕ್ಷೆಯಿಂದ ನಮ್ಮ ಪಕ್ಷ ಹಾಗೂ ಗ್ಯಾರಂಟಿ ಸರ್ಕಾರಕ್ಕೆ ಹಿನ್ನಡೆ ಆಗುತ್ತದೆ ಎಂದು ಶಿವಕುಮಾರ್ ಸಭೆಯಲ್ಲಿ ವಿವರಣೆ ನೀಡಿದ್ದಾರೆ. ಆಯೋಗ ಸಮೀಕ್ಷೆಗೆ ಬಿಡುಗಡೆ ಮಾಡಿರುವ ಪಟ್ಟಿ ನೋಡಿದರೆ, ಇದರ ಹಿಂದಿನ ಮರ್ಮ ಏನು ಎಂಬ ಪ್ರಶ್ನೆ ಎದ್ದಿದೆ. ಆಯೋಗದ ತೀರ್ಮಾನವನ್ನು ಸರ್ಕಾರದ ತೀರ್ಮಾನ ಎಂಬುದಾಗಿ ಮುಸಿ

■ 6ನೇ ಪುಟಕ್ಕೆ

ಸಮಾಜವನ್ನು ವಿಭಜಿಸಲು ಇಚ್ಛಿಸುವುದಿಲ್ಲ



ಬೆಂಗಳೂರು, ಸೆ.18– ನಮ್ಮ ಪಕ್ಷ, ಸರ್ಕಾರವು ಯಾವುದೇ ಸಮಾಜವನ್ನು ವಿಭಜಿಸಲು ಇಚ್ಛಿಸುವುದಿಲ್ಲ. ಎಲ್ಲರಿಗೂ ನ್ಯಾಯ ಒದಗಿಸಿಕೊಡುವ ಉದ್ದೇಶದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಸಮೀಕ್ಷೆ ನಡೆಸುತ್ತಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ಗುರುವಾರ ಪ್ರತಿಕ್ರಿಯೆ ನೀಡಿ, ಹಿಂದುಳಿದ ವರ್ಗಗಳ ಆಯೋಗವು ಕಾನೂನು ಚೌಕಟ್ಟಿನಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮೂಲಕ ಸಾರ್ವಜನಿಕರಿಂದ ಮಾಹಿತಿ ಪಡೆಯಲಿದೆ. ಈ ಬಗ್ಗೆ ಬಿಜೆಪಿಯವರ ಅಪಪ್ರಚಾರ ಹಾಗೂ ಸಾರ್ವಜನಿಕರ ಅಭಿಪ್ರಾಯದ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ ಎಂದರು. ಸಾರ್ವಜನಿಕರು ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಅವಕಾಶ ಕಲ್ಪಿಸಿದ್ದೇವೆ. ಅನೇಕ ಸಮುದಾಯದವರು ಬಂದು ನಮಗೆ ಪ್ರತ್ಯೇಕ ಗುರುತು ಬೇಕು ಎಂದು ಕೇಳಿದ್ದಾರೆ. ಈ ಬಗ್ಗೆ ಕೆಲವರು ಆಕ್ಷೇಪ ಸಲ್ಲಿಸಿದ್ದು, ಎಲ್ಲರ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ. ರಾಜಕೀಯವಾಗಿ ಮಾತನಾಡುವವರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಮುಖ್ಯಮಂತ್ರಿಗಳ ಜೊತೆ ಈ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಮಾಡುತ್ತೇವೆ. ಯಾರೂ ಗಾಬರಿ ಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ಕುರುಬ ಸಮುದಾಯ ಎಸ್‌ಟಿ ಸೇರ್ಪಡೆಗೆ ವಾಲ್ಮೀಕಿ ಸಮುದಾಯ ವಿರೋಧ



ದಾವಣಗೆರೆ, ಸೆ.18– ಕುರುಬ ಸಮುದಾಯವನ್ನು ಎಸ್‌ಟಿ (ಪರಿಶಿಷ್ಟ ಪಂಗಡ)ಗೆ ಸೇರ್ಪಡೆಗೊಳಿಸುವ ವಿಚಾರವು ವಾಲ್ಮೀಕಿ ಸಮುದಾಯದ ರಾಜ್ಯಮಟ್ಟದ ಸಭೆಯಲ್ಲಿ ಕಾಂಗ್ರೆಸ್ ಸಂಸದ ಇ. ತುಕಾರಾಂ ಮತ್ತು ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ನಡುವೆ ತೀವ್ರ ಜಟಾಪಟಿಗೆ ಕಾರಣವಾಯಿತು.

ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ನಡೆದ ಈ ಮಹತ್ವದ ಸಭೆಯಲ್ಲಿ ಇಬ್ಬರು ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿಕೊಂಡರು. ಕುರುಬ ಸಮುದಾಯವನ್ನು ಎಸ್‌ಟಿ ವರ್ಗಕ್ಕೆ ಸೇರ್ಪಡೆಗೊಳಿಸುವ ಪ್ರಸ್ತಾಪಕ್ಕೆ ವಾಲ್ಮೀಕಿ ಸಮುದಾಯದಿಂದ ತೀವ್ರ ವಿರೋಧ ವ್ಯಕ್ತವಾಯಿತು. ಸಭೆಯಲ್ಲಿ ಮಾತನಾಡುತ್ತಿದ್ದ ಬಂಗಾರು ಹನುಮಂತು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಎ.ಹೆಚ್. ವಿಶ್ವನಾಥ್ ನೀಡಿದ್ದ ಹೇಳಿಕೆಯನ್ನು ಪ್ರಸ್ತಾಪಿಸಿದರು. ಜೊತೆಗೆ ವಾಲ್ಮೀಕಿ ನಿಗಮ ಹಗರಣದ ಕುರಿತು ತೀಕ್ಷ್ಣವಾಗಿ ಟೀಕಿಸಿದರು. ಇದಕ್ಕೆ ಆಕ್ರೋಶಗೊಂಡ ಸಂಸದ ಇ. ತುಕಾರಾಂ, ರಾಜಕಾರಣ ಮಾತನಾಡ ಬೇಡಿ ಎಂದರು. ಈ ವೇಳೆ ಸಂಸದ ತುಕಾರಾಂ ಹಾಗೂ ಬಿಜೆಪಿ ನಾಯಕ ಬಂಗಾರು ಹನುಮಂತು ಬೆಂಬಲಿಗರ ನಡುವೆ ಜಟಾಪಟಿ ತೀವ್ರಗೊಂಡಿತು. ಪರಿಸ್ಥಿತಿಯನ್ನು ಶಾಂತಗೊಳಿಸಲು ಪ್ರಸನ್ನಾನಂದ ಸ್ವಾಮೀಜಿ ಮಧ್ಯಸ್ಥಿಕೆ ವಹಿಸಿ, ಇಬ್ಬರನ್ನೂ ಸಮಾಧಾನಗೊಳಿಸಿ ಸಭೆಯನ್ನು ಮುಂದುವರಿಸಿದರು.

ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಂಸದ ಇ. ತುಕಾರಾಂ, ಸಮಾಜದ ವೇದಿಕೆ ಪಕ್ಷಾತೀತವಾಗಿರಬೇಕು. ರಾಜಕಾರಣದಲ್ಲಿ ಸಂಸ್ಕಾರ ಇರಬೇಕು. ಅದನ್ನ ಗಮನಿಸಿ ವೇದಿಕೆಯಲ್ಲಿ ಮಾತನಾಡಬೇಕು. ವಾಲ್ಮೀಕಿ ನಿಗಮ ಹಗರಣದ ಬಗ್ಗೆ

■ 6ನೇ ಪುಟಕ್ಕೆ

ದಸರಾ ದೀಪೋತ್ಸವ



ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತವನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಿದ್ದು, ಗುರುವಾರ ರಾತ್ರಿ ಪರೀಕ್ಷಾರ್ಥ ಬೆಳಗಿಸಲಾಯಿತು.

ಮೈಸೂರಿನ ಇಬ್ಬರು ಉದ್ಯಮಿಗಳಿಂದ 20 ಕೋಟಿಗೂ ಅಧಿಕ ಜಿಎಸ್‌ಟಿ ವಂಚನೆ

ಜಿಎಸ್‌ಟಿ ವಿಜಿಲೆನ್ಸ್‌ನಿಂದ ಮಗನ ಬಂಧನ; ತಂದೆ ನಾಪತ್ತೆ

- ತಂದೆ–ಮಗನ ದೊಡ್ಡ ಜಾಲ ಬಯಲು; ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಸರ್ಕಾರಕ್ಕೆ ಭಾರಿ ವಂಚನೆ
- ಮೈಸೂರಲ್ಲಿ ಪರಿಶೀಲನೆಗೆ ಬಂದ ಅಧಿಕಾರಿಗಳ ಮೇಲೆ ಗಲಾಟೆ ಮಾಡಿ ಪರಾರಿಯಾಗಿದ್ದ ಆರೋಪಿಗಳು
- ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಮಗ ಮೊಹಮ್ಮದ್ ಕಮ್ರಾನ್ ಬಂಧನ, ತಂದೆಗಾಗಿ ಹುಡುಕಾಟ
- ಮೈಸೂರು, ಬೆಂಗಳೂರಿನ 13 ಸ್ಥಳಗಳ ಮೇಲೆ ದಾಳಿ; 419 ಕೋಟಿಗೂ ಅಧಿಕ ವಹಿವಾಟು ಪತ್ತೆ

ಮೈಸೂರು, ಸೆ.18(ಬಿಎಲ್‌ಯು, ಬಿಎಸ್)– ನಕಲಿ ದಾಖಲಾತಿಗಳನ್ನು ಸೃಷ್ಟಿಸಿ 419 ಕೋಟಿ ರೂಪಾಯಿ ವಹಿವಾಟು ನಡೆಸಿ, ಭಾರಿ ಪ್ರಮಾಣದಲ್ಲಿ ಜಿಎಸ್‌ಟಿ ವಂಚಿಸಿರುವ ಮೈಸೂರಿನ ಉದ್ಯಮಿಯನ್ನು ಜಿಎಸ್‌ಟಿ ಗುಪ್ತಚರ ನಿರ್ದೇಶನಾಲಯದ (ಡಿಜಿಜಿಐ) ಬೆಂಗಳೂರು ಘಟಕದ ಅಧಿಕಾರಿಗಳು ಸೆ.16ರಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಮೈಸೂರಿನ ಬನ್ನಿಮಂಟಪ 'ಎ' ಲೇಔಟ್ ಮನೆ ಸಂಖ್ಯೆ 7ರ ನಿವಾಸಿ ಮೊಹಮ್ಮದ್ ಕಮ್ರಾನ್(24) ಬಂಧಿತ ಆರೋಪಿಯಾಗಿದ್ದು, ಈತನಿಂದ 6 ಮೊಬೈಲ್ ಹಾಗೂ ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ. ತಲೆಮರೆಸಿಕೊಂಡಿರುವ ಈತನ ತಂದೆ ಅಕ್ರಂ ಪಾಷಾ ಪತ್ತೆಗೆ ಜಿಎಸ್‌ಟಿ ವಿಜಿಲೆನ್ಸ್ ಅಧಿಕಾರಿಗಳು ವ್ಯಾಪಕ ಶೋಧ ನಡೆಸಿದ್ದಾರೆ.

ಬನ್ನಿಮಂಟಪದಲ್ಲಿ ಅಕ್ರಮ್ ಪಾಷಾ 'ಎಕೆ ಸ್ಟೀಲ್ಸ್' ಹೆಸರಿನಲ್ಲಿ ಕಂಪನಿ ನಡೆಸುತ್ತಿದ್ದು, ಕಮ್ರಾನ್ ಎಂ.ಕೆ ಟ್ರೇಡರ್ಸ್ ಎಂಬ ಸಂಸ್ಥೆ ಹೊಂದಿದ್ದಾರೆ. ಉಕ್ಕು ವ್ಯವಹಾರ ಮತ್ತು ಸ್ಕ್ರ್ಯಾಪ್ ವಸ್ತುಗಳ

■ 6ನೇ ಪುಟಕ್ಕೆ

ಬಾನು ಮುಷ್ತಾಕ್ ದಸರಾ ಉದ್ಘಾಟನೆ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ; ಇಂದು ವಿಚಾರಣೆ



ಬಾನು ಮುಷ್ತಾಕ್

ನವದೆಹಲಿ, ಸೆ.18– ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರಿಂದ ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ವಜಾಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದ್ದು, ಶುಕ್ರವಾರ ವಿಚಾರಣೆ ನಡೆಸಲು ಸರ್ವೋಚ್ಚ ನ್ಯಾಯಾಲಯ ಸಮ್ಮತಿಸಿದೆ.

ಸೆಪ್ಟೆಂಬರ್ 22ರಂದು ಕಾರ್ಯಕ್ರಮ ನಡೆಯಲಿರುವುದರಿಂದ ತುರ್ತು ವಿಚಾರಣೆಗಾಗಿ ಅರ್ಜಿದಾರರ ಪರ ವಕೀಲ ಎಚ್.ಎಸ್.ಗೌರವ್ ಅವರು ಮುಖ್ಯ ನ್ಯಾಯಮೂರ್ತಿ(ಸಿಜೆಐ) ಬಿ.ಆರ್.ಗವಾಯಿ ಅವರ ಪೀಠದ ಮುಂದೆ ಮನವಿ ಮಾಡಿದರು. ಮನವಿ ಪುರಸ್ಕರಿಸಿದ ಸುಪ್ರೀಂಕೋರ್ಟ್ ನಾಳೆ ಮೇಲ್ಮನವಿಯನ್ನು ಆಲಿಸಲು ಒಪ್ಪಿಕೊಂಡಿದೆ. ಕರ್ನಾಟಕದಲ್ಲಿ ಸೆಪ್ಟೆಂಬರ್ 22ರಂದು ಚಾಮುಂಡೇಶ್ವರಿಗೆ ಪೂಜೆ, ಪುಷ್ಪಾರ್ಚನೆ ಮಾಡಲು ಹಿಂದೂಯೇತರ ವ್ಯಕ್ತಿಗೆ ಅವಕಾಶ ನೀಡಲಾಗಿದೆ ಎಂದು ವಕೀಲರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು. ಗೌರವ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ ಮೇಲ್ಮನವಿಯಲ್ಲಿ, ಅರ್ಜಿದಾರರ ಯಾವುದೇ ಕಾನೂನು ಅಥವಾ ಸಾಂವಿಧಾನಿಕ ಹಕ್ಕನ್ನು ಉಲ್ಲಂಘಿಸಲಾಗಿಲ್ಲ ಎಂದು ಕರ್ನಾಟಕ ಹೈ ಕೋರ್ಟ್ ತಪ್ಪಾಗಿ ತೀರ್ಪು ನೀಡಿದೆ ಎಂದು ಹೇಳಿದ್ದಾರೆ. ಮುಷ್ತಾಕ್ ಅವರು ಈ ಹಿಂದೆ 'ಹಿಂದೂ ವಿರೋಧಿ' ಹೇಳಿಕೆಗಳನ್ನು ನೀಡಿರುವುದರಿಂದ ಅವರ ಭಾಗವಹಿಸುವಿಕೆಯು ಜನರ ಭಾವನೆಗಳಿಗೆ ಧಕ್ಕೆ ತರುತ್ತದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಸಂಗೀತ ಚಿಲುಮೆ-ನೃತ್ಯೋಲ್ಲಾಸದ ಕಾರಂಜಿ ಹೊಮ್ಮಿಸಿದ

ಯುವ ಸಂಭ್ರಮಕ್ಕೆ ಸಂತಸದ ತೆರೆ

9 ದಿನಗಳ ಕಾಲ ನರ್ತಿಸಿ ನಲಿದ ಯುವಪಡೆ



ಅರ್ಜುನ ಆನೆಯ ಸ್ಮರಣೆಯ ಗೀತೆಗೆ ಶ್ರೀರಂಗಪಟ್ಟಣದ ಡಿ ಪಾಲ್ ಕಾಲೇಜು ತಂಡದ ನೃತ್ಯ.

ಮೈಸೂರು, ಸೆ.18(ಪಿಎಂ)– ಸ್ವರ ರಾಗ ಸಮ್ಮಿಲನದ ಜೊತೆಗೆ ಇಂಪಿನ ಕಂಪನದ ಸಂಗೀತ ಚಿಲುಮೆಯಲ್ಲಿ ನೃತ್ಯೋಲ್ಲಾಸ ಹೊರಹೊಮ್ಮಿ ಯುವ ಸಮೂಹದಲ್ಲಿ ನವೋಲ್ಲಾಸ ಚಿಮ್ಮಿಸಿ ಹುಚ್ಚೆದ್ದು ಕುಣಿಸಿದ 9 ದಿನಗಳ ದಸರಾ ಯುವ ಸಂಭ್ರಮಕ್ಕೆ ಇಂದು ವರ್ಣರಂಜಿತ ತೆರೆಬಿತ್ತು.

ಕೊನೆ ದಿನವಾದ ಗುರುವಾರವೂ 50ಕ್ಕೂ ಹೆಚ್ಚು ಕಾಲೇಜು ತಂಡಗಳು ತಮ್ಮ ಮನಮೋಹಕ ನೃತ್ಯದ ಪ್ರದರ್ಶನದಲ್ಲಿ ನಾಡು–ನುಡಿಯ ವೈಭವದ ಜೊತೆಗೆ ದೇಶಭಕ್ತಿ ಅನಾವರಣಗೊಳಿಸಿದವು. ಇಂತಹ ಸಂಭ್ರಮಕ್ಕೆ ಸಾಕ್ಷಿಯಾದ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ಕಿಕ್ಕಿರಿದು ತುಂಬಿತ್ತಲ್ಲದೆ, ನೆರೆದಿದ್ದ ಯುವ ಸಮೂಹ ಕುಣಿದು ಕುಪ್ಪಳಿಸಿತು.

ವರ್ಣರಂಜಿತ ವೇದಿಕೆಯಲ್ಲಿ ನೃತ್ಯದ ಕಾರಂಜಿ ಹೊಮ್ಮುತ್ತಿದ್ದರೆ, ಇತ್ತ ಬಯಲು ರಂಗಮಂದಿರವನ್ನೂ ಪೂರ್ಣ ಪ್ರಮಾಣದಲ್ಲಿ ಆವರಿಸಿಕೊಂಡಿದ್ದ ಪ್ರೇಕ್ಷಕರ ಸಡಗರ ಮೇರೆ ಮೀರಿತ್ತು. ಈ ಪೈಕಿ ಯುವ ಸಮೂಹವೇ ತುಂಬಿ ತುಳುಕುತ್ತಿತ್ತು. ಇವರಲ್ಲಿ ರೋಮಾಂಚನಗೊಂಡು ಹೆಜ್ಜೆ ಹಾಕಿ ಸಂಭ್ರಮಿಸಿದವರೇ ಹೆಚ್ಚು. ಮಾಧುರ್ಯದ ಸಂಗೀತಕ್ಕೆ ಮನಸೋತ ಯುವಪಡೆ, ತಾವಿದ್ದಲ್ಲೇ ನರ್ತಿಸಿ ನಲಿಯಿತು.

ಇಂದು ಸಹ ಅನೇಕ ಕಾಲೇಜು ತಂಡಗಳು ಶರವೇಗದ ನರ್ತನ ಶೈಲಿಯಿಂದ ಪ್ರೇಕ್ಷಕರು ಉಸಿರು ಬಿಗಿ ಹಿಡಿದು ಕಣ್ಣರಳಿಸಿ ನೋಡುವಂತೆ ಮಾಡುವಲ್ಲಿ ಯಶಸ್ವಿಯಾದವು. ಹುಣಸೂರಿನ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು ತಂಡವು, 'ಬಾರಿಸು ಕನ್ನಡ ಡಿಂಡಿಮವ...', 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...' ಗೀತೆಗಳಿಗೆ ಹೆಜ್ಜೆ ಹಾಕಿ ಕನ್ನಡಾಭಿಮಾನದ ಕಹಳೆ ಮೊಳಗಿಸಿ ಚಪ್ಪಾಳೆ ಗಿಟ್ಟಿಸಿತು. ಬಳಿಕ ನಂಜನಗೂಡಿನ ಜೆಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ತಂಡವು, ನೃತ್ಯದಲ್ಲಿ ಮಲೆ ಮಹದೇಶ್ವರ ಆರಾಧನೆಯನ್ನು ಅನಾವರಣಗೊಳಿಸಿತು. ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಡಿ.ಬನುಮಯ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜು ತಂಡ ಸಹ, 'ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ...' ಗೀತೆಗೆ

■ 6ನೇ ಪುಟಕ್ಕೆ

ಯುವ ದಸರಾಗೆ ಅವಕಾಶ...

ಯುವ ಸಂಭ್ರಮ ಸಂಪನ್ನಗೊಂಡಿದ್ದು, ಇದೀಗ ಯುವಪಡೆ ಚಿತ್ತ ಯುವ ದಸರಾದತ್ತ ಹರಿದಿದೆ. ಜೊತೆಗೆ ಯುವ ಸಂಭ್ರಮದಲ್ಲಿ ಪ್ರದರ್ಶನ ನೀಡಿದ ತಂಡಗಳಿಗೂ ಯುವ ದಸರಾದಲ್ಲಿ ಪ್ರದರ್ಶನ ನೀಡಲು ಅವಕಾಶ ಕಲ್ಪಿಸಲಾಗುತ್ತಿದ್ದು, ಉತ್ತಮ ಪ್ರದರ್ಶನ ನೀಡಿದ ತಂಡಗಳನ್ನು ಆಯ್ಕೆ ಮಾಡಿ ಯುವ ದಸರಾದಲ್ಲಿ ಪ್ರತಿಭೆ ಅನಾವರಣಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಯುವ ಸಂಭ್ರಮದಲ್ಲಿ 9 ದಿನಗಳ ಕಾಲ ದಿನಕ್ಕೆ 50ಕ್ಕೂ ಹೆಚ್ಚು ಕಾಲೇಜು ತಂಡಗಳು ಪ್ರದರ್ಶನ ನೀಡಿದ್ದು, ಪ್ರತಿ ತಂಡದಲ್ಲಿ 30ರಿಂದ 40 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಒಟ್ಟಾರೆ 450ಕ್ಕೂ ಹೆಚ್ಚು ತಂಡಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಯುವ ಸಂಭ್ರಮ ವೇದಿಕೆಯಲ್ಲಿ ತಮ್ಮ ಪ್ರತಿಭೆ ಪ್ರದರ್ಶನ ನೀಡಿದ್ದಾರೆ.

ಅತಿಥಿ ಉಪನ್ಯಾಸಕರ ನೇಮಕ ವಿಳಂಬ ಖಂಡಿಸಿ
ಸೆ.27, ಸರ್ಕಾರಿ ಪದವಿ ಕಾಲೇಜು ತರಗತಿ ಬಹಿಷ್ಕಾರ

ಮೈಸೂರು, ಸೆ.18(ಎಸ್‌ಪಿಎನ್)– ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿ ವಿಷಯದಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಖಂಡಿಸಿ ಸೆ.27ರಂದು ರಾಜ್ಯದ ಎಲ್ಲಾ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂ ಪ್ರೇರಿತ ತರಗತಿ ಬಹಿಷ್ಕಾರಕ್ಕೆ ಎಐಡಿಎಸ್‌ಓ ರಾಜ್ಯ ಸಮಿತಿ ಕರೆ ನೀಡಿದ್ದು, ಈ ನಿರ್ಧಾರವನ್ನು ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ ಬೆಂಬಲಿಸಿದೆ.

ಸರ್ಕಾರಿ ಪದವಿ ಕಾಲೇಜಿನಲ್ಲಿ ಓದುತ್ತಿರುವ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ. ಈ ಸಮಸ್ಯೆ ಬಗೆಹರಿಸುವಂತೆ ಹಲವು ಬಾರಿ ಮನವಿ ಮಾಡಿದರೂ, ಸರ್ಕಾರ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ನೀಡಿಲ್ಲ. ಇದನ್ನು ಖಂಡಿಸಿ, ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿಯು ಸೆ.27ರಂದು ರಾಜ್ಯದ ಎಲ್ಲಾ ಸರ್ಕಾರಿ ಪದವಿ ವಿದ್ಯಾರ್ಥಿಗಳಿಗೆ ಸ್ವಯಂಪ್ರೇರಿತ ತರಗತಿ ಬಹಿಷ್ಕಾರಕ್ಕೆ ಕರೆ ನೀಡಿದೆ.

ಕಳೆದ ಎರಡು ತಿಂಗಳಿಂದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯಿಂದಾಗಿ ಪಾಠ ಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ. ಇದೇ ಅವಧಿಯಲ್ಲಿ ಖಾಸಗಿ ಕಾಲೇಜುಗಳಲ್ಲಿ ಪಠ್ಯಕ್ರಮ, ಘಟಿಕ ಪರೀಕ್ಷೆಗಳು ಮುಗಿದು, ಸೆಮಿಸ್ಟರ್ ಪರೀಕ್ಷೆಗಳಿಗೆ ಸಿದ್ಧತೆ ನಡೆಯುತ್ತಿದೆ. ಆದರೆ, ಬಡ ಮತ್ತು ಗ್ರಾಮೀಣ ಹಿನ್ನಲೆಯ ವಿದ್ಯಾರ್ಥಿಗಳು ಬೋಧನೆ ಇಲ್ಲದೆ, ಈ ಸಮಸ್ಯೆ ಎದುರಿಸುವಂತಾಗಿದೆ.

ಸರ್ಕಾರಿ ಕಾಲೇಜು ವಿದ್ಯಾರ್ಥಿಗಳನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಸರ್ಕಾರ ಪರಿಗಣಿಸುವುದು ಸರಿಯಲ್ಲ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಯುಜಿಸಿ ಮಾರ್ಗಸೂಚಿಗಳನ್ನು ಅನುಸರಿಸುವುದು ಕಡ್ಡಾಯವಲ್ಲ. ಸರ್ಕಾರ ಬಯಸಿದರೆ ಈ ಬಿಕ್ಕಟ್ಟನ್ನು ತಕ್ಷಣವೇ ಪರಿಹರಿಸಬಹುದು. ಆದರೆ, ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಕಳೆದ ಕೆಲವು ವಾರಗಳಿಂದ ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ನ್ಯಾಯಕ್ಕಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೂ ಸರ್ಕಾರದ ನಿರ್ಲಕ್ಷ್ಯ ಧೋರಣೆ ತೋರುತ್ತಿದೆ. ಹೀಗಾಗಿ, ತಮ್ಮ ಶಿಕ್ಷಣದ ಹಕ್ಕನ್ನು ರಕ್ಷಿಸಿಕೊಳ್ಳಲು ವಿದ್ಯಾರ್ಥಿಗಳು ಈ ಹೋರಾಟವನ್ನು ತೀವ್ರಗೊಳಿಸಿ, ತರಗತಿ ಬಹಿಷ್ಕಾರಕ್ಕೆ ಸ್ವಯಂಪ್ರೇರಿತವಾಗಿ ನಿರ್ಧಾರ ಮಾಡಿ, ತಮ್ಮ ಭವಿಷ್ಯದ ಬಗ್ಗೆ ಸರ್ಕಾರಕ್ಕೆ ಒಂದು ಸ್ಪಷ್ಟ ಸಂದೇಶ ನೀಡುವಂತೆ ಎಂದು ಎಐಡಿಎಸ್‌ಓ ಮೈಸೂರು ಸಮಿತಿ ಕಾರ್ಯದರ್ಶಿ ನಿತಿನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹನೀಯರಿಗೆ ಮಾಲಾರ್ಪಣೆ....



ಮೈಸೂರು ನಗರ (ಜಿಲ್ಲಾ)ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯು 36ನೇ ವಾರ್ಷಿಕೋತ್ಸವ ಅಂಗವಾಗಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆ ಮುಂಭಾಗ ಹಿರಿಯ ಪತ್ರಕರ್ತರಾದ ಡಾ.ಕೆ.ಬಿ.ಗಣಪತಿ, ರಾಜಶೇಖರ ಕೋಟಿ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಡಾ.ರಾಜ್ ಸಂಘದ ಅಧ್ಯಕ್ಷ ಆರ್.ರಾಮೇಗೌಡ, ಉಪಾಧ್ಯಕ್ಷ ವಿ.ಗಿರಿಧರ್, ಪ್ರಧಾನ ಕಾರ್ಯದರ್ಶಿ ಮೋಹನ್‌ಕುಮಾರ್, ಕಾನೂನು ಸಲಹೆಗಾರ ಶಶಿಕಿರಣ್, ಯುವ ಮುಖಂಡ ಸಂತೋಷ್, ರಂಗಪ್ಪಗೌಡ, ಶೀತಲ್ ಶರ್ಮಾ ಇದ್ದರು.



ಮೈಸೂರು ತಾಲೂಕಿನ ಬರಡನಪುರದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶಮೂರ್ತಿಯನ್ನು ಮೆರವಣಿಗೆ ನಡೆಸಿ, ವಿಸರ್ಜಿಸಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಬಸವಣ್ಣ, ಗ್ರಾಮಸ್ಥರು ಹಾಜರಿದ್ದರು.

ಸಾಹಸಸಿಂಹ ಡಾ.ವಿಷ್ಣುವರ್ಧನ್ ಹುಟ್ಟುಹಬ್ಬ ಆಚರಣೆ



ಮೈಸೂರಿನ ಸುಣ್ಣದಕೇರಿಯಲ್ಲಿ ವಿಷ್ಣುವರ್ಧನ್ ಅಭಿಮಾನಿಗಳು ಹಾಗೂ ಸ್ಥಳೀಯ ನಿವಾಸಿಗಳಿಂದ ಅನ್ನಸಂತರ್ಪಣೆ, ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸುವ ಮೂಲಕ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ 75ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮುಖಂಡರಾದ ಕುಮಾರ್, ಅಶ್ವತ್, ದಾಸಿ, ಮಹೇಶ್, ಪ್ರಭು, ದೇವರಾಜು, ಪ್ರಕಾಶ್, ರವಿಚಂದ್ರ ಬಸವರಾಜು, ರೇವಣ್ಣ ಉಪಸ್ಥಿತರಿದ್ದರು.

ದೇವಗಹಳ್ಳಿ ಹಾಲು ಉತ್ಪಾದಕರ ಸಂಘದ ವಾರ್ಷಿಕ ಮಹಾಸಭೆ



ಮೈಸೂರು ತಾಲೂಕು ದೇವಗಹಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಗುರುವಾರ ನಡೆಯಿತು. ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರಾದ ಕೆ.ಉಮಾಶಂಕರ್, ಲೀಲಾ ನಾಗರಾಜು, ಬಿ.ಗುರುಸ್ವಾಮಿ, ತಾಲೂಕು ಮೇಲ್ವಿಚಾರಕ ಸಂತೋಷ್, ವಿಸ್ತರಣಾಧಿಕಾರಿ ಪರಮೇಶ್, ಡೇರಿ ಅಧ್ಯಕ್ಷ ರಾಜಶೇಖರ ಮೂರ್ತಿ, ಉಪಾಧ್ಯಕ್ಷ ಸಿ.ವೆಂಕಟೇಶ್, ನಿರ್ದೇಶಕರಾದ ಡಿ.ವಿ.ಲಿಂಗರಾಜು, ಸಿದ್ದಯ್ಯ ಸಂತೋಷ್‌ಕುಮಾರ್, ಮಹದೇವಸ್ವಾಮಿ, ಎಂ.ಪ್ರಭು, ಮರಿಚಯ್ಯ ನಾಗರತ್ನ, ಗೌರಮ್ಮ, ಡೇರಿ ಕಾರ್ಯದರ್ಶಿ ಶಿವಣ್ಣ, ಸಹಾಯಕ ಪ್ರಜ್ವಲ್, ಗ್ರಾಮಸ್ಥರು ಉಪಸ್ಥಿತರಿದ್ದರು.

ಸೆ.20ರಿಂದ 'ಆನೆ ಬಂತು ಆನೆ' ಮಕ್ಕಳ ರಂಗ ಶಿಬಿರ

ಮೈಸೂರು: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಿಂದ ಆನೆ ಬಂತು ಆನೆ ಮಕ್ಕಳ ರಂಗ ಶಿಬಿರವನ್ನು ಹಾರ್ದ್ವಿಕ್ ಶಾಲಾ ಆವರಣದಲ್ಲಿ ಆಯೋಜಿಸಲಾಗಿದೆ. ಸೆ.20ರಿಂದ ಅ.4ರವರೆಗೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ (7 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ) ನಡೆಯಲಿದೆ. ಮಾಹಿತಿಗೆ: 9845605012, 94488 71815 ಸಂಪರ್ಕಿಸಿ.

ಡಿ.ಕೃಷ್ಣಯ್ಯ ನಿಧನ



ಮೈಸೂರು: ಮೈಸೂರಿನ ವಿನಾಯಕನಗರ ಬಡಾವಣೆ ನಿವಾಸಿ, ಮೈಸೂರು ನಗರಪಾಲಿಕೆ ನಿವೃತ್ತ ವಾಹನ ಚಾಲಕರಾದ ಡಿ.ಕೃಷ್ಣಯ್ಯ (89) ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೈಸೂರಿನ ಗೋಕುಲಂನ ರುದ್ರಭೂಮಿಯಲ್ಲಿ ನಾಳೆ (ಸೆ.19) ಬೆಳಿಗ್ಗೆ 11.30ಕ್ಕೆ ನಡೆಯಲಿದೆ. ಮೃತರ ಅಂತಿಮ ದರ್ಶನಕ್ಕಾಗಿ ಅವರ ಸ್ವಗೃಹದಲ್ಲಿ ಪಾರ್ಥಿವ ಶರೀರ ಇರಿಸಲಾಗಿದೆ.

ರೀಲ್ಸ್‌ಗೆ ಮಾರು ಹೋಗಿ ರಿಯಲ್ ಲೈಫ್ ಕಳೆದುಕೊಳ್ಳಬೇಡಿ

ಯುವ ಸಮೂಹಕ್ಕೆ ಜಾನಪದ ವಿದ್ವಾಂಸ ಪ್ರೊ.ಮೈಸೂರು ಕೃಷ್ಣಮೂರ್ತಿ ಕಿವಿಮಾತು



ಮೈಸೂರಿನ ಯುವರಾಜ ಕಾಲೇಜಿನಲ್ಲಿ 2025–26ನೇ ಸಾಲಿನ ಜ್ಞಾನ ವಾಹಿನಿ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡೆ, ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳನ್ನು ಜೋಯಿಸ್ ಕಲಾ ಪ್ರತಿಷ್ಠಾನ ಸಂಸ್ಥಾಪಕಿ ವಿದುಷಿ ನಮ್ರತಾ ಜೋಯಿಸ್ ಉದ್ಘಾಟಿಸಿದರು.

ಮೈಸೂರು,ಸೆ.18(ಎಂಕೆ)–ಸತ್ಯದ ಹಾದಿಯನ್ನೇ ಮರೆಯುತ್ತಿರುವ ಯುವ ಸಮೂಹವನ್ನು ಸಾಮಾಜಿಕ ಜಾಲತಾಣಗಳು ಭಯಾನಕ ಪ್ರಪಾತಕ್ಕೆ ನೂಕುತ್ತಿವೆ ಎಂದು ಜಾನಪದ ಗಾಯಕ ಪ್ರೊ.ಮೈಸೂರು ಕೃಷ್ಣಮೂರ್ತಿ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಯುವರಾಜ ಕಾಲೇಜಿನಲ್ಲಿ 2025–26ನೇ ಸಾಲಿನ ಜ್ಞಾನ ವಾಹಿನಿ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡೆ, ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರೀಲ್ಸ್ ಭೂತಕ್ಕೆ ಸಿಲುಕಿರುವ ಯುವ ಸಮೂಹವನ್ನು ಸಾಮಾಜಿಕ ಮಾಧ್ಯಮವೆಂಬ ಪಿಡುಗಿನಿಂದ ಕಾಪಾಡಿ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ವಾಸ್ತವದ ನೆಲೆಗಟ್ಟಿಗೆ ತಂದು ವಿಲೀನವಾಗಿಸಬೇಕಿದೆ ಎಂದು ಅಭಿಪ್ರಾಯಿಸಿದರು.

ಜ್ಞಾನ ಮತ್ತು ವಿವೇಕ ಎಂಬ ವಿದ್ವತ್‌ಗಳನ್ನು ಪಡೆದು, ವಿವೇಕದ ಮೂಲಕ ಜ್ಞಾನದ ಹಾದಿ ತಲುಪಬೇಕಿದೆ. ವಿಜ್ಞಾನ–ತಂತ್ರಜ್ಞಾನ ಬೆಳೆದಂತೆ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಒತ್ತಡದ ಬದುಕಿನ ನಿರ್ವಹಣೆಗೆ ಆಧ್ಯಾತ್ಮ ಸಹಕಾರಿಯಾಗಲಿದೆ ಎಂದು ಹೇಳಿದರು.

ಅಂಧಕಾರದ ಯುಗ ಸೃಷ್ಟಿ: ಜಗತ್ತು ಬೆಳೆದಂತೆ ನಾವು ಪರಮ ಅಂಧಕಾರದ ಯುಗದ ಕಡೆಗೆ ಮುಖಮಾಡುತಿದ್ದೇವೆ. ವಿಶ್ವ ಈಗಾಗಲೇ ಎರಡು ಮಹಾಯುದ್ಧಗಳನ್ನು ಕಂಡಿದ್ದು, ತಂತ್ರಜ್ಞಾನ, ವಿಜ್ಞಾನದಿಂದ ಅತ್ಯಾಧುನಿಕ ಯುದ್ಧ ಸಲಕರಣೆಗಳನ್ನು ಪ್ರಪಂಚದ ದೇಶಗಳು ಸಿದ್ಧಪಡಿಸಿಕೊಂಡಿದ್ದು, ಮೂರನೇ ಮಹಾಯುದ್ದವಾದರೆ ಅಂಧಕಾರದ ಯುಗದ ಸೃಷ್ಟಿ ಕಟ್ಟಿಟ್ಟಬುತ್ತಿ ಎಂದು ಆತಂಕ ವ್ಯಕ್ತಪಡಿಸಿದರು.

ಜೋಯಿಸ್ ಕಲಾ ಪ್ರತಿಷ್ಠಾನ ಸಂಸ್ಥಾಪಕಿ ವಿದುಷಿ ನಮ್ರತಾ ಜೋಯಿಸ್ ಸಮಾರಂಭ ಉದ್ಘಾಟಿಸಿದರು. ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಮಹದೇವಮೂರ್ತಿ, ಆಡಳಿತಾಧಿಕಾರಿ ಪ್ರೊ.ಕೆ.ಅಜಯ್‌ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಸಿ.ನಾಗೇಶ್‌ಬಾಬು, ಜ್ಞಾನವಾಹಿನಿ ಸಮಿತಿ ಸಂಚಾಲಕ ಪ್ರೊ.ಸಿ.ಡಿ ಪರುಶುರಾಮ್, ಐಕ್ಯೂಎಸಿ ಪ್ರೊ.ಪಿ.ಕೆ ಮಹೇಶ್ವರ್, ಡಾ.ಗಿರೀಶ್ಚಂದ್ರ, ಡಾ.ಅನಿಲ್ ಕುಮಾರ್, ದೈಹಿಕ ಸಹಾಯಕ ನಿರ್ದೇಶಕ ಪಿ.ಎಸ್.ರವಿ ಮತ್ತಿತರರಿದ್ದರು.

ಟೀಂ ಮೈಸೂರು, ಲಯನ್ಸ್ ಕ್ಲಬ್‌ನಿಂದ ಶಿಕ್ಷಕರು, ಅಭಿಯಂತರರಿಗೆ ಸನ್ಮಾನ



ಟೀಂ ಮೈಸೂರು ಹಾಗೂ ಲಯನ್ಸ್ ಕ್ಲಬ್ ಆಫ್ ಮೈಸೂರು ಇಂದಿರಾನಗರ ಘಟಕದಿಂದ ಶಿಕ್ಷಕರು, ಅಭಿಯಂತರರನ್ನು ಸನ್ಮಾನಿಸಲಾಯಿತು.

ಮೈಸೂರು,ಸೆ.18(ಪಿಎಂ)–ಟೀಂ ಮೈಸೂರು ಹಾಗೂ ಲಯನ್ಸ್ ಕ್ಲಬ್ ಆಫ್ ಮೈಸೂರು, ಇಂದಿರಾನಗರ ಘಟಕದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಮತ್ತು ಅಭಿಯಂತರರ ದಿನಾಚರಣೆಯಲ್ಲಿ ಶಿಕ್ಷಕರು ಹಾಗೂ ಅಭಿಯಂತರರನ್ನು ಸನ್ಮಾನಿಸಲಾಯಿತು.

ಮೈಸೂರಿನ ಸಭಾಂಗಣವೊಂದರಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಇಂಡಿಯನ್ ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕ ಆರ್.ಅನಿಲ್ ಕುಲಕರ್ಣಿ ಮಾತನಾಡಿ, ಪ್ರತಿಯೊಬ್ಬರ ಬದುಕಿನಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ಜೊತೆಗೆ ಸಮಾಜಕ್ಕೆ ನಿಷ್ಠಾವಂತ ಅಭಿಯಂತರರ ಕೊಡುಗೆ ಅನುಪಮವಾದುದು. ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಉಪಯುಕ್ತ ಮಾಹಿತಿಗಳನ್ನು ವಿವರಿಸಿದರು.

ಲಯನ್ ವೆಂಕಟೇಶ್ ಮಾತನಾಡಿ, ಶಿಕ್ಷಕರು ಹಾಗೂ ಅಭಿಯಂತರರ ಕೊಡುಗೆ ಸಮಾಜಕ್ಕೆ ಅಪಾರ. ಲಯನ್ಸ್ ಸಂಸ್ಥೆ ಟೀಂ ಮೈಸೂರು ಜೊತೆ ಸೇರಿ ಒಳ್ಳೆಯ ಕಾರ್ಯಕ್ರಮ ಮಾಡಿದೆ ಎಂದರು. ಇದೇ ವೇಳೆ ಕರ್ತವ್ಯದಲ್ಲಿರುವ ಹಾಗೂ ನಿವೃತ್ತರಾದವರು ಸೇರಿದಂತೆ 15 ಮಂದಿ ಶಿಕ್ಷಕರು ಹಾಗೂ ಐವರು ಅಭಿಯಂತರರನ್ನು ಸನ್ಮಾನಿಸಲಾಯಿತು. ಟೀಂ ಮೈಸೂರು ಸಂಘಟನೆಯ ಮನೋಹರ್, ನವೀನ್, ಲಯನ್ಸ್ ಕ್ಲಬ್ ಆಫ್ ಮೈಸೂರು ಇಂದಿರಾನಗರದ ಅಧ್ಯಕ್ಷ ಅಭಿಷೇಕ್, ಟೀಂ ಮೈಸೂರು ಸಂಘಟನೆ ಗೋಕುಲ್ ಗೋವರ್ಧನ್, ಯಶವಂತ್, ಅನಿಲ್ ಜೈನ್, ಹಿರಿಯಣ್ಣ, ರಾಮಪ್ರಸಾದ್, ಪ್ರಸನ್ನ ರಾಜಗುರು, ಮುರಳಿ, ಲಿಂಗರಾಜು, ಯತೀಶ್, ನಾಗೇಂದ್ರ ಬಾಲಕೃಷ್ಣ ಸುನೀಲ್, ಮಂಜುನಾಥ್ ಹುಣಸೂರು, ರಾಘವೇಂದ್ರ ಸಿ.ಎಸ್.ರಾಘವೇಂದ್ರ, ತಿಲಕ್, ರವಿ, ಮನೋಜ್, ಚಂದನ್, ಸಹನಾ, ಉಮಾ ಹಿರಿಯಣ್ಣ, ನಂದಿನಿ, ಇಂದ್ರಾಣಿ, ಸುಕೃತ, ವರ್ಷಿಣಿ, ಮಿನುಗು, ಮೌಲ್ಯ, ಲಯನ್ಸ್ ಕ್ಲಬ್‌ನ ರಾಜಾರಾಮ್, ದೇವಪ್ರಕಾಶ್, ಮೋಹನ್, ಪ್ರಭಾಕರ್, ಶ್ರೀನಿಧಿ, ಪ್ರಶಾಂತ್, ಅನಿಲ್, ಕಲ್ಯಾಣಿ ಹಾಜರಿದ್ದರು.

ಇಂದು ವಿಪ್ರ ಸಮುದಾಯದವರ ಸಭೆ

ಜಾತಿಗಣತಿ ವೇಳೆ ಗೊಂದಲವಾಗದಂತೆ ಮನವರಿಕೆ ಮಾಡಿಕೊಡುವ ಸಂಬಂಧ ಚರ್ಚೆ

ಮೈಸೂರು,ಸೆ.18(ಜಿಎ)–ರಾಜ್ಯ ಸರ್ಕಾರದ ಜಾತಿಗಣತಿ ವೇಳೆ ವಿಪ್ರ ಸಮುದಾಯದವರು ಯಾವುದೇ ಗೊಂದಲಕ್ಕೆ ಒಳಗಾಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಸೆ.19ರ ಸಂಜೆ 5 ಗಂಟೆಗೆ ನಗರದ ಚಾಮುಂಡಿಪುರಂನ ಶಾರದಾ ನಿಕೇತನ ಹಾಸ್ಟೆಲ್‌ನಲ್ಲಿ ಸಮುದಾಯದವರ ಸಭೆ ಕರೆಯಲಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಎಚ್.ವಿ.ರಾಜೀವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗ ಆಯೋಗವು ಸೆ.22ರಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಪ್ರಾರಂಭಿಸಲಿದೆ. ಈ ವೇಳೆ ಬ್ರಾಹ್ಮಣ ಸಮುದಾಯದ ಎಲ್ಲರೂ ಒಗ್ಗಟ್ಟಿನಿಂದ ಒಂದೇ ಧ್ಯೇಯ, ಉದ್ದೇಶದಿಂದ ಸಂಘಟನಾತ್ಮಕವಾಗಿ ಏಕಾಭಿಪ್ರಾಯದ ಮಾಹಿತಿ ನೀಡುವಂತೆ ನೋಡಿಕೊಳ್ಳಬೇಕಾಗಿದೆ. ಹೀಗಾಗಿ ಸಮುದಾಯದವರು ಸ್ಪಷ್ಟ ಮಾಹಿತಿ ನೀಡಬೇಕು. ಈ ಕುರಿತಂತೆ ಎಲ್ಲಾ ಬ್ರಾಹ್ಮಣ ಸಂಘ ಸಂಸ್ಥೆ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸಂಪೂರ್ಣ ಮಾಹಿತಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಈ ಸಭೆ ಆಯೋಜಿಸಲಾಗಿದೆ.

ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಬ್ರಾಹ್ಮಣ ಎಂದು ತಿಳಿಸಬೇಕು. ಉಪ ಜಾತಿ ತಿಳಿಸುವ ಅಗತ್ಯವಿಲ್ಲ. ಮನೆಗೆ ಅಂಟಿಸುವ ಸ್ಟಿಕ್ಕರ್ ಹರಿದು ಹಾಕಬಾರದು. 60 ಪ್ರಶ್ನೆಯುಳ್ಳ ಮಾಹಿತಿ ನೀಡುವುದರಲ್ಲಿ ಯಾವುದೇ ತಪ್ಪಿಲ್ಲ. ಸಮೀಕ್ಷೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ಇದೇ ವೇಳೆ ಸೂಕ್ತ ಮಾಹಿತಿ ನೀಡಲೆಂದು ಕಚೇರಿಯಲ್ಲಿ ಮಾಹಿತಿ ಕೇಂದ್ರ ತೆರೆದಿದ್ದು, ವ್ಯವಸ್ಥಾಪಕ ನಾಗರಾಜ್ ಅವರನ್ನು ದೂ. 99458 40620 ಮೂಲಕ ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಎಕೆಬಿಎಂಎಸ್ ರಾಜ್ಯ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್, ನಂ.ಶ್ರೀಕಂಠಕುಮಾರ್, ವಿಶ್ವನಾಥಯ್ಯ, ಡಾ.ಲಕ್ಷ್ಮೀದೇವಿ ಇದ್ದರು.

ಭೂಮಂಡಲ ಇರುವವರೆಗೆ ನಮ್ಮ ಸಾಂಸ್ಕೃತಿಕ ಸತ್ವತೆ ಬೇರ್ಪಡಿಸಲಾಗದು

ಹಾಸನದ ಸ್ನಾತಕೋತ್ತರ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಬಿ.ಇರ್ಷಾದ್ ವಿಶ್ವಾಸ



ಮಹಾರಾಜ ಕಾಲೇಜಿನಲ್ಲಿ ನಡೆದ ಹಿಂದಿ ದಿನಾಚರಣೆಯಲ್ಲಿ ಹಾಸನ ಸ್ನಾತಕೋತ್ತರ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಬಿ.ಇರ್ಷಾದ್ ಮಾತನಾಡಿದರು.

ಮೈಸೂರು, ಸೆ.18(ಎಂಕೆ)– ಭಾರತ ಭೂಮಿ ಆಧ್ಯಾತ್ಮದ ಸಂಕುಲವಾಗಿದ್ದು, ಈ ಭೂಮಿ ಇರುವವರೆಗೂ ನಮ್ಮಲ್ಲಿರುವ ಸಾಂಸ್ಕೃತಿಕ ಸತ್ವತೆಯನ್ನು ಬೇರ್ಪಡಿಸಲು ಸಾಧ್ಯವೇ ಇಲ್ಲ ಎಂದು ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಂ.ಬಿ.ಇರ್ಷಾದ್ ಹೇಳಿದರು.

ಮೈಸೂರು ವಿವಿ ಮಹಾರಾಜ ಕಾಲೇಜಿನ ಹಿಂದಿ ವಿಭಾಗದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಹಿಂದಿ ದಿನಾಚರಣೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮೂರ್ತ ಪರಂಪರೆ' (ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪ) ಕುರಿತು ಮಾತನಾಡಿದ ಅವರು, ಭಾರತ ಬಹುಸಂಸ್ಕೃತಿಯ ನೆಲೆಯಾಗಿದ್ದು, ಆಧ್ಯಾತ್ಮದ ಸೆಳೆತವನ್ನೊಳಗೊಂಡಿದೆ ಎಂದರು.

ಭಾರತದ ಇತಿಹಾಸವನ್ನು ಅಧ್ಯಯನ ಮಾಡಿದರೆ, ಸ್ವಾತಂತ್ರ್ಯ ಹೋರಾಟವಷ್ಟೇ ಅಲ್ಲದೆ ರಾಜಮನೆತನಗಳು ನೀಡಿರುವ ಅಪಾರ ಕೊಡುಗೆ, ಕಲೆ ಮತ್ತು ಸಂಸ್ಕೃತಿಗೆ ನೀಡಿರುವ ಆದ್ಯತೆ ತಿಳಿಯಲಿದೆ. ರಾಮಾಯಣ–ಮಹಾಭಾರತದಂತಹ ಮಹಾಕಾವ್ಯಗಳ ಪ್ರತಿಯೊಂದು ಸನ್ನಿವೇಶವೂ ಈ ನೆಲೆ ಸತ್ವವನ್ನು ತಿಳಿಸಲಿವೆ. ರಾವಣ ಕೆಟ್ಟವನೇ ಆದರೂ ಆತನಲ್ಲಿದ್ದ ಆತ್ಮ ಸಂಯಮ ಅವನಲ್ಲಿದ್ದ ದುರ್ಗುಣಗಳನ್ನು ಮೀರಿಸುವಂತಿತ್ತು ಎಂದು ತಿಳಿಸಿದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸಿ.ದೇವರಾಜೇಗೌಡ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಹಿಂದಿ ಭಾಷೆಗೂ ಮಹತ್ವವಿದ್ದು, ಜ್ಞಾನಾರ್ಜನೆಗಾಗಿ ಕನ್ನಡದ ಜೊತೆಗೆ ಹಿಂದಿ ಹಾಗೂ ಇನ್ನಿತರೆ ಭಾಷೆಗಳನ್ನು ಕಲಿಯಬೇಕು. ದಿನೇ ದಿನೆ ಹಿಂದಿ ಕಲಿಕೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಮಹಾರಾಜ ಕಾಲೇಜಿನಲ್ಲಿ ಹಿಂದಿ ಅಧ್ಯಯನ ವಿಭಾಗ ಉಳಿಸುವ ನಿಟ್ಟಿನಲ್ಲಿ ಪ್ರಾಧ್ಯಾಪಕರು ಶ್ರಮಿಸಬೇಕು ಎಂದರು.

ಭಾಷೆಯ ಮೂಲಕ ಪ್ರತಿನಿತ್ಯದ ಸಂವಹನ ಪ್ರಕ್ರಿಯೆ ನಡೆಯಲಿದೆ. ರಾಜ್ಯದಲ್ಲಿ ಕನ್ನಡ ಭಾಷೆ ಮುಖ್ಯವಾಗಿದೆ. ದೇಶ–ವಿದೇಶಗಳಲ್ಲಿ ಸಂಚರಿಸಲು ಹಿಂದಿ, ಇಂಗ್ಲಿಷ್ ಸೇರಿದಂತೆ ಇನ್ನಿತರೆ ಭಾಷೆಗಳನ್ನು ಕಲಿಯುವ ಅಗತ್ಯತೆ ಇದೆ ಎಂದರು.

ಬಳಿಕ ಕುವೆಂಪು ಪ್ರೌಢಶಾಲೆ ಹಿಂದಿ ಸಹಶಿಕ್ಷಕ ಹೆಚ್.ಜಿ.ಯೂನಸ್ ಷರೀಫ್ 'ಜಾಗತಿಕ ಮಟ್ಟದಲ್ಲಿ ಹಿಂದಿ ಭಾಷೆಯ ಮಹತ್ವ' ಕುರಿತು ತಿಳಿಸಿಕೊಟ್ಟರು.

ಮಹಾರಾಜ ಕಾಲೇಜು ಆಡಳಿತಾಧಿಕಾರಿ ಪ್ರೊ.ಕೆ.ತಿಮ್ಮಯ್ಯ, ಹಿಂದಿ ವಿಭಾಗದ ಮುಖ್ಯಸ್ಥ ಡಾ.ಬಸವರಾಜ ಕೆ.ಬಾರಕೇರ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗದ ಪ್ರೊ.ಸಿ.ಇ. ಲೋಕೇಶ್, ಡಾ.ಎಸ್.ಗೋಪಾಲ್, ಡಾ.ಚಿ.ಚಂದ್ರಕಲಾ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.09.2025 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾ 14.09.2025ರಿಂದ 26.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ (ಆಮ್ಲ ಪಿತ್ತ) ಕುರಿತು ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ಬಂಜೆತನಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಜೆಎಸ್‌ಎಸ್ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಮತ್ತು ಅಕ್ಷರ ದಾಸೋಹ ಕೇಂದ್ರ, ಜೆಪಿ.ನಗರ :** ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳವರ ಶತೋತ್ತರ ದಶಮಾನೋತ್ಸವ (110ನೇ ಜಯಂತಿ), ಸಮ್ಮುಖ: ಹುಲಿಯೂರು ದುರ್ಗ ಶ್ರೀ ಸಿದ್ದಗಂಗಾ ಮಠದ ನಿ.ಪ್ರ.ಸ್ವ ಶ್ರೀ ಸಿದ್ದಲಿಂಗ ಶಿವಾನಂದ ಸ್ವಾಮಿಗಳು, ಅಧ್ಯಕ್ಷತೆ: ಉದ್ಯಮಿ ಎಸ್.ಪುಟ್ಟರಾಜಪ್ಪ, ನುಡಿನಮನ: ಸಂಸ್ಕೃತಿ ಚಿಂತಕ ಪೃಥ್ವಿರಾಜ್ ಹಾಲಹಳ್ಳಿ, ಸ್ಥಳ: ಕಾಲೇಜು ಸಭಾಂಗಣ, ಜೆಪಿ.ನಗರ, ಬೆಳಗ್ಗೆ 10.30ಕ್ಕೆ
- **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ:** ಬೆಳಗ್ಗೆ 9.30ಕ್ಕೆ ಶ್ರೀಮತಿ ಲಕ್ಷ್ಮೀನಾಗರಾಜು ದತ್ತಿ ಸ್ಮಾರಕ ಅಂತರ ಕಾಲೇಜು ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ, ಉದ್ಘಾಟನೆ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ವಿದುಷಿ ಎಂ.ಎಲ್.ಭಾರತಿ, ಅಧ್ಯಕ್ಷತೆ: ಎಂಎಂಕೆ, ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ.ಎನ್.ಭಾರತಿ, ಉಪಸ್ಥಿತರು: ನಳಿನಿ ಶ್ರೀಕಂಠ, ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ನಯನಕುಮಾರಿ, ಕೆ.ಎಸ್.ಸುಕೃತ; ಮಧ್ಯಾಹ್ನ 3.30ಕ್ಕೆ ಬಹುಮಾನ ವಿತರಣಾ ಸಮಾರಂಭ, ಸ್ಥಳ: ಕಾಲೇಜು ಸಭಾಂಗಣ.
- **ಗಾನಭಾರತೀ :** ವಿದ್ವಾನ್ ಟಿ.ಪಿ.ವೈದ್ಯನಾಥನ್ ಮತ್ತು ವಿದುಷಿ ಇಂದಿರಾ ವೈದ್ಯನಾಥನ್ ಸ್ಮಾರಕ ಕಾರ್ಯಕ್ರಮ, ಡಾ.ಸುಮಿತ್ರಾ ವಾಸುದೇವ್ ಅವರಿಂದ ಗಾಯನ, ವಿದುಷಿ ಸಿ.ವಿ.ಶ್ರುತಿ–ಪಿಟೀಲು, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಲಿಂಫೋಮಾ ಜಾಗೃತಿ ದಿನದ ಸಂಬಂಧವಾಗಿ ಲಿಂಫೋಮಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಗಿರೀಶ್ ಎಂ. ಎಸ್. ಅವರೊಂದಿಗೆ ಮಾತುಕತೆ ನಂತರ ಡೆಂಟಲ್ ಇಂಪ್ಲಾಂಟ್ಸ್ ಕುರಿತು ಡಾ. ಸುಮನ್ ಬಸವರಾಜು ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ– ಹೈದರಾಬಾದ್ ಸಹೋದರರಿಂದ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್


ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಅಮೃತ ಯೋಜನೆ ಕುರಿತು ಪತ್ರಕರ್ತರಾದ ಎಂ. ವಿನೋದ್ ಅವರಿಂದ ಮಾಹಿತಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಶಾಂತಿರಾವ್ – ವೀಣಾವಾದನ, 4.00 ಮಹಿಳಾರಂಗ ಸಖೀ ಸಾಹಿತ್ಯ ಮಹಿಳಾ ಬರಹಗಾರರೊಂದಿಗೆ ಮಾತುಕತೆ, ಭಾಗವಹಿಸುತ್ತಾರೆ–ಸುಜಾತ ಅಕ್ಕಿ, ಪ್ರಸ್ತುತಿ–ನೇತ್ರಾ ಕೆ., 4.30 ಪ್ರಾಯೋಜಿತ ಕಾರ್ಯಕ್ರಮ, ಆಧುನಿಕ ಕೃಷಿ ಚಾವಡಿ– ವಿಜ್ಞಾನಿಗಳಿಂದ ಕೃಷಿಕರವರೆಗೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ–ಹಲೋ ಕೃಷಿರಂಗ ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ– ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ, ಭಾಗವಹಿಸುತ್ತಾರೆ– ಬೆಂಗಳೂರಿನ ಕೆಪೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಸಿ. ಎಸ್. ಶಿವಪ್ರಕಾಶ್, ಪರಾಗ– ಬೇಸಾಯದ ಬದುಕು ಸರಾಗ, 7.45 ಏಷ್ಯಾ ಕಪ್ ಕ್ರಿಕೆಟ್ 2025ರ ಅಂಗವಾಗಿ ಭಾರತ ಹಾಗೂ ಓಮನ್ ತಂಡಗಳ ನಡುವೆ ದುಬೈನ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ 20 ಪಂದ್ಯದ ವೀಕ್ಷಕ ವಿವರಣೆ. 10.00 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

- **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಶ್ರೀ ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ದಿವಂಗತ ಎಂ.ಎಲ್.ರಾಜೇ ಅರಸ್ ಸ್ಮರಣಾರ್ಥ ಡಾ.ಎ.ಡಿ.ಶ್ರೀನಿವಾಸನ್‌ರ ಭಾವತರಂಗ ತಂಡದವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.
- **ಕಲಾಸುರುಚಿ :** ವೃಂದೆ ನಾಟಕ ಪ್ರದರ್ಶನ, ನಿರ್ದೇಶಕ : ರಾಜಶೇಖರ ಕದಂಬ, ನಿರ್ಮಾಣ : ವಿಜಯಾ ಸಿಂಧುವಳ್ಳಿ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.
- **ಮೈಸೂರು ಲಯನ್ಸ್ ಅಂಬಾಸಿಡರ್ಸ್ ಸಂಸ್ಥೆ :** ಶಿಕ್ಷಕರ ಮತ್ತು ಅಭಿಯಂತರರ ದಿನಾಚರಣೆ, ಮುಖ್ಯ ಅತಿಥಿಗಳು : ಲಯನ್ ಸಿ.ಆರ್. ದಿನೇಶ್, ಅಧ್ಯಕ್ಷತೆ : ಸಂಸ್ಥೆಯ ಅಧ್ಯಕ್ಷ ಲಯನ್ ಡಾ. ಆರ್.ಡಿ ಕುಮಾರ್, ಉಪಸ್ಥಿತರು : ಲಯನ್ ಕೆ.ಟಿ. ವಿಷ್ಣು, ಲಯನ್ ಡಾ. ಜಿ. ಕಿಶೋರ್, ಸ್ಥಳ: ರಾಜು ಕ್ಷತ್ರಿಯ ಟ್ರಸ್ಟ್‌ನ ಸಭಾಂಗಣ, ಚಾಮರಾಜಪುರಂ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಬಂಗ್ಲೆಗುಡ್ಡ ಅಸ್ಥಿಪಂಜರದ ಬಳಿ ಐಡಿ ಕಾರ್ಡ್ ಪತ್ತೆ

8 ವರ್ಷದ ಹಿಂದೆ ನಾಪತ್ತೆಯಾದ ಕೊಡಗಿನ ವ್ಯಕ್ತಿಯ ಬುರುಡೆ ಶಂಕೆ



ಯು. ಬಿ.ಅಯ್ಯಪ್ಪ

ಧರ್ಮಸ್ಥಳ, ಸೆ.18– ಧರ್ಮಸ್ಥಳ ಬಂಗ್ಲೆಗುಡ್ಡದಲ್ಲಿ ಪತ್ತೆಯಾದ ತಲೆಬುರುಡೆ ಮತ್ತು ಅಸ್ಥಿಪಂಜರ ಇದೀಗ ಹೊಸ ತಿರುವು ಪಡೆದಿದೆ. ಸ್ಥಳದಲ್ಲಿ ಸಿಕ್ಕ ಗುರುತಿನ ಚೀಟಿಯಿಂದಾಗಿ ಇದು ಎಂಟು ವರ್ಷಗಳ ಹಿಂದೆ ನಾಪತ್ತೆಯಾಗಿದ್ದ ಕೊಡಗಿನ ವ್ಯಕ್ತಿಯ ಅಸ್ಥಿಪಂಜರ ಇರಬಹುದು ಎಂದು ಶಂಕಿಸಲಾಗಿದೆ.

ಧರ್ಮಸ್ಥಳದ ಬಳಿಯ ಬಂಗ್ಲೆಗುಡ್ಡದಲ್ಲಿ ತಲೆಬುರುಡೆ ಮತ್ತು ಅಸ್ಥಿಪಂಜರ ಸಿಕ್ಕ ಸ್ಥಳದಲ್ಲಿ ಪೊಲೀಸರಿಗೆ ಒಂದು ಹಳೆಯ ಗುರುತಿನ ಚೀಟಿ ದೊರಕಿದೆ. ಆ ಗುರುತಿನ ಚೀಟಿ ಕೊಡಗು ಜಿಲ್ಲೆ, ಪೊನ್ನಂಪೇಟೆ ತಾಲೂಕಿನ ಟಿ. ಶೆಟ್ಟಿಗೇರಿ ಗ್ರಾಮದ ಯು. ಬಿ.ಅಯ್ಯಪ್ಪ ಎಂಬುವರಿಗೆ ಸೇರಿದ್ದಾಗಿದೆ.

71 ವರ್ಷ ವಯಸ್ಸಿನ ಉಳುವಂಗಡ ಅಯ್ಯಪ್ಪ ಅವರು 2017ರ ಜೂ.18ರಂದು ಬೆಳಗ್ಗೆ 6 ಗಂಟೆಗೆ ಅನಾರೋಗ್ಯ ಕಾರಣ ಮೈಸೂರು ಆಸ್ಪತ್ರೆಗೆ ತೆರಳುವುದಾಗಿ ಹೇಳಿ ಮನೆಯಿಂದ ಹೊರಟಿದ್ದರು. ಅದೇ ದಿನ ಬೆಳಗ್ಗೆ 11.55 ಗಂಟೆಗೆ ಮನೆಗೆ ಫೋನ್ ಮಾಡಿದ್ದು, ನಂತರ ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಆದರೆ ದಿನ ಕಳೆದರೂ ಅವರು ಮನೆಗೆ ಹಿಂದಿರುಗದ ಹಿನ್ನೆಲೆಯಲ್ಲಿ ಅವರ ಪುತ್ರ ಯು.ಎ. ಜೀವನ್ ಮೈಸೂರು ಆಸ್ಪತ್ರೆಗೆ ತೆರಳಿ ವಿಚಾರಿಸಿದಾಗ ಅಯ್ಯಪ್ಪ ಆಸ್ಪತ್ರೆಗೆ ಬಂದಿಲ್ಲ ಎಂಬ ಉತ್ತರ ಸಿಕ್ಕಿದೆ.

ಅಯ್ಯಪ್ಪ ಪುತ್ರ ಉಳುವಂಗಡ ಎ.ಜೀವನ್ (40) ಅವರು ಜೂ.25ರಂದು ತಂದೆ ಉಳುವಂಗಡ ಬಿ.ಅಯ್ಯಪ್ಪ ಕಾಣೆಯಾಗಿರುವ ಬಗ್ಗೆ ಶ್ರೀಮಂಗಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಉಳುವಂಗಡ ಬಿ.ಅಯಪ್ಪ ಮೈಸೂರು ಆಸ್ಪತ್ರೆಗೆ ಹೋಗುವುದಾಗಿ ಹೇಳಿ ಧರ್ಮಸ್ಥಳಕ್ಕೆ ತೆರಳಿದ್ದರೆ? ಅವರು ಧರ್ಮಸ್ಥಳದಲ್ಲಿ ಅನಾಥರಂತೆ ಮೃತಪಟ್ಟರೇ? ಎಂಬ ಪ್ರಶ್ನೆಗಳು ಹುಟ್ಟಿಕೊಂಡಿವೆ. ಬಂಗ್ಲೆಗುಡ್ಡೆಯಲ್ಲಿ ಪತ್ತೆಯಾದ ವ್ಯಕ್ತಿಗಳ ಕಳೇಬರಗಳ ಪೈಕಿ ಉಳುವಂಗಡ ಅಯ್ಯಪ್ಪ ಅವರ ಅಸ್ಥಿ ಪಂಜರ ಇದೆಯೇ? ಎಂಬ ಪ್ರಶ್ನೆಗೆ ಡಿಎನ್ಎ ಪರೀಕ್ಷೆ ಮೂಲಕ ಎಸ್ಐಟಿ ತಂಡವೇ ಉತ್ತರ ಹುಡುಕಬೇಕಿದೆ.

ಈಗ ಸಿಕ್ಕಿರುವ ಗುರುತಿನ ಚೀಟಿ ಮತ್ತು ಸ್ಥಳದಲ್ಲಿ ಪತ್ತೆಯಾದ ಅಸ್ಥಿಪಂಜರ, ನಾಪತ್ತೆಯಾಗಿದ್ದ ಅಯ್ಯಪ್ಪ ಅವರದ್ದೇ ಇರಬಹುದು ಎಂಬ ಬಲವಾದ ಅನುಮಾನ ಮೂಡಿಸಿದೆ. ಪೊಲೀಸರು ಅಸ್ಥಿಪಂಜರವನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿದ್ದು, ಗುರುತಿನ ಚೀಟಿ ಮತ್ತು ಅಸ್ಥಿಪಂಜರದ ಡಿಎನ್ಎ ಪರೀಕ್ಷೆ ಮೂಲಕ ಇದನ್ನು ಖಚಿತಪಡಿಸಿಕೊಳ್ಳಲು ಎಸ್ಐಟಿ ಅಧಿಕಾರಿಗಳ ತಂಡ ಶ್ರೀಮಂಗಲ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ಯು.ಬಿ.ಅಯ್ಯಪ್ಪ ಅವರ ನಾಪತ್ತೆ ಪ್ರಕರಣದ ದಾಖಲಾತಿ ನೀಡುವಂತೆ ತಿಳಿಸಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಎರಡು ದಿನಗಳ ಕಾರ್ಯಾಚರಣೆಯಲ್ಲಿ 7 ತಲೆಬುರುಡೆ ಪತ್ತೆ: ಬಂಗ್ಲೆಗುಡ್ಡದಲ್ಲಿ ಮಾನವ ತಲೆಬುರುಡೆ ಮತ್ತು ಅಸ್ಥಿಪಂಜರಗಳು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ವಿಶೇಷ ತನಿಖಾ ದಳ (ಎಸ್ಐಟಿ) ಇಂದು ಎರಡನೇ ದಿನದ ಕಾರ್ಯಾಚರಣೆಯನ್ನು ಮುಗಿಸಿದೆ. ಒಟ್ಟು ಏಳು ತಲೆಬುರುಡೆಗಳು ಮತ್ತು ಅಸ್ಥಿಪಂಜರಗಳನ್ನು ವಶಕ್ಕೆ ಪಡೆದಿರುವ ಎಸ್ಐಟಿ ತಂಡ, ಈ ಭಾಗದಲ್ಲಿ ಶೋಧ ಕಾರ್ಯವನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಬೆಳಿಗ್ಗೆಯಿಂದ ಬಂಗ್ಲೆಗುಡ್ಡಕ್ಕೆ ಆಗಮಿಸಿದ ಎಸ್ಐಟಿ ತಂಡವು ಮೂರು ಗಂಟೆಗಳ ಕಾಲ ಶೋಧಕಾರ್ಯ ನಡೆಸಿತು. ಈ ವೇಳೆ, ಹೆಚ್ಚುವರಿಯಾಗಿ ಎರಡು ತಲೆಬುರುಡೆಗಳು ಮತ್ತು ಮಾನವ ಅಸ್ಥಿಪಂಜರಗಳು ಪತ್ತೆಯಾಗಿವೆ. ತಂಡವು ಅವಶೇಷಗಳನ್ನು ಪ್ಲಾಸ್ಟಿಕ್ ಡಬ್ಬ ಮತ್ತು ಪೈಪ್‌ಗಳಲ್ಲಿ ತುಂಬಿಸಿಕೊಂಡು ಕೊಂಡೊಯ್ದಿದೆ. ಅಲ್ಲದೆ, ಸ್ಥಳದಲ್ಲಿ ಸಿಕ್ಕಿದ ಕೆಲವು ವಸ್ತುಗಳನ್ನು, ಒಂದು ವಾಕಿಂಗ್ ಸ್ಟಿಕ್ ಅನ್ನು ಸಹ ವಶಪಡಿಸಿಕೊಂಡಿದೆ. ಈ ವಸ್ತುಗಳು ಪ್ರಕರಣದ ತನಿಖೆಗೆ ಮಹತ್ವದ ಸುಳಿವು ನೀಡುವ ಸಾಧ್ಯತೆ ಇದೆ.

ಕಾರ್ಯಾಚರಣೆ ಅಂತ್ಯ: ಕಳೆದ ಎರಡು ದಿನಗಳಿಂದ ನಡೆಯುತ್ತಿದ್ದ ಶೋಧ ಕಾರ್ಯದಲ್ಲಿ ಒಟ್ಟು ಏಳು ಮಾನವ ತಲೆಬುರುಡೆಗಳು ಮತ್ತು ಅಸ್ಥಿಪಂಜರಗಳು ಪತ್ತೆಯಾಗಿವೆ. ಮೊದಲ ದಿನ 5 ತಲೆಬುರುಡೆಗಳು ಸಿಕ್ಕಿದ್ದವು, ಇಂದು 2 ತಲೆಬುರುಡೆಗಳು ಸಿಕ್ಕಿವೆ. ತನಿಖೆ ಮುಕ್ತಾಯಗೊಳಿಸಿದ ಎಸ್ಐಟಿ ತಂಡವು ಎಸ್ಐಟಿ ಕಚೇರಿಯತ್ತ ತೆರಳಿದ್ದು, ಮುಂದಿನ ಹಂತದ ತನಿಖೆ ಪ್ರಾರಂಭಿಸಲಿದೆ. ಈ ಮಾನವ ಅಸ್ಥಿಪಂಜರಗಳು ಯಾರಿಗೆ ಸೇರಿದ್ದು, ಅವು ಇಲ್ಲಿಗೆ ಹೇಗೆ ಬಂದವು ಎಂಬ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಇದು ಕೊಲೆಯೋ ಅಥವಾ ಅಕ್ರಮ ಚಟುವಟಿಕೆಗಳ ಭಾಗವೋ ಎಂಬುದನ್ನು ವಿಧಿವಿಜ್ಞಾನ ವರದಿಗಳು ಸ್ಪಷ್ಟಪಡಿಸಲಿವೆ.

ದಸರಾ ಉತ್ಸವದ ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯ ಶೀಘ್ರ ಪೂರೈಸಲು ಸೂಚನೆ

ಸ್ಥಳ ಪರಿಶೀಲಿಸಿದ ಪಾಲಿಕೆ ಆಯುಕ್ತರು



ದಸರಾ ಉತ್ಸವದ ಹಿನ್ನೆಲೆಯಲ್ಲಿ ರಿಂಗ್ ರಸ್ತೆಯಲ್ಲಿ ನಡೆಸಲಾಗುತ್ತಿರುವ ಸ್ವಚ್ಛತಾ ಕಾರ್ಯವನ್ನು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಪರಿಶೀಲಿಸಿದರು.

ಮೈಸೂರು, ಸೆ.18(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ವಿವಿಧೆಡೆಯಿಂದ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ರಿಂಗ್ ರಸ್ತೆಯ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದು, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ರಿಂಗ್ ರಸ್ತೆಯಲ್ಲಿ ಪರಿಶೀಲಿಸಿ ಕಾರ್ಯ ಚುರುಕುಗೊಳಿಸುವಂತೆ ಸಲಹೆ ನೀಡಿದರು.

ಮೈಸೂರಿನ ರಿಂಗ್ ರಸ್ತೆಯುದ್ದಕ್ಕೂ ಬಾಕಿಯಿರುವ ಸ್ವಚ್ಛತಾ ಕಾರ್ಯವನ್ನು ಶೀಘ್ರ ಮುಗಿಸಬೇಕು. ದಸರಾ ಉದ್ಘಾಟನೆಗೆ ಕೇವಲ ನಾಲ್ಕು ದಿನ ಮಾತ್ರವಿದ್ದು, ಅಷ್ಟರೊಳಗೆ ಸ್ವಚ್ಛತಾ ಕಾರ್ಯ ಸಂಪೂರ್ಣಗೊಳಿಸುವಂತೆ ಸೂಚಿಸಿದರು. ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೂ ವಿವಿಧೆಡೆ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಪಾಲಿಕೆಯ ವಲಯ ಕಚೇರಿ 5–ರ ಸಹಾಯಕ ಆಯುಕ್ತ ವೆಂಕಟರಾಮ್, ವಲಯ ಕಚೇರಿ 8–ರ ಸಹಾಯಕ ಆಯುಕ್ತ ಸೋಮಶೇಖರ್, ವಲಯ ಕಚೇರಿ 9–ರ ಸಹಾಯಕ ಆಯುಕ್ತ ಧನುಷ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಮಧುಕರ್, ಮೃತ್ಯುಂಜಯ, ಪರಿಸರ ಅಭಿಯಂತರರಾದ ನವೀನ್, ಚಿನ್ಮಯ್, ಲೋಕೇಶ್ವರಿ, ಕೃಷ್ಣಮೂರ್ತಿ ಹಾಗೂ ಆರೋಗ್ಯ ನಿರೀಕ್ಷಕರು ಮತ್ತು ಸಿಬ್ಬಂದಿ ಹಾಜರಿದ್ದರು.

ರಸ್ತೆ ವಿಭಜಕ ಸ್ವಚ್ಛತೆ

ರಿಂಗ್ ರಸ್ತೆಯ ರಸ್ತೆ ವಿಭಜಕದಲ್ಲಿ ಅನುಪಯುಕ್ತ ಗಿಡಗಳು ಬೆಳೆದಿದ್ದವು. ಅವುಗಳನ್ನು ತೆರವು ಮಾಡುವ ಕಾರ್ಯ ಸಾಗುತ್ತಿದೆ. ರಸ್ತೆ ಅಂಚಿನಲ್ಲಿದ್ದ ಮಣ್ಣನ್ನು ತೆರವು ಮಾಡಲಾಗುತ್ತಿದೆ. ರಿಂಗ್ ರಸ್ತೆ ಬದಿ ಸುರಿಯಲಾಗಿದ್ದ ಕಟ್ಟಡ ತ್ಯಾಜ್ಯ ತೆರವು ಪ್ರಕ್ರಿಯೆ ಶೇ.60ರಷ್ಟು ಮುಗಿದಿದ್ದು, ಉಳಿದ ತ್ಯಾಜ್ಯ ತೆರವಿಗೆ ಸೂಚನೆ ನೀಡಲಾಗಿದೆ. ದಸರಾ ವೇಳೆ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮುಜುಗರವಾಗದಂತೆ ನೋಡಿಕೊಳ್ಳುವುದಕ್ಕಾಗಿ ರಿಂಗ್ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ.

– ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ

ರೈತರ ಸಾಲ ಮನ್ನಾ ಮಾಡಿ

ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ ಆಗ್ರಹ




ಸಿ.ಚಂದನ್‌ಗೌಡ

ಮೈಸೂರು,ಸೆ.18(ಪಿಎಂ)– ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಪರಿಣಾಮ ಬೆಳೆಗಳಿಗೆ ರೋಗ, ಕೀಟ ಬಾಧೆ ತಗುಲಿದ ಹಿನ್ನೆಲೆಯಲ್ಲಿ ಅನ್ನದಾತರ ಪರಿಸ್ಥಿತಿ ಸಂಕಷ್ಟದಲ್ಲಿದ್ದು, ಕೃಷಿ ಮತ್ತು ಕಂದಾಯ ಇಲಾಖೆ ಜಂಟಿ ಸಮೀಕ್ಷೆ ಮಾಹಿತಿಯಂತೆ ರಾಜ್ಯದಲ್ಲಿ ಸುಮಾರು 5 ಲಕ್ಷ ಎಕ್ಟೇರ್ ಬೆಳೆ ನಷ್ಟವಾಗಿದೆ. ಕೃಷಿ ಕ್ಷೇತ್ರದ ಇಂತಹ ಬಿಕ್ಕಟ್ಟು ನಿವಾರಿಸಲು ರೈತರ ಸಾಲ ಮನ್ನಾ ಮಾಡಬೇಕೆಂದು ಸರ್ಕಾರಕ್ಕೆ ಎಂದು ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಆಗ್ರಹಿಸಿದ್ದಾರೆ.

ಬೆಳೆ ನಷ್ಟದಿಂದ ರೈತರ ಬದುಕು ದೌರ್ಭಾಗ್ಯದಿಂದ ಕೂಡಿದ್ದು, ಸಾಲಮನ್ನಾ ಸೌಭಾಗ್ಯಕ್ಕಾಗಿ ಕಾದು ಕುಳಿತಿರುವ ಪರಿಸ್ಥಿತಿ ಬಂದೊದಗಿದೆ. ರಾಜ್ಯದ ಕೃಷಿ ಕ್ಷೇತ್ರದಲ್ಲಿ ಅಪಾರ ನಷ್ಟವಾಗಿದೆ. ರೈತರ ವಾರ್ಷಿಕ ವರಮಾನ ಇಂದಿಗೂ 60,000 ಇಲ್ಲದ ದುಸ್ಥಿತಿ ಅವಲೋಕಿಸಿ ಮುಖ್ಯಮಂತ್ರಿಗಳು ಪಂಚಭಾಗ್ಯಗಳೊಂದಿಗೆ 6ನೇ ಭಾಗ್ಯವಾಗಿ ರೈತರ ಕೃಷಿ ಸಾಲ ಮನ್ನಾ ಮಾಡಬೇಕು. ಮಳೆಯಿಂದ ರಾಜ್ಯದ ಹಲವೆಡೆ ಅನೇಕ ರೈತರ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿನ ಆಹಾರ ಸಾಮಗ್ರಿಗಳು ನೀರು ಪಾಲಾಗಿವೆ. ರೈತರ ಜಮಿನುಗಳಿಗೆ ಹೋಗುವ ರಸ್ತೆಗಳು, ಗ್ರಾಮಗಳಿಗೆ ತೆರಳುವ ರಸ್ತೆ ಗಳು, ಮುಖ್ಯರಸ್ತೆಗಳು ಹಾನಿಯಾಗಿವೆ. ಕೂಡಲೆ ಈ ಎಲ್ಲದರ ಬಗ್ಗೆ ಸರ್ಕಾರ ಗಮನಹರಿಸಬೇಕು.

ಅತಿವೃಷ್ಟಿ ಪೀಡಿತ ಪ್ರದೇಶಗಳ ಜಂಟಿ ಸಮೀಕ್ಷೆ ಮುಗಿಯುತ್ತಿದ್ದಂತೆ, ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಬೆಳೆ ಹಾನಿಗೆ ಸಮರ್ಪಕವಾಗಿ ಪರಿಹಾರ ತಲುಪಿಸಬೇಕು. ಮಾನವ–ಜಾನುವಾರು ಜೀವ ಹಾನಿಗಳಿಗೆ ಶೇ.100ರಷ್ಟು ಪರಿಹಾರ ಒದಗಿಸಿರುವ ರೀತಿಯಲ್ಲೇ ಬೆಳೆ ಹಾನಿಗೂ ಒದಗಿಸಬೇಕೆಂದು ಈಗಾಗಲೇ ಸಿಎಂ ಸೂಚಿಸಿದ್ದಾರೆ. ಸಂಕಷ್ಟದಲ್ಲಿರುವ ರಾಜ್ಯದ ರೈತರ ನೆರವಿಗೆ ಕೂಡಲೇ ಧಾವಿಸಬೇಕು ಎಂದು ಅವರು ತಿಳಿಸಿದ್ದಾರೆ.

ಮೈಸೂರಿನ ಡಾ.ವಿಷ್ಣುವರ್ಧನ್ ಸ್ಮಾರಕದ ಬಳಿ ಅಭಿಮಾನಿಗಳೊಂದಿಗೆ ವಿಷ್ಣು ಕುಟುಂಬದ ಸಂಭ್ರಮ



ಮೈಸೂರಿನ ಉದ್ಬೂರು ಗೇಟ್ ಬಳಿಯ ಡಾ.ವಿಷ್ಣುವರ್ಧನ್ ಸ್ಮಾರಕಕ್ಕೆ ಅವರ ಕುಟುಂಬದವರು ಪೂಜೆ ಸಲ್ಲಿಸಿದರು.

ಮೈಸೂರು, ಸೆ.18– ದಿವಂಗತ ಡಾ. ವಿಷ್ಣುವರ್ಧನ್ ಅವರ 75ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ಉದ್ಬೂರ್ ಗೇಟ್ ಬಳಿ ಇರುವ ವಿಷ್ಣುವರ್ಧನ್ ಸ್ಮಾರಕದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಸಾವಿರಾರು ಅಭಿಮಾನಿಗಳೊಂದಿಗೆ ವಿಷ್ಣುವರ್ಧನ್ ಕುಟುಂಬದವರೂ ಸ್ಮಾರಕಕ್ಕೆ ಪೂಜೆ ಸಲ್ಲಿಸಿದರು.

ವಿಷ್ಣುವರ್ಧನ್ ಪತ್ನಿ ಭಾರತಿ ವಿಷ್ಣುವರ್ಧನ್, ಪುತ್ರಿ ಕೀರ್ತಿ, ಅಳಿಯ ಅನಿರುದ್ಧ, ಮೊಮ್ಮಗ ಶ್ರೇಷ್ಠವರ್ಧನ್ ಸೇರಿದಂತೆ ಅವರ ಕುಟುಂಬದವರನ್ನು ವಿಷ್ಣುವರ್ಧನ್ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿ, ಸ್ಮಾರಕದ ಬಳಿ ಕರೆದೊಯ್ದರು.

ಸ್ಮಾರಕಕ್ಕೆ ಪೂಜೆ ಸಲ್ಲಿಸಿದ ಬಳಿಕ ಭಾರತಿ ವಿಷ್ಣುವರ್ಧನ್ ಮಾತನಾಡಿ, ವಿಷ್ಣುವರ್ಧನ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಣೆ ಮಾಡಿದ್ದಕ್ಕೆ ರಾಜ್ಯ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇನೆ. ಇದು ಅಭಿಮಾನಿಗಳಿಗೂ ಸಂದ ಗೌರವ. ನಿಮ್ಮ ಪ್ರೀತಿ ವಿಶ್ವಾಸ ಹೀಗೆ ಇರಲಿ, ಎಲ್ಲರೂ ನಮ್ಮವರೇ ಎಂದು ಮುನ್ನಡೆಯೋಣ ಎಂದರು.

ನಟ ಅನಿರುದ್ಧ ಮಾತನಾಡಿ, ಯಜಮಾನರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ದೊರೆತಿರುವ ಸಂತೋಷವನ್ನು ಮಾತುಗಳಲ್ಲಿ ಹೇಳುವುದು ಕಷ್ಟವಾಗುತ್ತಿದೆ. ಸರ್ಕಾರಕ್ಕೆ ಧನ್ಯವಾದ ಹೇಳುತ್ತೇನೆ. ಇದು ವಿಷ್ಣುವರ್ಧನ್ ಅವರ ಅರ್ಹತೆ ಹಾಗೂ ಘನತೆಗೆ ದಕ್ಕಿರುವ ಪ್ರಶಸ್ತಿ ಹಾಗೂ ಅಭಿಮಾನಿಗಳ ಗೆಲುವು. ಬೆಂಗಳೂರಿನಲ್ಲಿ ಅಭಿಮಾನ್ ಸ್ಟುಡಿಯೋ ಜಾಗದಲ್ಲಿ 10 ಗುಂಟೆ ಕೇಳಿದ್ದೇವೆ. ಅಲ್ಲಿದ್ದ ಮಂಟಪ ಕಟ್ಟಿಸಿದ್ದು ಭಾರತಿ ಅಮ್ಮ. ಇತ್ತೀಚೆಗೆ ಅಲ್ಲಿ ಮಂಟಪ ತೆರವುಗೊಳಿಸಿದ್ದು ಒಂದು ದುರ್ಘಟನೆ. ಈಗ ಸರ್ಕಾರ ಆ ಜಾಗ ವಶಪಡಿಸಿಕೊಂಡಿದೆ. ಅಭಿಮಾನಿಗಳು ಬಂದು ಪೂಜೆ ಸಲ್ಲಿಸಲು ಜಾಗ ಕೊಡಿ. ಮಂಟಪ ನಾವೇ ಕಟ್ಟಿಸುತ್ತೇವೆ ಎಂದು ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ತಿಳಿಸಿದರು.

ಅಭಿಮಾನಿಗಳು ಅಂತ ಮುಖವಾಡ ಹಾಕಿಕೊಂಡು ಕೆಲವರು ಕುಟುಂಬದ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಹೀಗಾಗಿ ಪೊಲೀಸರಿಗೆ ದೂರು ಕೊಟ್ಟಿದ್ದೇವೆ. ನಮ್ಮ ಕುಟುಂಬದ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಕಾನೂನು ಕ್ರಮ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು.

ರಕ್ತದಾನ ಮಾಡಿದ ಅಭಿಮಾನಿಗಳು: ಡಾ.ವಿಷ್ಣುವರ್ಧನ್ ಸ್ಮಾರಕದ ಬಳಿ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದಲ್ಲಿ 75ಕ್ಕೂ ಹೆಚ್ಚು ಅಭಿಮಾನಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಇದೇ ವೇಳೆ ಕಲಾವಿದ ವಿಜಯ್, ಅಭಿಮಾನಿಗಳ ಕೆನ್ನೆ ಹಾಗೂ ಕೈಗೆ ವಿಷ್ಣುವರ್ಧನ್ ನಟನೆಯ ಚಿತ್ರಗಳ ಹೆಸರನ್ನು ಬರೆದರು. ಅಭಿಮಾನಿಗಳಿಗೆ ಹೋಳಿಗೆ ಊಟ, ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು ಎಪಿಎಂಸಿಯಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪನೆ

- ದಾಸನಪುರ, ಕೋಲಾರದಲ್ಲೂ ತಲಾ 50 ಟಿಪಿಡಿ ಘಟಕ ನಿರ್ಮಾಣ
- ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಘೋಷಣೆ



ಶಿವಾನಂದ ಪಾಟೀಲ್

ಬೆಂಗಳೂರು, ಸೆ.18(ಕೆಎಂಶಿ)– ಬೆಂಗಳೂರಿನ ದಾಸನಪುರ, ಕೋಲಾರ ಮತ್ತು ಮೈಸೂರು ಎಪಿಎಂಸಿಗಳಲ್ಲಿ ತಲಾ 50 ಟಿಪಿಡಿ ಬಯೋ ಸಿಎನ್‌ಜಿ ಪ್ಲಾಂಟ್ ನಿರ್ಮಿಸಲಾಗುವುದು ಎಂದು ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ.

ಎಪಿಎಂಸಿಗಳಲ್ಲಿ ಪ್ರತಿ ದಿನ ಸಂಗ್ರಹವಾಗುವ ತ್ಯಾಜ್ಯದಿಂದ ಪ್ರಕೃತಿ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದ್ದು, ಶೂನ್ಯ ತ್ಯಾಜ್ಯ ಮಾರುಕಟ್ಟೆಗಳಾಗಿ ಪರಿವರ್ತಿಸಲು ತ್ಯಾಜ್ಯದಿಂದ ಬಯೋ ಸಿಎನ್‌ಜಿ ಉತ್ಪಾದನೆಗೆ ಯೋಜನೆ ರೂಪಿಸಲಾಗಿದೆ.

ಮೂರು ಎಪಿಎಂಸಿಗಳಲ್ಲಿ ಪ್ರತಿದಿನ 20ರಿಂದ 30 ಟನ್ ಘನ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪನೆಯಿಂದ ಎಪಿಎಂಸಿಗಳಲ್ಲಿ ಸ್ವಚ್ಛತೆ ಅಲ್ಲದೆ, ತ್ಯಾಜ್ಯ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ.

ತಲಾ 24.96 ಕೋಟಿ ರೂ. ವೆಚ್ಚದಲ್ಲಿ ಮೂರು ಎಪಿಎಂಸಿಗಳಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ನಿರ್ಮಾಣ ಯೋಜನೆಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದರು.

ಇತರ ಕೆಲವು ಎಪಿಎಂಸಿಗಳಲ್ಲೂ ಬಯೋ ಸಿಎನ್‌ಜಿ ಪ್ಲಾಂಟ್ ನಿರ್ಮಾಣದ ಉದ್ದೇಶ ಹೊಂದಿದ್ದು, ತ್ಯಾಜ್ಯ ಪ್ರಮಾಣ ಕಡಿಮೆ ಇರುವ ಹಾಗೂ ನಗರಸಭೆ, ನಗರಪಾಲಿಕೆ ವ್ಯಾಪ್ತಿಯ ತ್ಯಾಜ್ಯ ಮಿಶ್ರಿತವಾಗುತ್ತಿದ್ದು, ಗುಣಮಟ್ಟ ಖಾತರಿ ಇಲ್ಲದ ಕಾರಣ ಸದ್ಯಕ್ಕೆ ಕನಿಷ್ಠ 20ರಿಂದ 30 ಟನ್ ತ್ಯಾಜ್ಯ ಉತ್ಪಾದನೆಯ ಎಪಿಎಂಸಿಗಳಲ್ಲಿ ಮಾತ್ರ ಯೋಜನೆ ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ ಎಂದರು.

ಇಂದಿನಿಂದ ಸೆ.21ರವರೆಗೆ ಶ್ರೀಕೃಷ್ಣ ಗಾನಸಭಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ



ಶ್ರೀನಿವಾಸನ್



ನಾಗಲಕ್ಷ್ಮಿ



ಮನಮೋಹನ್

ಮೈಸೂರು,ಸೆ.18(ಪಿಎಂ)– ಮೈಸೂರಿನ ಗೋಕುಲಂನ ಶ್ರೀಕೃಷ್ಣ ಗಾನಸಭಾದ ಆಳ್ವಾರ್ ಕಲಾ ಭವನದಲ್ಲಿ ಸೆ.19ರಿಂದ 21ರವರೆಗೆ ಮೂರು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಪ್ಪಡಿ ಹಾಗೂ ಮಳವಳಿ ಮಠಗಳ ಸ್ವಾಮೀಜಿಯವರಾದ ಎಂ.ಎಲ್.ರಾಜೇ ಅರಸ್ ಅವರ ಸ್ಮರಣಾರ್ಥ ಶ್ರೀಗಳ ಪುತ್ರಿ ಡಾ.ಎಂ.ಆರ್.ಭಾರತಿ ಅವರ ಪ್ರಾಯೋಜಕತ್ವದಲ್ಲಿ ಸೆ.19ರಂದು ಸಂಜೆ 6ಕ್ಕೆ ಲಘು ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಎ.ಡಿ.ಶ್ರೀನಿವಾಸನ್ ಮತ್ತು ತಂಡದ ವತಿಯಿಂದ ಸದರಿ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಸೆ.20ರಂದು ಸಂಜೆ 6.30ಕ್ಕೆ ಡಾ.ನಾಗಲಕ್ಷ್ಮಿ ನಾಗರಾಜನ್ ಮತ್ತು ಅವರ ಶಿಷ್ಯವೃಂದದ ವತಿಯಿಂದ ನೃತ್ಯ ಪ್ರದರ್ಶನ ನಡೆಯಲಿದೆ. ಸದರಿ ಕಾರ್ಯಕ್ರಮವನ್ನು ಪ್ರೊ.ವೈ.ಟಿ.ತಾತಾಚಾರಿ ಅವರ ಸ್ಮರಣಾರ್ಥ ಅವರ ಪತ್ನಿ ಮಾಧುರಿ ತಾತಾಚಾರಿ ಪ್ರಾಯೋಜಿಸಿದ್ದಾರೆ. ಸೆ.21ರಂದು ಸಂಜೆ 6ಕ್ಕೆ ಗಾನ ವಿಶಾರದ ವಿದ್ವಾನ್ ಬಿಡಾರಂ ಕೃಷ್ಣಪ್ಪ ಅವರ ಸ್ಮಾರಕ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ. ವಿದ್ವಾನ್ ಜಿ.ಕೆ.ಮನಮೋಹನ್ ಅವರು ಗಾಯನ ಸಾದರಪಡಿಸಲಿದ್ದು, ಪಕ್ಕವಾದ್ಯದಲ್ಲಿ ವಿದುಷಿ ಸಿ.ವಿ.ಶ್ರುತಿ (ಪಿಟೀಲು), ವಿದುಷಿ ರಂಜನಿ ವೆಂಕಟೇಶ್ (ಮೃದಂಗ) ಮತ್ತು ವಿದ್ವಾನ್ ಎಸ್.ಮಂಜುನಾಥ್ (ಘಟಂ) ಸಹಕಾರ ನೀಡಲಿದ್ದಾರೆ. ಈ ಸಂಗೀತ ಕಛೇರಿಯನ್ನು ಆದಿತ್ಯ ಆಸ್ಪತ್ರೆಯ ಡಾ.ಎಸ್. ಚಂದ್ರಶೇಖರ್ ಪ್ರಾಯೋಜಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸೆ.22ರಿಂದ 'ನಂದಿನಿ' ಉತ್ಪನ್ನಗಳ ದರ ಇಳಿಕೆ

ಇಂದು ಕೆಎಂಎಫ್ ಅಧಿಕಾರಿಗಳ ಸಭೆಯಲ್ಲಿ ಅಂತಿಮ ನಿರ್ಧಾರ

ಬೆಂಗಳೂರು, ಸೆ.18– ಆಹಾರ ಉತ್ಪನ್ನಗಳ ಮೇಲಿನ ಜಿಎಸ್‌ಟಿಯನ್ನು ಶೇ.12ರಿಂದ 5ಕ್ಕೆ ಇಳಿಕೆ ಮಾಡಿರುವ ಪರಿಣಾಮ ಸೆ.22ರಿಂದ ಮೊಸರು, ತುಪ್ಪ, ಬೆಣ್ಣೆ, ಲಸ್ಸಿ ಸೇರಿದಂತೆ 'ನಂದಿನಿ'ಯ ವಿವಿಧ ಉತ್ಪನ್ನಗಳ ದರ ಶೇ.7ರಷ್ಟು ಕಡಿಮೆಯಾಗಲಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಕೇಂದ್ರ ಸರ್ಕಾರದ ಸೂಚನೆಯಂತೆ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ(ಕೆಎಂಎಫ್) ಜಿಎಸ್‌ಟಿ ಕಡಿಮೆ ಮಾಡಲು ಮುಂದಾಗಿದ್ದು, ಶುಕ್ರವಾರ ಕೆಎಂಎಫ್‌ನ ಹಿರಿಯ ಅಧಿಕಾರಿಗಳ ಸಭೆ ನಿಗಧಿಯಾಗಿದೆ. ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಂಡ ನಂತರ ಸೋಮವಾರದಿಂದಲೇ ಪರಿಷ್ಕೃತ ದರ ಜಾರಿ ಗೊಳಿಸುವಂತೆ ಮಾರಾಟಗಾರರಿಗೆ ಸೂಚಿಸುವ ಸಾಧ್ಯತೆ ಇದೆ. ಮೊಸರಿನ ದರ ಲೀಟರ್‌ಗೆ 4 ರೂ.ವರೆಗೆ ಹಾಗೂ ಇತರೆ ಉತ್ಪನ್ನಗಳ ಬೆಲೆಯೂ ಕಡಿಮೆ ಆಗಲಿದೆ.

2017ರಲ್ಲಿ ಹಾಲಿನ ಉತ್ಪನ್ನಗಳ ಮೇಲೆ ಜಿಎಸ್‌ಟಿ ಜಾರಿಗೊಳಿಸಿ, 2022ರಲ್ಲಿ ಜಿಎಸ್‌ಟಿಯನ್ನು ಶೇ.12ಕ್ಕೆ ಹೆಚ್ಚಿಸಲಾಗಿತ್ತು. ಈಗ ತೆರಿಗೆ ದರ ಕಡಿಮೆ ಮಾಡಿರುವುದರಿಂದ ಗ್ರಾಹಕರಿಗೆ ಸ್ವಲ್ಪಮಟ್ಟಿಗೆ ಹೊರೆ ಕಡಿಮೆಯಾಗಲಿದೆ.

ಬೆಂಗಳೂರು ಈಗ 'ಗುಂಡಿಯೂರು'; ಸರ್ಕಾರದ ವಿರುದ್ಧ ಕೇಂದ್ರ ಸಚಿವ ಹೆಚ್‌ಡಿಕೆ ವಾಗ್ದಾಳಿ



ಬೆಂಗಳೂರು, ಸೆ.18(ಕೆಎಂಶಿ)– ನಾಡಪ್ರಭು ಕೆಂಪೇಗೌಡರು ಕಟ್ಟಿದ ಹೆಮ್ಮೆಯ ಬೆಂಗಳೂರು ಗುಂಡಿಯೂರು ಎಂಬ ಕುಖ್ಯಾತಿ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಕಾರಣ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ನಗರಕ್ಕೆ ಕುಖ್ಯಾತಿ ತಂದ ಅಪಮಾನಕ್ಕೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಹೊಣೆಗಾರರು, ಬೆಂಗಳೂರು ಅಲ್ಲದೆ, ಇಡೀ ಕರ್ನಾಟಕ ಅದಕ್ಷ ಹಾಗೂ ಭ್ರಷ್ಟರ ಕೈಯ್ಯಲ್ಲಿ ಸಿಕ್ಕಿ ನರಳುತ್ತಿದೆ ಎಂದಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳು ಭರವಸೆ ಕಳೆದುಕೊಂಡು ನೆರೆ ರಾಜ್ಯಗಳತ್ತ ವಲಸೆ ಹೋಗುತ್ತಿವೆ. ಭಂಡ ಸರ್ಕಾರದ ಪಂಚೇಂದ್ರಿಯಗಳು ನಿಷ್ಕ್ರಿಯವಾಗಿವೆ. ಕಂಪನಿಗಳು ಬೆಂಗಳೂರು ಬಿಡುವುದು ಬೇಡ. ಎಲ್ಲರೂ ಸೇರಿ ಎಮ್ಮೆ ಚರ್ಮದ ಸರ್ಕಾರಕ್ಕೆ ಪಾಠ ಕಲಿಸೋಣ. ನಿಮ್ಮ ಜತೆ ನಾವು ಮತ್ತು ಕರ್ನಾಟಕದ ಜನತೆ ಇದ್ದೇವೆ.

ಅಂಗೈ ಹುಣ್ಣಿಗೆ ಕನ್ನಡಿ ಬೇಕಿಲ್ಲ. ಎಳ್ಳಷ್ಟೂ ಸಂಕೋಚ, ಆತ್ಮಾಭಿಮಾನ ಇಲ್ಲದ ಸರ್ಕಾರ, ಕನ್ನಡಿಗರ ಸ್ವಾಭಿಮಾನ ಗುಂಡಿಪಾಲು ಮಾಡಿದೆ. ತೆರಿಗೆ ಹಾಕುವುದರಲ್ಲಿ ರಾಕೆಟ್ ವೇಗದ ಸರ್ಕಾರಕ್ಕೆ ಗುಂಡಿ ಮುಚ್ಚುವುದರಲ್ಲಿ ಆಮೆ ವೇಗವೂ ಇಲ್ಲ. ಕೊಳ್ಳೆ ಹೊಡೆಯುವುದರಲ್ಲಿ ಉನ್ಮಾದ, ಅಭಿವೃದ್ಧಿಯತ್ತ ತೀವ್ರ ಉಪೇಕ್ಷೆ, ಗ್ಯಾರಂಟಿಗಳಿಗಾಗಿ ರಾಜ್ಯದ ಅಭಿವೃದ್ಧಿ ಬಲಿಯಾಗಿ ಗ್ರೇಟರ್ ಬೆಂಗಳೂರು ಗಬ್ಬೆದ್ದು ನಾರುತ್ತಿದೆ.

ಗುಂಡಿ ಮುಚ್ಚುವುದಕ್ಕೆ ಬಿಡಿಗಾಸಿಲ್ಲದ ಸರ್ಕಾರ ಜನರಿಂದ ಕಿತ್ತುಕೊಳ್ಳುತ್ತಿರುವ ತೆರಿಗೆ ಹಣ ಏನು ಮಾಡುತ್ತಿದೆ. ಯಾರ ಕಿಸೆ ಸೇರುತ್ತಿದೆ ಎಂಬುದಕ್ಕೆ ಉತ್ತರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

'ವೈದ್ಯ ಸೇವಾ ರತ್ನ' ಪ್ರಶಸ್ತಿ



ಬೆಂಗಳೂರಿನಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ 2025ನೇ ಸಾಲಿನ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಸೂರಿನ ಚರ್ಮರೋಗ ತಜ್ಞೆ ಡಾ.ಎನ್.ಶ್ರೀಲಕ್ಷ್ಮೀ ಅವರಿಗೆ 'ವೈದ್ಯ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಯಿತು. ಸಮಾರಂಭದಲ್ಲಿ ಶ್ರೀ ಮಹಲಿಂಗ ಸ್ವಾಮೀಜಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥ್‌ನಾರಾಯಣ್, ಸಂಸದ ಡಾ.ಸಿ.ಎನ್.ಮಂಜುನಾಥ್, ಮನೋವೈದ್ಯರಾದ ಡಾ.ಸಿ.ಆರ್.ಚಂದ್ರಶೇಖರ್, ಡಾ.ಅಂಜನಪ್ಪ ಮತ್ತಿತರರು ಭಾಗವಹಿಸಿದ್ದರು. ಡಾ.ಎನ್.ಶ್ರೀಲಕ್ಷ್ಮೀ ಅವರು ಜೆಎಸ್‌ಎಸ್ ಆಸ್ಪತ್ರೆ ಮತ್ತು ಸಿದ್ಧಾರ್ಥನಗರದ ರಿನೀವ್ ಸ್ಕಿನ್ ಕೇರ್ ಕ್ಲಿನಿಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವರ ಪತಿ ಡಾ.ಎಂ.ವಿ.ಆಕಾಶ್ ಅವರೂ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕುವೆಂಪುಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿಗೆ ಶಿಫಾರಸು

ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಅಭಿನಂದಿಸಿದ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು





ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಸೆ.18(ಜಿಎ)–ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರ ಭಾರತ ರತ್ನ ನೀಡುವಂತೆ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಪದಾಧಿಕಾರಿಗಳು ಭೇಟಿ ಮಾಡಿ, ಶಾಲು ಹೊದಿಸಿ, ಹಾರ ಹಾಕಿ ಕುವೆಂಪು ಅವರ ಭಾವಚಿತ್ರ ಉಡುಗೊರೆ ನೀಡುವ ಮೂಲಕ ಕೃತಜ್ಞತೆ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿಗಳು ಪದಾಧಿಕಾರಿಗಳಿಗೆ ಸಿಹಿ ಹಂಚಿ ಸಂಭ್ರಮದಲ್ಲಿ ಭಾಗಿಯಾದರು. ಈ ಸಂದರ್ಭದಲ್ಲಿ ನಾಡಿನ ಹಿರಿಯ ಸಾಹಿತಿಗಳಾದ ಸಿ.ಪಿ.ಕೃಷ್ಣಕುಮಾರ್, ಹಂಪಾ ನಾಗರಾಜಯ್ಯ, ವಿಚಾರವಾದಿ ಪ್ರೊ.ಕೆ.ಎಸ್‌ಭಗವಾನ್, ಪ್ರಸಾರಾಂಗ ವಿಶ್ರಾಂತ ನಿರ್ದೇಶಕ ಕೆ.ಟಿ.ವೀರಪ್ಪ, ಹಿರಿಯ ಕೆಎಎಸ್ ಅಧಿಕಾರಿ ಹಾಗೂ ಮಾಹಿತಿ ಹಕ್ಕು ಆಯೋಗದ ಮಾಜಿ ಆಯುಕ್ತ ಕೆ.ಎಂ.ಚಂದ್ರೇಗೌಡ, ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ವಿಶ್ವಮಾನವ ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು, ಖ್ಯಾತ ಕವಯತ್ರಿ ಲತಾ ರಾಜಶೇಖರ್, ಲಗ್ಗೆರೆ ನಗರಸಭೆ ಮಾಜಿ ಅಧ್ಯಕ್ಷ ಅಂದಾನಪ್ಪ, ಸುಯೋಗ್ ಆಸ್ಪತ್ರೆಯ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ, ಮೈಸೂರು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್, ಗಂಗಾಧರ ಗೌಡ, ಮಾಜಿ ಮೇಯರ್ ಮೋದಾಮಣಿ, ಕಾವೇರಿ ನದಿ ಸಂರಕ್ಷಣಾ ಪ್ರಧಾನ ಕಾರ್ಯದರ್ಶಿ ಟಿ.ನಂಜಪ್ಪ, ನಿವೃತ್ತ ಡಿಡಿಪಿಐ ಕೆಂಪರಾಜೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕರಿಗೆ ಅಭಿನಂದನೆ



ಜಯದೇವ ಹೃದ್ರೋಗ ಆಸ್ಪತ್ರೆ ನೂತನ ನಿರ್ದೇಶಕ ಡಾ.ಬಿ.ದಿನೇಶ್ ಅವರನ್ನು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಬಸವರಾಜು ಸಿ.ಚೆಟ್ಟಿಹುಂಡಿ ಹಾಗೂ ಸ್ನೇಹಿತರು ಅಭಿನಂದಿಸಿದರು. ಮೈಸೂರು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಶಿವಪ್ಪಕೋಟೆ, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷ ವೈ.ಕೆ.ಮಂಜುನಾಥ್, ಜಿಲ್ಲಾ ಕುರುಬರ ಸಂಘದ ನಿರ್ದೇಶಕರಾದ ದಡದಹಳ್ಳಿ ಶಿವರಾಜು, ಕಾರ್ ಮಹದೇವ, ಬೆದ್ದಲಪುರ ನಾಗರಾಜು, ಹರಪನಹಳ್ಳಿ ಚೇತನ್, ವರುಣ ಸ್ವಾಮಿ, ಮಂಡ್ಯ ಸುಮಿತ್, ಭೈರತಿ ಶಶಿ, ಡಾ. ಝಮೀರ್ ಅಹಮದ್ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : 10 ರೂ. ಇದ್ರೆ ಕೊಡಿ ಸರ್, ಗೆಳತಿಗೆ ಒಂದು ಕಾಲ್ ಮಾಡಬೇಕು.

ಗುಂಡನ ಗೆಳತಿ : ನೋಡಿ ಭಿಕ್ಷುಕ ಕೂಡ ಅವನ ಗೆಳತಿಯನ್ನು ಎಷ್ಟು ಪ್ರೀತಿ ಮಾಡ್ತಾನೆ?

ಭಿಕ್ಷುಕ : ಇಲ್ಲಾ... ಅಮ್ಮಾವ್ರೆ ಅವಳನ್ನು ಪ್ರೀತಿಸಿದ ಮೇಲೇ ನಾನು ಭಿಕ್ಷುಕನಾಗಿದ್ದು?

ಮೈಸೂರು ಮಿತ್ರ

ಶುಕ್ರವಾರ, 19 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ದುಡಿಯುವ ವಯಸ್ಸಿನಲ್ಲಿ ದುಡಿಯದ ಮಗ ಹೆತ್ತವರಿಗಷ್ಟೇ ಅಲ್ಲ ಸತ್ತರೆ ಹೊರುವ ನಾಲ್ಕು ಜನಕ್ಕೂ ಭಾರ...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು

ನಿಮ್ಮ ಪತ್ರಗಳು

ಸ್ವಾಮಿಕಾರ್ಯ... ಸ್ವಕಾರ್ಯ... ಮತ್ತು ಕೋತಿ!

ಮಾನ್ಯರೆ,

ಒತ್ತಡಗಳಿಗೆ ಮಣಿದು ಮುಡಾ ಬಿಡಿ ನಿವೇಶನಗಳನ್ನು ನಿಯಮಾವಳಿ ಮೀರಿ ಹಂಚುವ ಮೂಲಕ ಸ್ವಾಮಿಕಾರ್ಯದೊಂದಿಗೆ ಸ್ವಕಾರ್ಯವನ್ನೂ ಮಾಡಿಕೊಂಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಮಾಜಿ ಆಯುಕ್ತ ದಿನೇಶ್‌ಕುಮಾರ್ ಅವರಿಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಡ್ರಿಲ್ ಮುಂದುವರಿಸಿದ್ದಾರಂತೆ! (ಮೈಸೂರು ಮಿತ್ರ 18.09.2025)

ನಿಯಮಾವಳಿ ಮೀರಿ ಸ್ವಾಮಿಕಾರ್ಯದ ಜೊತೆಗೆ ಸ್ವಕಾರ್ಯ ಮಾಡಿಕೊಂಡ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಆಯುಕ್ತ ದಿನೇಶ್‌ಕುಮಾರರ ಕೃತ್ಯಗಳು ಹೇಗೆ ಅಪರಾಧವೋ... ಹಾಗೆಯೇ ದಿನೇಶ್‌ಕುಮಾರ್ ಅವರಿಂದ ನಿಯಮಾವಳಿ ಮೀರಿ ಕಾರ್ಯ ಮಾಡಿಸಿಕೊಂಡ ಸ್ವಾಮಿಗಳ ಕೃತ್ಯವೂ ಅಪರಾಧವೇ!

ದಿನೇಶ್‌ಕುಮಾರರಂತೆ ಈ ಸ್ವಾಮಿಗಳಿಂದ ಡ್ರಿಲ್ ಮಾಡಿಸುವವರಾರು?

ಕೋತಿ ಮತ್ತು ಅದರ ಮರಿಯನ್ನು ನೀರಿನ ತೊಟ್ಟಿಯಲ್ಲಿ ಇಟ್ಟು ನಲ್ಲಿಯಿಂದ ನೀರು ತುಂಬಿಸಿದಾಗ ತಾಯಿ ಕೋತಿಯು ತನ್ನ ಮರಿಯನ್ನು ಎತ್ತಿ ಹಿಡಿದು ಕಾಪಾಡಲು ಯತ್ನಿಸಿತು. ತಾನೇ ಮುಳುಗಿ ಸಾಯುವುದು ಖಾತ್ರಿಯಾದಾಗ ತನ್ನ ಜೀವ ಉಳಿಸಿಕೊಳ್ಳಲು ಮರಿಯನ್ನು ಕಾಲಕೆಳಗೆ ಹಾಕಿ ತಾನು ಅದರ ಮೇಲೆ ನಿಂತು ಜೀವ ಉಳಿಸಿಕೊಳ್ಳಲು ಪ್ರಯತ್ನಿಸಿದ ಕತೆಯಂತೆಯೇ ನಮ್ಮ ಸ್ವಾಮಿಗಳು ತಮ್ಮ ಸೇವೆ(!) ಮಾಡಿದ್ದ ದಿನೇಶ್‌ಕುಮಾರರನ್ನು ಬಚಾವ್ ಮಾಡಲು ಶಕ್ತಿಮೀರಿ ಯತ್ನಿಸಿದರು. ಅದು ತಮ್ಮ ಬುಡಕ್ಕೇ ಬಂದಾಗ ದಿನೇಶ್ ಕುಮಾರರನ್ನು ತುಳಿಯದೇ ವಿಧಿಯಿರಲಿಲ್ಲ.


ಗುರುಶಿಷ್ಯರು ಚಲನಚಿತ್ರದಲ್ಲಿ ಒಂದು ಸನ್ನಿವೇಶವಿದೆ.

ಗುರುಗಳ ಮನೆಗೆ ಕಳ್ಳರು ಬರುತ್ತಾರೆ. ಆಗ ಶಿಷ್ಯರು ಒಬ್ಬರ ಕೈ ಮತ್ತೊಬ್ಬರು ಹಿಡಿದು ಸಾಲಾಗಿ ಹೊರಬರುವಾಗ ಅವರ ಕೈ ಹಿಡಿದಿದ್ದ ಕಳ್ಳರೂ ಹೊರಬಂದು ಸಿಕ್ಕಿಹಾಕಿಕೊಳ್ಳುತ್ತಾರೆ.

ಮೈಸೂರಿನ ಮುಡಾ ಪ್ರಕರಣದಲ್ಲಿಯೂ ಸ್ವಾಮಿಕಾರ್ಯದೊಂದಿಗೆ ಸ್ವಕಾರ್ಯ ಮಾಡಿಕೊಂಡವರ ಜೊತೆಗೆ ಅಂತಹ ಸೇವೆ ಮಾಡಿಸಿಕೊಂಡ ಸ್ವಾಮಿಗಳೂ ಸಿಕ್ಕಿಹಾಕಿಕೊಳ್ಳುತ್ತಾರೆಯೋ ಎಂದು ಕಾದು ನೋಡಬೇಕಿದೆ. ಕಾಲಾಯ ತಸ್ಮೈ ನಮಃ

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ನಿರ್ವಹಣೆ ಇಲ್ಲದ ನ್ಯಾಯಾಲಯದ ಶೌಚಾಲಯ



ಮಾನ್ಯರೆ,

ಮೈಸೂರು ನ್ಯಾಯಾಲಯದಲ್ಲಿರುವ ಶೌಚಾಲಯಗಳು ಸಾರ್ವಜನಿಕರು ಬಳಸಲು ಯೋಗ್ಯವಾಗಿಲ್ಲದೆ ಕೊಳೆತು ನಾರುತ್ತಿವೆ. ಕೂಡಲೇ ಸ್ವಚ್ಛತಾ ನೌಕರರನ್ನು ನೇಮಿಸುವಂತೆ ಮನವಿ.

ಸಾರ್ವಜನಿಕರು ಬಳಸುವ ಶೌಚಾಲಯಗಳು ಗಬ್ಬು ನಾರುತ್ತಿದೆ. ಮತ್ತೊಂದೆಡೆ ಸಿಬ್ಬಂದಿವರ್ಗ ಬಳಸುವ ಶೌಚಾಲಯಗಳ ಶುಚಿತ್ವ ಕಾಪಾಡಿಕೊಳ್ಳಲು ಬೀಗ ಹಾಕಿಕೊಂಡಿದ್ದಾರೆ. ಸಾರ್ವಜನಿಕರು ಬಳಸುವ ಶೌಚಾಲಯಗಳನ್ನು ಸ್ವಚ್ಛಗೊಳಿಸಲು ಅವರು ಒಬ್ಬ ಸ್ವಚ್ಛತಾ ಕಾರ್ಮಿಕರನ್ನು ನೇಮಕ ಮಾಡಿಕೊಂಡು ಸ್ವಚ್ಛತೆ ಕಾಪಾಡಬೇಕಿದೆ.

ಸರ್ಕಾರಿ ಸಂಸ್ಥೆಗಳಿಗಿಂತ ಖಾಸಗಿ ಸಂಸ್ಥೆಗಳು ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು, ಕುಳಿತುಕೊಳ್ಳಲು ಸೋಫಾ ಸೆಟ್, ಘಮಘಮಿಸುವ ಶೌಚಾಲಯಗಳು ಇರುತ್ತವೆ. ಜೊತೆಗೆ ಲಂಚ ಮುಕ್ತ ಸೇವೆಗಳಿವೆ. ಆದರೆ ಯಾವುದೇ ಸರ್ಕಾರಿ ಸಂಸ್ಥೆಗಳಿಗೆ ಹೋದರೆ ಕುಳಿತುಕೊಳ್ಳಲು ಕನಿಷ್ಠ ಪ್ಲಾಸ್ಟಿಕ್ ಚೇರ್ ಇಲ್ಲ, ಕುಡಿಯುವ ನೀರು ಇಲ್ಲವೇ ಇಲ್ಲ. ಇನ್ನು ಶೌಚಾಲಯಗಳು ಗಬ್ಬುನಾರುತ್ತಿರುತ್ತವೆ. ಲಕ್ಷಾಂತರ ರೂಪಾಯಿಗಳನ್ನು ನೌಕರರಿಗೆ ಸಂಬಳ ಕೊಡುವ ಸರ್ಕಾರ ಕನಿಷ್ಠ 20 ಸಾವಿರ ಸಂಬಳ ಕೊಟ್ಟು ಒಬ್ಬ ಸ್ವಚ್ಛತಾ ನೌಕರರನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲವೇ ಎಂಬುದೇ ಯಕ್ಷ ಪ್ರಶ್ನೆಯಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ಮೂಲಸೌಕರ್ಯಗಳನ್ನು ಒದಗಿಸಬೇಕು. ಇಲ್ಲವಾದರೆ ನಮ್ಮ ಪಕ್ಷ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ.

– ಎಲ್. ರಂಗಯ್ಯ, ಆಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ


ಪೊಲೀಸ್ ಸಿಬ್ಬಂದಿಯಿಂದ ವಸೂಲಾತಿ ದಂಧೆ

ಮಾನ್ಯರೆ,

ಇಂದಿನ ದಿನಗಳಲ್ಲಿ ದುಡಿಮೆಯನ್ನೇ ನಂಬಿ ಬದುಕುತ್ತಿರುವ ಬೀದಿ ವ್ಯಾಪಾರಿಗಳು ಹಾಗೂ ಕಷ್ಟಪಟ್ಟು ದುಡಿದು ತಮ್ಮ ಜೀವನ ಸಾಗಿಸುವ ಅಂಗಡಿಗಳು ಹಾಗೂ ತಮ್ಮ ಸ್ವಂತ ಪ್ರಯತ್ನದಿಂದ ನಡೆಸುವ ಉದ್ಯಮಿಗಳಿಂದ ಪೊಲೀಸ್ ಇಲಾಖೆಯ ಸಿಬ್ಬಂದಿ ತಮ್ಮ ಕರ್ತವ್ಯವನ್ನೇ ಮರೆತು ಬಡವರ ಬೆವರ ಹನಿಯನ್ನು ಹಿಂಡಿ ಪ್ರತಿದಿನವೂ ವಸೂಲಾತಿಗೆ ಇಳಿದಿದ್ದಾರೆ. ಕೈಗಾಡಿ ವ್ಯಾಪಾರಿಗಳಿಂದ ಹಿಡಿದು ದೊಡ್ಡ ಉದ್ಯಮಿಗಳಿಂದಲೂ ಹವಾಲ ರೀತಿ ಹಣ ವಸೂಲಿ ಮಾಡಲಾಗುತ್ತಿದೆ. ನೆಮ್ಮದಿಯ ವ್ಯಾಪಾರ ಮಾಡಲು ಬಿಡದೆ ಇದೊಂದು ಬಹು ಹಿಂಸೆಯ ಜೀವನವಾಗಿದೆ. ರಾಜಕಾರಣಿಗಳ ಒತ್ತಡದಿಂದ ಈ ರೀತಿ ವಸೂಲಾತಿಗೆ ಇಳಿದಿದ್ದಾರೆ ಎಂಬುದು ಸತ್ಯದ ವಿಷಯ. ಬಡ ಬೀದಿ ವ್ಯಾಪಾರಿಗಳ ದಿನದ ಕೂಲಿ ನಂಬಿ ಜೀವನ ಸಾಗಿಸುವ ಬಡ ಜನರ ಬದುಕನ್ನು ದುಸ್ತರವಾಗಿಸಿ ನಮ್ಮ ಹಣದಿಂದ ನಮಗೆ ಉಚಿತ ಯೋಜನೆ ಮಣ್ಣೆರಚುವ ಕೆಲಸವಾಗುತ್ತಿದೆ.

ದುಡಿದು ತಿನ್ನುವ ಕೈಗಳನ್ನು ಕಟ್ಟಿಹಾಕಿ ಉಚಿತ ಯೋಜನೆಗಳನ್ನು ನೀಡಿ ಅವರ ಸ್ವಾಭಿಮಾನಿತನವನ್ನೇ ಕಸಿದುಕೊಳ್ಳುತ್ತಿದ್ದಾರೆ. ಮನೆಯಲ್ಲಿ ದುಡಿದು ಬದುಕುವ ಯುವಕರಿಗೆ ಉಚಿತ ಯೋಜನೆ ಮಾರಕವಾಗಿದೆ. ಇವೆಲ್ಲಾ ಅನ್ಯಾಯ ಅಕ್ರಮಗಳನ್ನು ತಡೆದು ತಾಯಿ ಚಾಮುಂಡೇಶ್ವರಿ ಪವಿತ್ರ ಭೂಮಿ ಉಳಿಸಬೇಕಾಗಿ ಜಿಲ್ಲಾಧಿಕಾರಿಗಳಲ್ಲಿ ಮನವಿ.

–ನೊಂದ ವ್ಯಾಪಾರಿಗಳು, ಮೈಸೂರು



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಟ್ರಂಪ್ ಸುಂಕಾಸ್ತ್ರಕ್ಕೆ ಮಣಿಯದ ಭಾರತ

ಕಳೆದ ಕೆಲವು ಸಮಯದಿಂದ ಜಗತ್ತಿನಲ್ಲಿ ಟ್ರಂಪ್ ಸುಂಕದ ಕುರಿತಾಗಿ ವ್ಯಾಪಕ ಚರ್ಚೆಯಾಗುತ್ತಿದೆ. ರಷ್ಯಾದಿಂದ ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳು, ಕಚ್ಚಾತೈಲವನ್ನು ಭಾರತ ಖರೀದಿಸುತ್ತಿದೆ. ಈ ರೀತಿ ಯುಕ್ರೇನ್ ವಿರುದ್ಧ ಯುದ್ಧ ಮುಂದುವರಿಸಲು ರಷ್ಯಾಕ್ಕೆ ಭಾರತವು ಆರ್ಥಿಕ ಬೆಂಬಲ ನೀಡುತ್ತಿದೆ. ಇದು ಅಪರಾಧ ಎಂದು ಬಿಂಬಿಸಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರವರು ಶೇ.25 ಹೆಚ್ಚುವರಿ ಸುಂಕ ಹೇರಿದ್ದು, ಆಗಸ್ಟ್ 27ರಿಂದ ಭಾರತೀಯ ಸರಕುಗಳ ಮೇಲೆ ಶೇ.50 ಸುಂಕ ಜಾರಿಗೆ ಬಂದಿದೆ. ಭಾರತದ ಸರಕುಗಳಿಗೆ ಅಮೆರಿಕ ದೊಡ್ಡ ಮಾರುಕಟ್ಟೆಯಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ಭಾರತವು 87 ಬಿಲಿಯನ್ ಡಾಲರ್ ಮೌಲ್ಯದ ಸರಕುಗಳನ್ನು ಅಮೆರಿಕಕ್ಕೆ ರಫ್ತು ಮಾಡಿದೆ. ಇದು ಭಾರತದ ಒಟ್ಟು ರಫ್ತಿನಲ್ಲಿ ಶೇ.20 ರಷ್ಟಾಗಿದೆ. ಇದರಲ್ಲಿ 48 ಬಿಲಿಯನ್ ಡಾಲರ್ (4.22 ಲಕ್ಷ ಕೋಟಿ ರೂ.) ಮೌಲ್ಯದ ಉತ್ಪನ್ನಗಳ ಮೇಲೆ ಹೆಚ್ಚುವರಿ ಸುಂಕಾಸ್ತ್ರದಿಂದ ಅಮೆರಿಕಾದಲ್ಲಿ ಭಾರತದ ಸರಕುಗಳು ದುಬಾರಿಯಾಗಲಿವೆ. ಹೆಚ್ಚುವರಿ ಸುಂಕವು ಜವಳಿ, ಸಿದ್ಧ ಉಡುಪುಗಳು, ಆಭರಣಗಳು, ಅಮೂಲ್ಯ ಸರಕುಗಳು, ಸೀಗಡಿ, ಚರ್ಮೋತ್ಪನ್ನಗಳು, ರಾಸಾಯನಿಕಗಳು, ಎಲೆಕ್ಟ್ರಾನಿಕ್ ಮತ್ತು ಮೆಕ್ಯಾನಿಕಲ್ ಯಂತ್ರಗಳ ರಫ್ತಿನ ಮೇಲೆ ತೀವ್ರ ಪರಿಣಾಮ ಬೀರಲಿದೆ. ಆ ಕ್ಷೇತ್ರಗಳ ಕಾರ್ಮಿಕರಿಗೆ ಉದ್ಯೋಗ ನಷ್ಟದ ಭೀತಿ ಎದುರಾಗಿದೆ.

ಟ್ರಂಪ್ ಸುಂಕದಿಂದ ಭಾರತದ ರಫ್ತಿನ ಮೇಲಾಗುವ ಪರಿಣಾಮಗಳು

ಹೆಚ್ಚುವರಿ ಸುಂಕದಿಂದ ಅಮೆರಿಕಕ್ಕೆ ಭಾರತದಿಂದಾಗುವ ರಫ್ತು ಪ್ರಮಾಣ 61.0 ಬಿಲಿಯನ್ ಡಾಲರ್‌ಗೆ ಕುಸಿಯುವ ಸಾಧ್ಯತೆ ಇದೆ. ಭಾರತದಿಂದ ಪ್ರತಿ ವರ್ಷ ರಫ್ತಾಗುವ 2 ಬಿಲಿಯನ್ ಡಾಲರ್ ಮೌಲ್ಯದ ಸೀಗಡಿ ಮೇಲೆ ಶೇ.25 ಸುಂಕದ ಹೊಡೆತ ಬೀಳಲಿದೆ. 8.4 ಬಿಲಿಯನ್ ಡಾಲರ್‌ನಷ್ಟು ರಫ್ತಾಗುವ ಜವಳಿ, ಸಿದ್ಧ ಉಡುಪುಗಳ ಮೇಲೆ ಶೇ.35–40ರಷ್ಟು ಸುಂಕದ ಸಾಧ್ಯತೆ ಇದೆ. 10 ಬಿಲಿಯನ್ ಡಾಲರ್ ರಫ್ತಾಗುವ ಆಭರಣ ಉದ್ಯಮದ ಮೇಲೆ ಶೇ.27, 4.7 ಬಿಲಿಯನ್ ಡಾಲರ್ ರಫ್ತಾಗುವ ಲೋಹಗಳ ಮೇಲೆ ಶೇ.52 ಇಂಜಿನಿಯರಿಂಗ್, ಆಟೋಮೊಬೈಲ್ ಬಿಡಿ ಭಾಗಗಳು ರಫ್ತಾಗುವ 9.3 ಬಿಲಿಯನ್ ಡಾಲರ್ ಮೇಲೆ ಶೇ.26 ಸುಂಕದ ಹೊಡೆತ ಬೀಳಲಿದೆ. ಈ ಹೆಚ್ಚುವರಿ ಸುಂಕದಿಂದ ಕಾರ್ಮಿಕ ಆಧಾರಿತ ಈ ವಲಯಗಳಲ್ಲಿ ನಿರುದ್ಯೋಗದ ಭೀತಿ ಎದುರಾಗಿದೆ. ನ್ಯಾಟೊ ಸದಸ್ಯರಾಗಿರುವ ಯುರೋಪಿಯನ್ ಒಕ್ಕೂಟದ (ಇ.ಯು) ದೇಶಗಳು ತಮ್ಮ ರಕ್ಷಣೆಗೆ ಅಮೆರಿಕದ ಮೇಲೆ ನಿರ್ಭರವಾಗಿವೆ. ದೊಡ್ಡಣ್ಣನ ಆಣತಿಯಂತೆ ಪ್ರಸ್ತುತ ಇ.ಯು ದೇಶಗಳು ಭಾರತದ ವಿರುದ್ಧ ಗುಟುರುಗುಟ್ಟುತ್ತಿವೆ. ಕಳೆದ ವರ್ಷದಲ್ಲಿ ಭಾರತದಿಂದ 76 ಬಿಲಿಯನ್ ಡಾಲರ್ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಂಡಿರುವ ಇಯು ದೇಶಗಳು ಮುಂದಿನ ಜನವರಿಯಿಂದ ಕಾರ್ಬನ್ ಟ್ಯಾಕ್ಸ್ ದಂಡ ವಿಧಿಸಲಿವೆ. ಈ ಟ್ಯಾಕ್ಸ್ ಭಾರತದ ಅಲ್ಯೂಮಿನಿಯಂ ಮತ್ತು ಸ್ಟೀಲ್ ಉದ್ಯಮಗಳಿಗೆ ಹೊಡೆತ ನೀಡುವ ಸಂಭಾವ್ಯತೆ ಇದೆ.

ಅಮೆರಿಕ–ನ್ಯಾಟೋ ದೇಶಗಳು ರಷ್ಯಾಕ್ಕೆ ಮಾಡಿದ ಮೋಸ

ಭಾರತದ ಆರ್ಥಿಕ ಬೆಂಬಲದಿಂದಾಗಿ ಯುಕ್ರೇನ್ ವಿರುದ್ಧ ರಷ್ಯಾ ಯುದ್ಧ ಮುಂದುವರಿಸಲು ಸಾಧ್ಯವಾಗಿದೆ. ಅದಕ್ಕಾಗಿ ಭಾರತದ ಮೇಲೆ ಸುಂಕಾಸ್ತ್ರ ಪ್ರಯೋಗಿಸಿದ್ದೇವೆ ಎಂದು ಟ್ರಂಪ್ ವಾದಿಸುತ್ತಿದ್ದಾರೆ. ಆದರೆ ಪ್ರಸ್ತುತ ಯುಕ್ರೇನ್–ರಷ್ಯಾ ಯುದ್ಧಕ್ಕೆ ಅಮೆರಿಕ ನೇತೃತ್ವದ ನ್ಯಾಟೊ ಕೂಟ ಮಾಡಿರುವ ವಿಶ್ವಾಸದ್ರೋಹ ಎಂಬುದು ಕಟುಸತ್ಯವಾಗಿದೆ. 90ರ ದಶಕದಲ್ಲಿ ಅಮೆರಿಕದ ನಾಯಕರು ನ್ಯಾಟೊವನ್ನು ಪೂರ್ವದತ್ತ ವಿಸ್ತರಿಸುವುದಿಲ್ಲ ಎಂಬ ಆಶ್ವಾಸನೆಯನ್ನು ರಷ್ಯನ್ ನಾಯಕರಿಗೆ ನೀಡಿದ್ದರು. ಆದರೆ ನ್ಯಾಟೊ ತನ್ನ ಮಾತಿನಂತೆ ನಡೆಯದೇ 1999 ಮತ್ತು 2004ರಲ್ಲಿ ನ್ಯಾಟೊವನ್ನು ಪೂರ್ವಕ್ಕೆ ವಿಸ್ತರಿಸಿತು. ಆ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟ ಪತನಗೊಂಡು ದುರ್ಬಲವಾಗಿದ್ದ ರಷ್ಯಾವು ನ್ಯಾಟೊ ವಿಸ್ತರಣೆಯನ್ನು ತಡೆಯುವ ಸ್ಥಿತಿಯಲ್ಲಿರಲಿಲ್ಲ. ರಷ್ಯಾ ಅಸಹಾಯಕವಾಗಿತ್ತು. 2008ರಲ್ಲಿ ಅಮೆರಿಕವು ಯುಕ್ರೇನ್ ಮತ್ತು ಜಾರ್ಜಿಯಾ ದೇಶಗಳಿಗೆ ನ್ಯಾಟೋ ಸೇರಲು ಕುಮ್ಮಕ್ಕು ನೀಡಿತು. 2014ರಲ್ಲಿ ನ್ಯಾಟೋ ಸೇರಬೇಕೆಂಬ ಉಕ್ರೇನ್‌ನ ಮಹಾತ್ವಾಕಾಂಕ್ಷೆಗೆ ಅಮೆರಿಕ ಬೆಂಬಲ ನೀಡಿತು. ನ್ಯಾಟೋ ತನ್ನ ಗಡಿಯವರೆಗೆ ರಷ್ಯಾ ಸಾರ್ವಭೌಮತ್ವಕ್ಕೆ ಭದ್ರತೆಗೆ ಅಪಾಯವೆಂದು ಅರಿತ ರಷ್ಯಾ ಅಧ್ಯಕ್ಷ ಪುಟಿನ್ ಆಗ ಕ್ರಿಮಿಯಾವನ್ನು ಆಕ್ರಮಿಸಿದರು. ಆ ನಂತರ ಯುಕ್ರೇನ್ ಅನ್ನು ವಶಪಡಿಸಲು ಆರಂಭವಾದ ಯುದ್ಧ ಈಗಲೂ ಮುಂದುವರಿದಿದೆ. ಯುಕ್ರೇನ್ ನ್ಯಾಟೊ ಸೇರಲು ಉತ್ಸಾಹ ತೋರದೆ ತಟಸ್ಥವಾಗಿ ಇರುತ್ತಿದ್ದರೆ ಈ ಯುದ್ಧ ಸಂಭವಿಸುತ್ತಿರಲಿಲ್ಲ ಎಂಬುದು ರಾಜಕೀಯ ಪರಿಣಿತರ ಅಭಿಪ್ರಾಯವಾಗಿದೆ. ಅಮೆರಿಕ ಹಾಗೂ ನ್ಯಾಟೊ ಒಕ್ಕೂಟ ತಾವು ಮಾಡಿದ ತಪ್ಪಿಗೆ ಭಾರತ ಮತ್ತು ರಷ್ಯಾವನ್ನು ಅಪರಾಧಿ ಎನ್ನುವ ಧೂರ್ತ ವಾದವನ್ನು ಮಂಡಿಸುತ್ತಿವೆ. ರಷ್ಯಾದಿಂದ ಖರೀದಿ ಸುತ್ತಿರುವ ಕಚ್ಚಾತೈಲವನ್ನು ಸಂಸ್ಕರಿಸಿ ಭಾರತವು ಭಾರಿ ಲಾಭ ಗಳಿಸುತ್ತಿದೆ ಎಂಬುದು ದುರಾಶೆಯ ಟ್ರಂಪ್‌ಗೆ ಉರಿ ಹಚ್ಚಿದೆ. ಆದರೆ ವಾಸ್ತವಿಕತೆ ಬೇರೆಯೇ ಆಗಿದೆ. ರಷ್ಯಾ ಪ್ರತಿದಿನ ಸುಮಾರು 95 ಲಕ್ಷ ಬ್ಯಾರಲ್‌ನಷ್ಟು ಕಚ್ಚಾತೈಲ ಉತ್ಪಾದಿಸುತ್ತಿದೆ. ಇದರಲ್ಲಿ ಭಾರತವು ಪ್ರತಿದಿನ 1.5ರಿಂದ 2.0 ಮಿಲಿಯನ್ ಬ್ಯಾರೆಲ್ ಅನ್ನು ಆಮದು ಮಾಡಿಕೊಳ್ಳುತ್ತಿದೆ. ಪ್ರತಿ ಬ್ಯಾರಲ್‌ನಲ್ಲಿ ಎರಡರಿಂದ ಮೂರು ಡಾಲರ್ ಉಳಿತಾಯವೆಂದರೆ ವರ್ಷಕ್ಕೆ ಒಂದರಿಂದ ಎರಡು ಬಿಲಿಯನ್ ಡಾಲರ್ ಉಳಿತಾಯವಾಗಬಹುದು. ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ತುಲನೆ ಮಾಡಿದಲ್ಲಿ ಈ ಮೊತ್ತ ಅತ್ಯಲ್ಪವಾಗಿದೆ. ಆದರೂ ಟ್ರಂಪ್ ಭಾರತದ ವಿರುದ್ಧ ಕೆಂಡಕಾರುತ್ತಿದ್ದಾರೆ.

140 ಕೋಟಿ ಜನಸಂಖ್ಯೆ ಇರುವ ಭಾರತದ ಬೃಹತ್ತಾದ ಮಾರುಕಟ್ಟೆಯು ಅಮೆರಿಕನ್ ಕಂಪನಿಗಳಿಗೆ ದೊರೆಯಬೇಕೆಂದು ಟ್ರಂಪ್ ಹಪಹಪಿಸುತ್ತಿದ್ದಾರೆ. ಟ್ರಂಪ್ ವಿಶೇಷವಾಗಿ ಭಾರತದ ಆಟೋಮೊಬೈಲ್ ಮತ್ತು ಕೃಷಿ ಕ್ಷೇತ್ರದಲ್ಲಿ ರಿಯಾಯ್ತಿ ಬಯಸುತ್ತಿದ್ದಾರೆ. ಭಾರತ–ಅಮೆರಿಕ ಮಧ್ಯೆ ಒಟ್ಟು 131.8 ಬಿಲಿಯನ್ ಡಾಲರ್‌ನಷ್ಟು ಮೊತ್ತದ ದ್ವಿಪಕ್ಷೀಯ ವ್ಯಾಪಾರವಿದೆ. ಇದರಲ್ಲಿ ಭಾರತವು ಅಮೆರಿಕಕ್ಕೆ 86.5 ಬಿಲಿಯನ್ ಡಾಲರ್ ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದರೆ, ಅಮೆರಿಕದಿಂದ ಕೇವಲ 45.3 ಬಿಲಿಯನ್ ಡಾಲರ್ ಮೌಲ್ಯದಷ್ಟು ಉತ್ಪನ್ನಗಳನ್ನು ಭಾರತವು ಆಮದು ಮಾಡಿಕೊಳ್ಳುತ್ತಿದೆ. ಹೀಗಾಗಿ ಭಾರತಕ್ಕೆ ಸುಮಾರು 41. ಬಿಲಿಯನ್ ಡಾಲರ್ ವ್ಯಾಪಾರ ಮಿಗತೆ ಆಗುತ್ತಿದೆ.



“ ಭಾರತವಿಂದು 1962ರ ಚೀನಾ ಯುದ್ಧದ ಸಂದರ್ಭದಲ್ಲಿದ್ದ ದುರ್ಬಲ ಭಾರತವಲ್ಲ. 2004–2014ರ ಅವಧಿಯಲ್ಲಿ ದೇಶದ ಮೇಲೆ ಭಯೋತ್ಪಾದಕ ದಾಳಿಯಾದಾಗಲೆಲ್ಲ ಪಾಕಿಸ್ತಾನವನ್ನು ನಿಯಂತ್ರಿಸಿ ಪಾಕ್‌ಗೆ ಬುದ್ಧಿ ಹೇಳಿ ಎಂದು ಶ್ವೇತಭವನದ ಅಧಿಕಾರಿಗಳ ಮುಂದೆ ಗೋಗರೆಯುತ್ತಿದ್ದ ಭಾರತವಲ್ಲ ಎಂಬ ಸಂದೇಶ ಜಗತ್ತಿಗೆ ನೀಡಿದೆ. ಭಾರತದ ಇಂದಿನ ಶಕ್ತಿ, ಸಾಮರ್ಥ್ಯವನ್ನು ಜಗತ್ತು ಗುರುತಿಸಿ ಗೌರವಿಸುತ್ತಿದೆ.

ಭಾರತದ ದೇಶೀಯ ಆಟೋ ಮೊಬೈಲ್ ಮಾರುಕಟ್ಟೆಯಲ್ಲಿ 4.35 ಮಿಲಿಯನ್ ಕಾರುಗಳಿಗೆ ಬೇಡಿಕೆ ಇದೆ. ಅಮೆರಿಕದಿಂದ ಬರುವ ಐಷಾರಾಮಿ ಹಾಗೂ ಇತರ ಮಾದರಿಯ ಕಾರುಗಳ ಮೇಲೆ ಭಾರತವು ಶೇ.110ರಷ್ಟು ಸುಂಕ ವಿಧಿಸುತ್ತಿರುವುದರಿಂದ ಕೇವಲ 15 ಸಾವಿರದಷ್ಟು ಕಾರುಗಳು ಭಾರತಕ್ಕೆ ಆಗಮಿಸುತ್ತಿವೆ. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಮೆರಿಕದಿಂದ ಭಾರತದ ಆಮದು ಕೇವಲ ಕೆಲವು ಪ್ರಜಾತಿಯ ಮೀನುಗಳು ಮತ್ತು ಬಾದಾಮಿ, ಪಿಸ್ತಾದಂತಹ ಒಣ ಹಣ್ಣುಗಳಿಗೆ ಸೀಮಿತವಾಗಿದೆ. ಕೃಷಿ ವಲಯದಲ್ಲಿರುವ ಶೇ.40ರಷ್ಟು ಕೃಷಿ ಕಾರ್ಮಿಕರ ಹಿತದೃಷ್ಟಿಯಿಂದ ಇಂತಹ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಭಾರತದಲ್ಲಿನ ಹೈನೋದ್ಯಮದ ರಕ್ಷಣೆಗೆ ಕೆಲವು ಕಠಿಣ ನಿಯಮಗಳನ್ನು ರೂಪಿಸಿದೆ.

ಅಮೆರಿಕದಿಂದ ಆಮದಾಗುತ್ತಿರುವ ಕೆನೆರಹಿತವಾದ ಹಾಲಿನ ಪೌಡರ್ ಮೇಲೆ ಶೇ.60 ಸುಂಕ ಮುಂದುವರಿದಿದೆ. ತಾಜಾ ಚೀಸ್, ಮೊಸರಿನ ಮೇಲೆ ಶೇ.30 ಆಮದು ಸುಂಕ ವಿಧಿಸಲಾಗುತ್ತಿದೆ. ಇವುಗಳೊಂದಿಗೆ ಕೃಷಿ ವಲಯದಲ್ಲಿ ಕುಲಾಂತರಿ ಉತ್ಪನ್ನಗಳ ಮೇಲೆ ಭಾರತವು ಕಠಿಣ ನಿರ್ಬಂಧಗಳನ್ನು ವಿಧಿಸಿದೆ. ಶಸ್ತ್ರಾಸ್ತ್ರ ಖರೀದಿಗೆ ಸಂಬಂಧಿಸಿದಂತೆ ಅಮೆರಿಕದ ಎಫ್–35 ಯುದ್ಧ ವಿಮಾನಗಳನ್ನು ಖರೀದಿಸಲು ನಿರಾಕರಿಸಿರುವುದು ಟ್ರಂಪ್‌ರನ್ನು ವಿಶೇಷವಾಗಿ ಕೆರಳಿಸಿದೆ.

ಟ್ರಂಪ್ ಬಲೂನಿನ ಗಾಳಿ ತೆಗೆದ ಭಾರತ

ಪ್ರಧಾನಿ ಮೋದಿ ಮತ್ತು ಟ್ರಂಪ್ ಮಧ್ಯೆ ಫೆಬ್ರವರಿಯಲ್ಲಿ ದ್ವಿಪಕ್ಷೀಯ ವ್ಯಾಪಾರ ಮಾತುಕತೆಯಾಗಿತ್ತು. ಉಭಯ ದೇಶಗಳ ನಡುವಿನ ವ್ಯಾಪಾರವನ್ನು 2030ರ ವೇಳೆಗೆ ಹೆಚ್ಚಿಸಲು ಒಪ್ಪಿಕೊಂಡಿದ್ದರು. ವಿಶ್ವದ ಅನೇಕ ದೇಶಗಳು ಸನ್ನಿ ಹಿಡಿದವರಂತೆ ವ್ಯಾಪಾರ ಒಪ್ಪಂದ ಮಾಡಿಕೊಂಡಂತೆ ಭಾರತವು ವ್ಯಾಪಾರಕ್ಕಾಗಿ ತನ್ನ ಮುಂದೆ ಮಂಡಿಯೂರಬಹುದೆಂದು ಟ್ರಂಪ್ ಭಾವಿಸಿದ್ದರು. ವಾಸ್ತವವಾಗಿ ಭಾರತವೇ ಸಾಕಷ್ಟು ಮುಂಚಿತವಾಗಿಯೇ ವ್ಯಾಪಾರ ಸಂಧಾನದ ಮೇಜಿಗೆ ಹೋಗಿತ್ತು. ಐದು ಸುತ್ತಿನ ಮಾತುಕತೆಗಳ ನಂತರವೂ ಭಾರತದ ನಿಯೋಗಗಳು ಅಮೆರಿಕಕ್ಕೆ ಲಾಭವಾಗುವ, ಭಾರತದ ಹಿತಾಸಕ್ತಿಗೆ ಮಾರಕವಾಗುವ ಎಲ್ಲ ರೀತಿಯ ವ್ಯಾಪಾರ ನಿಬಂಧನೆಗಳಿಗೆ ಒಪ್ಪಿಗೆ ನೀಡಲಿಲ್ಲ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್‌ರ ನಿಯೋಗವು ಅಮೆರಿಕಕ್ಕೆ ಲಾಭವಾಗುವ ಯಾವುದೇ ರೀತಿಯ ಒಪ್ಪಂದಗಳಿಗೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಟ್ರಂಪ್ ಭಾರತದ ವಿರುದ್ಧ ಆಕ್ರೋಶ ತೋರಿದರು. ಇತರೇ ದೇಶಗಳಂತೆ ಭಾರತವು ಯಾವುದೇ ರೀತಿಯ ಯಾವುದೇ ಪ್ರಮಾಣದ ಬಂಡವಾಳ ಹೂಡುವ ಪ್ರಸ್ತಾಪ ಮಾಡದಿರುವುದು ಟ್ರಂಪ್ ಆಕ್ರೋಶಕ್ಕೆ ಕಾರಣವೆಂದು ಭಾವಿಸಲಾಗಿದೆ.

ಸ್ವಾಭಿಮಾನಕ್ಕೆ ಬದ್ಧ ಸ್ನೇಹಕ್ಕೂ ಸಿದ್ಧ

ವಿಶ್ವದ ಅನೇಕ ಪ್ರಬಲ, ಸಮೃದ್ಧ ಎನಿಸಿದ ರಾಷ್ಟ್ರಗಳು ತನ್ನ ಬೆದರಿಕೆಯಿಂದ ಸಮೂಹ ಸನ್ನಿಗೊಳಗಾಗಿ ಅಪಮಾನಕಾರಿ ಒಪ್ಪಂದ ಮಾಡಿಕೊಂಡಂತೆ ವಿಶ್ವದ ಅತಿದೊಡ್ಡ ಮಾರುಕಟ್ಟೆಯಾಗಿರುವ ಭಾರತವು ಕೂಡ ಒಪ್ಪಂದದ ಮೇಜಿಗೆ ಬರುವುದೆಂದು ಟ್ರಂಪ್ ಭಾವಿಸಿದ್ದರು. ಏಕೆಂದರೆ ತೈಲಕ್ಕೆ ಸಂಬಂಧಿಸಿದಂತೆ ಭಾರತ ನಾಜೂಕು ಸ್ಥಿತಿಯಲ್ಲಿದೆ. ಭಾರತವು ದೇಶೀಯ ತೈಲ ಬೇಡಿಕೆಯಲ್ಲಿ ಶೇ.85ರಷ್ಟು ಆಮದು ಮಾಡಿಕೊಳ್ಳುತ್ತಿದೆ. ಭಾರತವು ಪೂರೈಕೆ ಮತ್ತು ಬೆಲೆ ಸ್ಥಿರತೆ ಉಳಿಸಬೇಕಾದ ಅನಿವಾರ್ಯತೆ ಇದೆ. ಈ ಸ್ಥಿತಿಯನ್ನು ತಿಳಿದಿರುವ ಟ್ರಂಪ್ ರಷ್ಯಾದ ತೈಲ ಖರೀದಿಯನ್ನೇ ಅಸ್ತ್ರವಾಗಿ ಬಳಸಿ ಭಾರತವನ್ನು ಮಣಿಸುವ ಹವಣಿಕೆಯಲ್ಲಿದ್ದರು. ಭಾರತವು ತನ್ನ ಜನಸಾಮಾನ್ಯರು, ರೈತರು, ಕೃಷಿ ಕಾರ್ಮಿಕರ ಹಿತಕ್ಕೆ ಮಾರಕವಾಗುವ ಅದೇ ರೀತಿ ದೇಶದ ಸಂಪ್ರಭುತ್ವ, ಸಾರ್ವಭೌಮತ್ವ, ಸ್ವಾಭಿಮಾನಕ್ಕೆ ಧಕ್ಕೆ ತರುವ ಯಾವುದೇ ರೀತಿಯ ಸಂಧಾನ, ಮಾತುಕತೆ, ಒಪ್ಪಂದಗಳಿಗೆ ಅವಕಾಶ ನೀಡದು ಎಂದು ಟ್ರಂಪ್‌ಗೆ ತಿರುಗೇಟು ನೀಡಿತು.

ಭಾರತವು ಟ್ರಂಪ್ ಮತ್ತವರ ಗುಂಪಿಗೆ ಒಂದೊಂದೇ ಏಟುಗಳನ್ನು ಕೊಡಲು ಪ್ರಾರಂಭಿಸಿತು. ಆಪರೇಷನ್ ಸಿಂಧೂರ ನಂತರ ಕದನ ವಿರಾಮ ತನ್ನಿಂದಾಗಿ ಏರ್ಪಟ್ಟಿತು ಎಂಬ ಟ್ರಂಪ್ ಹೇಳಿಕೆಗೆ ಭಾರತವು ಯಾವುದೇ ತೃತೀಯ ದೇಶದ ಹಸ್ತಕ್ಷೇಪವಿಲ್ಲದೆ ಪಾಕ್‌ನ ನೇರ ಮನವಿ ಮೇರೆಗೆ ತಾತ್ಕಾಲಿಕವಾಗಿ ಆಪರೇಷನ್ ಸಿಂಧೂರ ಸ್ಥಗಿತಗೊಳಿಸಿದೆ ಎಂದು ಸ್ಪಷ್ಟನೆ ನೀಡಿತು. ಕೆನಡಾದಲ್ಲಿ ಪ್ರಧಾನಿ ಮೋದಿಯವರಿಗೆ ವಾಷಿಂಗ್ಟನ್‌ಗೆ ಬರುವಂತೆ ಟ್ರಂಪ್ ನೀಡಿದ ಆಹ್ವಾನವನ್ನು ಮೋದಿ ನಯವಾಗಿ ತಿರಸ್ಕರಿಸಿದರು. ನೊಬೆಲ್ ಪ್ರಶಸ್ತಿಗೆ ತನ್ನ ಹೆಸರು ಶಿಫಾರಸು ಮಾಡಬೇಕೆಂಬ ಟ್ರಂಪ್ ಮನವಿಗೆ ಮೋದಿಯವರು ಸ್ಪಂದಿಸಲಿಲ್ಲ. ಟ್ರಂಪ್ ನಾಲ್ಕು ಬಾರಿ ಮಾಡಿದ ದೂರವಾಣಿ ಕರೆಗಳನ್ನು ಮೋದಿ ಸ್ವೀಕರಿಸಲಿಲ್ಲ. ಆ ನಂತರ ಸಚಿವರು, ರಾಜತಾಂತ್ರಿಕರು ಅಮೆರಿಕಕ್ಕೆ ನಿರಂತರ ಟೀಕೆಗಳನ್ನು ಮಾಡುತ್ತಿದ್ದಾರೆ. ದರ್ಪ, ದಬ್ಬಾಳಿಕೆ ಭಾರತಕ್ಕೆ ಸ್ವೀಕಾರಾರ್ಹವಲ್ಲ ಎಂದು ಟ್ರಂಪ್‌ಗೆ ಚಾಟಿ ಬೀಸುತ್ತಿದ್ದಾರೆ.

ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್‌ರವರು ಟ್ರಂಪ್ ವ್ಯವಹರಿಸುತ್ತಿರುವ ರೀತಿಯನ್ನು ಟೀಕಿಸುತ್ತಾ 'ಅಮೆರಿಕದ ಹಿಂದಿನ ಯಾವ ಅಧ್ಯಕ್ಷರೂ ವಿದೇಶಾಂಗ ನೀತಿಯನ್ನು ಟ್ರಂಪ್‌ರಂತೆ ಬಹಿರಂಗವಾಗಿ ನಿರ್ವಹಿಸಿದ ನಿದರ್ಶನವಿಲ್ಲವೆಂದು ಆಪಾದಿಸಿದ್ದಾರೆ'. 'ಭಾರತದಿಂದ ತೈಲ, ತೈಲೋತ್ಪನ್ನ ಖರೀದಿಯಿಂದ ತೊಂದರೆಯಾಗುವುದಾದರೆ ಅಂತಹವರು ಭಾರತದಿಂದ ಖರೀದಿಸಿ ಎಂದು ನಿಮ್ಮನ್ನು ಒತ್ತಾಯಿಸಲ್ಲ. ಒತ್ತಡ ಹೇರುವುದಿಲ್ಲ ಎಂದು ಜೈಶಂಕರ್ ಟೀಕಾಕಾರರನ್ನು ನೇರ ತರಾಟೆಗೆತ್ತಿಕೊಂಡಿದ್ದಾರೆ. ಅಮೆರಿಕ, ಇಯು ರಾಷ್ಟ್ರಗಳು ರಷ್ಯಾದಿಂದ ತೈಲ ಖರೀದಿಸಿದರೆ ಸರಿ, ಭಾರತ ಖರೀದಿಸಿದರೆ ತಪ್ಪು ಎಂಬ ಟ್ರಂಪ್ ಉದ್ಧಟತನ ಭಾರತ ಒಪ್ಪುವುದಿಲ್ಲವೆಂದು ಸಚಿವರು ಸ್ಪಷ್ಟಪಡಿಸಿದರು. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ 'ರಷ್ಯಾದಿಂದ ಭಾರತ ತೈಲ ಖರೀದಿಯನ್ನು ಮುಂದುವರಿಸಲಿದೆ' ಎಂದು ತಿಳಿಸಿದರು. ರಷ್ಯಾ–ಭಾರತ ಬಾಂಧವ್ಯಗಳಿಗೆ ದ್ವಿತೀಯ ನಿರ್ಬಂಧಗಳನ್ನು ವಿಧಿಸಲಾಗುವುದೆಂಬ ನ್ಯಾಟೋ ಮಹಾ ಕಾರ್ಯದರ್ಶಿ ಮಾರ್ಕ್‌ರೂಟ್ ಬೆದರಿಕೆಗಳನ್ನು ಭಾರತವು ದೃಢವಾಗಿ, ಸಾರಾಸಗಟಾಗಿ ತಿರಸ್ಕರಿಸಿದೆ. ಭಾರತದ ವಿದೇಶಾಂಗ ಖಾತೆ ವಕ್ತಾರ ರಣಧೀರ ಜೈಸ್ವಾಲ್‌ರು ಸುದ್ದಿಗಾರರಿಗೆ ತಿಳಿಸುತ್ತಾ 'ರಷ್ಯಾದಿಂದ ಇಂಧನ ಖರೀದಿ ರಾಷ್ಟ್ರೀಯ ಹಿತಾಸಕ್ತಿ ಆಧಾರಿತವಾಗಿದೆ. ನಮ್ಮ ಜನರ ಇಂಧನ ಅಗತ್ಯ ಪೂರೈಸಲು ನಾವು ಪ್ರಾಧ್ಯಾನ್ಯತೆ ನೀಡುತ್ತೇವೆ. ಈ ನಿಟ್ಟಿನಲ್ಲಿ ಮಾರುಕಟ್ಟೆ ಕೊಡುಗೆಗನುಗುಣವಾಗಿ ನಮಗೆ ಬೇಕಾದುದನ್ನು ಬೇಕಾದವರಿಂದ ಖರೀದಿಸುತ್ತೇವೆ. ಈ ವಿಚಾರದಲ್ಲಿ ನ್ಯಾಟೋ ದ್ವಂದ್ವ ಧೋರಣೆಯನ್ನು ನಾವು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಇತ್ತೀಚೆಗೆ ಸಿಂಗಾಪುರದಲ್ಲಿ ನಡೆದ ಕ್ರೆಡ್ವೆ ಸಮ್ಮೇಳನದಲ್ಲಿ ಕಾಂಗ್ರೆಸ್ ನಾಯಕ ಶಶಿ ತರೂರ್‌ರವರು 'ಟ್ರಂಪ್ ಓರ್ವ ಅಸ್ವಾಭಾವಿಕ ಅಧ್ಯಕ್ಷರಾಗಿದ್ದಾರೆ. ಇವರು ರಾಜತಾಂತ್ರಿಕ ರೀತಿ–ನೀತಿಗಳನ್ನು ಗೌರವಿಸದೆ ನುಣುಚಿಕೊಳ್ಳುವ ಜಾಯಮಾನದ ವ್ಯಕ್ತಿ ಎಂದು ಟೀಕಿಸಿದರು. ನೊಬೆಲ್ ಶಾಂತಿ ಪುರಸ್ಕಾರಕ್ಕೆ ತಾನು ಅರ್ಹ ಎನ್ನುವ ಆತ್ಮರತಿಯ ಅಧ್ಯಕ್ಷರನ್ನು ಕಂಡಿದ್ದೀರಾ? ಎಂದು ಪ್ರಶ್ನಿಸಿದರು. ಭಾರತ ಮತ್ತು ರಷ್ಯಾದ ಸತ್ತ ಆರ್ಥಿಕತೆಗಳು (Dead economy) ಅವು ಚರಂಡಿಗೆ ಜಾರಿದರೂ ನಾನು ಕೇರ್ ಮಾಡೆನು ಎಂದರು. ಈ ರೀತಿಯ ಅವಿವೇಕದ, ಬಾಲಿಶ ಟೀಕೆ ಮಾಡುವ ಟ್ರಂಪ್ ಓರ್ವ ಅಪ್ರಬುದ್ಧ ವ್ಯಕ್ತಿಯಾಗಿದ್ದಾರೆ. ಇವರ ಹೇಳಿಕೆ ಆಧಾರದಲ್ಲಿ ಭಾರತದ ಸಾಧನೆಗಳನ್ನು ಪರಾಮರ್ಶಿಸದಿರಿ ಎಂದು ಸಮ್ಮೇಳನದಲ್ಲಿದ್ದ ಪ್ರತಿನಿಧಿಗಳನ್ನು ಶಶಿ ತರೂರ್ ವಿನಂತಿಸಿದರು.

ತಿಪ್ಪರಲಾಗ ಹೊಡೆದ ಟ್ರಂಪ್

ಭಾರತದ ವಿರುದ್ಧ ಸುಂಕಾಸ್ತ್ರ ಪ್ರಯೋಗಿಸಿದ ನಂತರ ಅಮೆರಿಕದಲ್ಲೇ ಟ್ರಂಪ್‌ಗೆ ವಿರೋಧ ಹೆಚ್ಚಿದೆ. ಅಮೆರಿಕದ ಡೆಮಾಕ್ರಾಟ್ಸ್‌ಗಳು ಸುಂಕ ಸಮರದ ವಿಚಾರದಲ್ಲಿ ಭಾರತದ ಬೆಂಬಲಕ್ಕೆ ನಿಂತಿದ್ದಾರೆ. ಭಾರತ–ಅಮೆರಿಕ ನಡುವೆ ಬಾಂಧವ್ಯಗಳನ್ನು ಉತ್ತಮಪಡಿಸಲು ಹಲವಾರು ವರ್ಷಗಳ ಕಾಲ ನಡೆಸಿದ ಎಲ್ಲ ಪ್ರಯತ್ನಗಳಿಗೆ ಟ್ರಂಪ್ ಸುಂಕ ನೀತಿ ತಣ್ಣೀರೆರೆಚಿದೆ ಎಂದಿದ್ದಾರೆ.

ಡೊನಾಲ್ಡ್ ಟ್ರಂಪ್ ಭಾರತದ್ದು 'ಸತ್ತ ಆರ್ಥಿಕತೆ' ಎಂದು ಹೇಳಿರುವ ಬಗ್ಗೆ ಅಮೆರಿಕದ ಅರ್ಥಶಾಸ್ತ್ರಜ್ಞ ಅಲಬ್ ಬ್ಲಿಂಡರ್ ಹೆಚ್ಚಿನ ಜನರಿಗೆ ಭಾರತದ ಆರ್ಥಿಕತೆ ಸತ್ತಂತೆ ಕಾಣುವುದಿಲ್ಲ. ಬದಲಾಗಿ ಭಾರತದ ಆರ್ಥಿಕತೆ ತುಂಬಾ ವೇಗವಾಗಿ ಬೆಳೆಯುತ್ತಿದೆ ಎಂದಿದ್ದಾರೆ. ಮತ್ತೋರ್ವ ಅರ್ಥಶಾಸ್ತ್ರಜ್ಞ ಸ್ಟೀವ್ ಹ್ಯಾಂಕೆಯವರು 'ಟ್ರಂಪ್ ಸುಂಕವು ಸಂಪೂರ್ಣವಾಗಿ ಅಸಂಬದ್ಧ ಮತ್ತು ಕೇವಲ ಮರಳಿನ ಮೇಲೆ ಆಧಾರಿತವಾಗಿದೆ. ಟ್ರಂಪ್ ವ್ಯಾಪಾರ ಯುದ್ಧದ ಮೂಲಕ ತಮ್ಮನ್ನು ತಾವೇ ನಾಶಪಡಿಸಿಕೊಳ್ಳುತ್ತಿದ್ದಾರೆ' ಎಂದು ಹೇಳಿದ್ದಾರೆ. ಈ ರೀತಿ ವ್ಯಾಪಕ ಟೀಕೆಗಳು ಬರುತ್ತಿದ್ದಂತೆ ಟ್ರಂಪ್ ತಿಪ್ಪರಲಾಗ ಹೊಡೆದಿದ್ದಾರೆ. ಆಗಿರುವ ತಪ್ಪನ್ನು ಸರಿಪಡಿಸುವ ರೀತಿಯಲ್ಲಿ ಭಾರತ–ಅಮೆರಿಕ ನಡುವೆ ವಿಶೇಷ ಬಾಂಧವ್ಯವಿದೆ ಎಂದು ಟ್ರಂಪ್ ಹೇಳಿಕೆ ನೀಡಿದ್ದಾರೆ. ಇದಕ್ಕೆ ಸ್ಪಂದಿಸಿ ಪ್ರಧಾನಿ ಮೋದಿಯವರು ಕೂಡ ಧನಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್‌ರವರು ಮೋದಿ ಕಠಿಣ ಚೌಕಾಸಿ ಮಾಡುತ್ತಾರೆ. ಅದಕ್ಕಾಗಿಯೇ ನಾವು ಅವರನ್ನು ಗೌರವಿಸುತ್ತೇವೆ ಎಂದಿದ್ದಾರೆ.


ಭಾರತವಿಂದು 1962ರ ಚೀನಾ ಯುದ್ಧದ ಸಂದರ್ಭದಲ್ಲಿದ್ದ ದುರ್ಬಲ ಭಾರತವಲ್ಲ. 2004–2014ರ ಅವಧಿಯಲ್ಲಿ ದೇಶದ ಮೇಲೆ ಭಯೋತ್ಪಾದಕ ದಾಳಿಯಾದಾಗಲೆಲ್ಲ ಪಾಕಿಸ್ತಾನವನ್ನು ನಿಯಂತ್ರಿಸಿ ಪಾಕ್‌ಗೆ ಬುದ್ಧಿ ಹೇಳಿ ಎಂದು ಶ್ವೇತಭವನದ ಅಧಿಕಾರಿಗಳ ಮುಂದೆ ಗೋಗರೆಯುತ್ತಿದ್ದ ಭಾರತವಲ್ಲ ಎಂಬ ಸಂದೇಶ ಜಗತ್ತಿಗೆ ನೀಡಿದೆ. ಭಾರತದ ಇಂದಿನ ಶಕ್ತಿ ಸಾಮರ್ಥ್ಯವನ್ನು ಜಗತ್ತು ಗುರುತಿಸಿ ಗೌರವಿಸುತ್ತಿದೆ.

ಆಳಂದದಲ್ಲೂ 6018 ಮತಗಳ್ಳತನ ಆರೋಪ

ರಾಹುಲ್ ಗಾಂಧಿ ಜೊತೆ ಮತದಾರರ ಪಟ್ಟಿಯಿಂದ ಕೈಬಿಟ್ಟವರು ಪ್ರತ್ಯಕ್ಷ

ನವದೆಹಲಿ,ಸೆ.18– ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಮತಗಳ್ಳತನ ಆರೋಪಕ್ಕೆ ಸಂಬಂಧಿಸಿದಂತೆ ಇಂದು (ಸೆ.18) ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಭಾರೀ ಆರೋಪಗಳನ್ನು ಮಾಡಿದ್ದಾರೆ. ಈ ಬಾರಿಯೂ ಕರ್ನಾಟಕದ ಮತಗಳ್ಳತನದ ಬಗ್ಗೆ ಮಾತನಾಡಿದ್ದು, ಆಳಂದದಲ್ಲಿ ಒಟ್ಟು 6,018 ಮತಗಳನ್ನು ಕಳ್ಳತನ ಮಾಡಲಾಗಿದೆ ಎಂದು ಆರೋಪ ಮಾಡಿದ್ದಾರೆ.

ತಮ್ಮ ಪತ್ರಿಕಾಗೋಷ್ಠಿಯಲ್ಲಿ ಮತದಾರರ ಪಟ್ಟಿಯಿಂದ ಕೈಬಿಡಲಾದ ಮತದಾರರನ್ನು ವೇದಿಕೆ ಮೇಲೆ ಪರಿಚಯಿಸಿದ್ದಾರೆ. ಮೊದಲು ಗೋದಾಭಾಯಿ ಎಂಬ ಮಹಿಳೆಯ ಹೇಳಿಕೆಯ ವಿಡಿಯೋ ಪ್ರದರ್ಶಿಸಿದ ರಾಹುಲ್ ಗಾಂಧಿ, ಆ ನಂತರ, ಮತದಾರರ ಪಟ್ಟಿಯಿಂದ ಕೈಬಿಡಲಾದ ವ್ಯಕ್ತಿ ಮತ್ತು ಓರ್ವ ಯುವತಿಯನ್ನು ನೇರವಾಗಿ ಪರಿಚಯಿಸಿದರು.



ವೇದಿಕೆಯಲ್ಲಿ ಮಾತನಾಡಿದ ಆಳಂದದ ವ್ಯಕ್ತಿ ನನ್ನ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾದ ಸಂಗತಿ ನನಗೆ ತಡವಾಗಿ ಗೊತ್ತಾಯಿತು. ನಂತರ ಈ ಕುರಿತು ದೂರು ದಾಖಲಿಸಿದ ಬಳಿಕವೂ, ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಆರೋಪಿಸಿದರು. ಕನ್ನಡದಲ್ಲಿ ಮಾತನಾಡಿದ ಈ ವ್ಯಕ್ತಿ ಹೇಳಿದ್ದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಲಹೆಗಾರ ಬಿ.ಆರ್. ಪಾಟೀಲ್ ಹಿಂದಿ ಭಾಷೆಗೆ ಭಾಷಾಂತರಿಸಿದರು. ಆ ಬಳಿಕ ಮಾತನಾಡಿದ ರಾಹುಲ್ ಗಾಂಧಿ, ಈ ಚುನಾವಣಾ ಅಕ್ರಮಗಳ ವಿರುದ್ಧ ಕಿಡಿಕಾರಿದರು.

ಪತ್ರಿಕಾಗೋಷ್ಠಿಯುದ್ದಕ್ಕೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ವಿರುದ್ಧ ಹರಿಹಾಯ್ದ ರಾಹುಲ್ ಗಾಂಧಿ, ಮುಖ್ಯ ಚುನಾವಣಾ ಆಯುಕ್ತರು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಳು ಮಾಡುತ್ತಿರುವ ಶಕ್ತಿಗಳ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ಕಳೆದ ಬಾರಿಯ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಗಾಂಧಿ ಮಹದೇವಪುರ ಮತಗಳ್ಳತನ ಆರೋಪ ಮಾಡಿದ್ದರು.

ಕರ್ನಾಟಕದ ವಿವಿಧ ಲೋಕಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಮತಗಳ್ಳತನದ ಬಗ್ಗೆ, ರಾಜ್ಯದ ಸಿಐಡಿ ಒಟ್ಟು 18 ಬಾರಿ ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಆದರೆ ಆಯೋಗ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ರಾಹುಲ್ ಗಾಂಧಿ ಪತ್ರಿಕಾಗೋಷ್ಠಿಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕರ್ನಾಟಕದ ಸಿಐಡಿ ಮತದಾರರ ಡಿಲೀಟ್ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡುವಂತೆ ಕೇಳಿಕೊಂಡರೂ, ಕೇಂದ್ರ ಚುನಾವಣಾ ಆಯೋಗ ಯಾವುದೇ ಮಾಹಿತಿ ನೀಡುತ್ತಿಲ್ಲ ಎಂದು ಅವರು ಗಂಭೀರ ಆರೋಪ ಮಾಡಿದರು.

ಚುನಾವಣಾ ಆಯೋಗ ಸ್ಪಷ್ಟನೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕದ ಆಳಂದದಲ್ಲಿ ನಡೆದಿದೆ ಎನ್ನಲಾದ ಮತಗಳ್ಳತನದ ಕುರಿತ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಜೊತೆಗೆ ಸಾಕ್ಷಿಯಿಂದಲೂ ಮಾತನಾಡಿಸಿದ್ದಾರೆ. ಈ ಬಗ್ಗೆ ಕರ್ನಾಟಕ ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ.

2023ರ ಆಳಂದ ಕೇಸ್ ವಿಚಾರದಲ್ಲಿ ಈಗಾಗಲೇ ಎಫ್‌ಐಆರ್ ದಾಖಲಾಗಿದೆ. ಫಾರ್ಮ್ 7 ಮೂಲಕ ಆನ್‌ಲೈನ್‌ನಲ್ಲಿ 6,018 ಅಪ್ಲಿಕೇಶನ್ ಬಂದಿತ್ತು ದೊಡ್ಡ ಸಂಖ್ಯೆಯಲ್ಲಿ ಅಪ್ಲಿಕೇಶನ್ ಬಂದಾಗ ಸಹಜವಾಗಿ ಅನುಮಾನ ಬಂದು, ಪರಿಶೀಲನೆ ನಡೆಸಿದಾಗ ಬರೀ 24 ಅಪ್ಲಿಕೇಶನ್ ಮಾತ್ರ ದಾಖಲೆ ಸರಿಯಾಗಿದ್ದು, 5,994 ತಪ್ಪು ಮಾಹಿತಿಯಿಂದ ಕೂಡಿತ್ತು. ಹೀಗಾಗಿ ಇವೆಲ್ಲವನ್ನು ತಿರಸ್ಕರಿಸಲಾಯಿತು. ಡಿಲೀಟ್ ಮಾಡಲಾಗಿಲ್ಲ ಎಂದು ಹೇಳಿದೆ. ಅದಾದ ಬಳಿಕ ಆಳಂದ ಠಾಣೆಯಲ್ಲಿ ದೂರು ದಾಖಲು ಮಾಡಲಾಯಿತು. ಎಲ್ಲಾ ರೀತಿಯ ಪರಿಶೀಲನೆ ಮಾಡಿದ ಬಳಿಕ ಮುಖ್ಯ ಚುನಾವಣಾಧಿಕಾರಿ ನೇತೃತ್ವದಲ್ಲಿ ಸಭೆಯೂ ನಡೆಯಿತು. ತನಿಖಾಧಿಕಾರಿ, ಸೈಬರ್ ತಜ್ಞರ ಜೊತೆ ಈ ಬಗ್ಗೆ ವಿಶ್ಲೇಷಣೆ ನಡೆಸಲಾಯಿತು ಅಂತಾ ಸ್ಪಷ್ಟನೆ ನೀಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನ ವಿವಿಧೆಡೆ ಸಾಮಾಜಿಕ ಕಾರ್ಯಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ ಆಚರಣೆ



ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಹುಟ್ಟುಹಬ್ಬದ ಅಂಗವಾಗಿ ಚಾಮುಂಡಿಪುರಂನಲ್ಲಿ ಪೌರಕಾರ್ಮಿಕರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಟೀ, ಬ್ರೆಡ್ ಮತ್ತು ಬಾಳೆಹಣ್ಣು ವಿತರಿಸಿದರು.



ಶಾರದಾದೇವಿನಗರದಲ್ಲಿ ಪ್ರಧಾನಿ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ 'ನಮೋ ಸಂತೆ'ಯನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ಮೈಸೂರು,ಸೆ.18(ಎಂಕೆ)–ಮೈಸೂರಿನ ವಿವಿಧೆಡೆ ಹಲವು ಸಾಮಾಜಿಕ ಕಾರ್ಯಕ್ರಮಗಳ ಮೂಲಕ ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರಿನ ಚಾಮುಂಡಿಪುರಂನಲ್ಲಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಪೌರಕಾರ್ಮಿಕರಿಗೆ ಚಹಾ, ಬ್ರೆಡ್ ಮತ್ತು ಬಾಳೆಹಣ್ಣು ವಿತರಿಸುವ ಮೂಲಕ ಪ್ರಧಾನಿ ಮೋದಿಯವರ ಹುಟ್ಟುಹಬ್ಬ ಆಚರಿಸಲಾಯಿತು. ಈ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ದೇಶದ ಮುಂದಿನ ಭವಿಷ್ಯಕ್ಕಾಗಿ ಪ್ರಧಾನಿಗಳು ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಅಯೋಧ್ಯೆ ರಾಮ ಮಂದಿರ ನಿರ್ಮಾಣದ ಸಂಧರ್ಭದಲ್ಲಿ ಪೌರಕಾರ್ಮಿಕರ ಪಾದ ಪೂಜೆ ಮಾಡುವ ಮೂಲಕ ದೇಶದಲ್ಲಿ ಆರೋಗ್ಯಕರ ಸಮ ಸಮಾಜ ನಿರ್ಮಾಣಕ್ಕಾಗಿ ಪ್ರೇರಣೆಯಾಗಿದ್ದಾರೆ ಎಂದು ಸ್ಮರಿಸಿದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಎಂ.ಡಿ.ಪಾರ್ಥಸಾರಥಿ, ಅಪೂರ್ವ ಸ್ನೇಹ ಬಳಗದ ಸುರೇಶ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಉಪಾಧ್ಯಕ್ಷ ಜೋಗಿ ಮಂಜು, ಮುಖಂಡರಾದ ವಿಶ್ವೇಶ್ವರಯ್ಯ, ರಘು ಅರಸ್, ನಿರೂಪಕ ಅಜಯ್ ಶಾಸ್ತ್ರಿ, ಜೀವಧಾರ ಗಿರೀಶ್, ಪ್ರದೀಪ್, ಸಂದೀಪ್, ಕಿಶೋರ್, ದೂರ ರಾಜಣ್ಣ, ಶಿವಲಿಂಗ ಸ್ವಾಮಿ, ಆನಂದ್, ಸಚೀಂದ್ರ ಮತ್ತಿತರರಿದ್ದರು.

ಚಾಮುಂಡಿಪುರಂ: ಮೈಸೂರಿನ ಚಾಮುಂಡಿಪುರಂನಲ್ಲಿ ಪಾಲಿಕೆ ವಲಯ ಕಚೇರಿ ಆರೋಗ್ಯ ಅಧಿಕಾರಿ ಹೆಚ್.ಎಂ. ಶಿವಪ್ರಸಾದ್ ಹಾಗೂ ಪೌರಕಾರ್ಮಿಕ ನವೀಂದ್ರ ಅವರನ್ನು ಸನ್ಮಾನಿಸುವ ಮೂಲಕ ಮೋದಿಯವರ ಹುಟ್ಟುಹಬ್ಬ ಆಚರಿಸಲಾಯಿತು. ಹಾಗೆಯೇ ಸಾರ್ವಜನಿಕರಿಗೆ ಟೀ ಜೊತೆಗೆ ಕಜ್ಜಾಯ ವಿತರಿಸಲಾಯಿತು.

ಮಾಜಿ ಸಂಸದ ಪ್ರತಾಪ್‌ಸಿಂಹ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ರಘು ಅರಸ್, ಮುಖಂಡರಾದ ಚಂದ್ರಣ್ಣ, ಜಯರಾಮ್, ವಿದ್ಯಾ ಅರಸ್, ಮುಖಂಡ ಸಂದೀಪ್, ಚಂದ್ರಕಲಾ, ಪುರುಷೋತ್ತಮ್, ಶಿವಪ್ಪ, ಮುರಳಿಧರ್, ಮಂಜುಳ, ಲತಾ, ಕಿಶೋರ್ ಜೈನ್, ಮುರಳಿ, ಪ್ರದೀಪ್ ಕುಮಾರ್, ಮಹೇಶ್, ಅಡಿಗೆ ಕಂಟ್ರಾಕ್ಟ್ ಕುಮಾರ್, ಕಿರಣ್, ಅಂಬಳೆ ಶಿವಣ್ಣ, ವಿಜಯಾ, ಸಿಂಧೆ, ಧನುಷ್, ವಿನಯ್ ಸಾಗರ್, ಪವನ್, ಚೇತನ್, ಹೇಮಂತ್, ಬಸವರಾಜು, ನಿಶಾಂತ್ ಮತ್ತಿತರರಿದ್ದರು.

ನಮೋ ಸಂತೆ: ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದಿಂದ ಶಾರದಾದೇವಿನಗರದ ಪಾಲಿಕೆ ಕಚೇರಿ ಎದುರು ಪಾಳುಬಿದ್ದಿದ್ದ ಮಾರುಕಟ್ಟೆಯನ್ನು ಸ್ವಚ್ಛಗೊಳಿಸಿ ಪ್ರಧಾನಿಗಳ ಹುಟ್ಟುಹಬ್ಬದ ಅಂಗವಾಗಿ 'ನಮೋ ಸಂತೆ' ನಡೆಸಲಾಯಿತು. ಸಂಸದ ಯದವೀರ್ ನಮೋ ಸಂತೆ ಉದ್ಘಾಟಿಸಿ, ಸ್ವದೇಶಿ ಹಾಗೂ ಸಾವಯವ ಪದಾರ್ಥಗಳನ್ನು ವೀಕ್ಷಣೆ ಮಾಡಿದರಲ್ಲದೆ ಆತ್ಮನಿರ್ಭರ ಭಾರತ ಕಟ್ಟಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ನಮೋ ಸಂತೆ ಸಂಚಾಲಕ ಎಸ್.ತ್ಯಾಗರಾಜ್, ಸಹ–ಸಂಚಾಲಕ ಶಿವು ಪಟೇಲ್, ಮಂಡಲದ ಪ್ರಧಾನ ಕಾರ್ಯದರ್ಶಿ ಆರ್.ಸೋಮಶೇಖರ್, ಮುಖಂಡರಾದ ಹೆಚ್.ಜಿ.ರಾಜಮಣಿ, ಬಿ.ಸಿ.ಶಶಿಕಾಂತ್, ಹೆಚ್.ಎಸ್.ಹಿರಿಯಣ್ಣ, ಚಂದ್ರಶೇಖರ ಸ್ವಾಮಿ, ಎಸ್.ಮಹೇಶ್‌ಕುಮಾರ್, ರಂಗೇಶ್, ಸೋಮಣ್ಣ, ರಾಘವೇಂದ್ರ, ದೇವರಾಜ್, ಪುಟ್ಟಮ್ಮಣ್ಣಿ, ಮಂಜುಳಾ ಮತ್ತಿತರರು ಉಪಸ್ಥಿತರಿದ್ದರು.

ರಾಮಕೃಷ್ಣನಗರ: ಮೋದಿ ಅಭಿಮಾನಿ ಬಳಗದ ವತಿಯಿಂದ ರಾಮಕೃಷ್ಣನಗರ 'ಜಿ' ಬ್ಲಾಕ್‌ನಲ್ಲಿ ತಾಯಿ ಸ್ವರೂಪದ ಮಾತೆಯರಿಗೆ ಗೌರವ ಸಲ್ಲಿಸುವ ಮೂಲಕ ಪ್ರಧಾನಿಗಳ ಹುಟ್ಟುಹಬ್ಬ ಆಚರಿಸಲಾಯಿತು. ಅಂಕಣಕಾರ ನಂ.ಶ್ರೀಕಂಠ ಕುಮಾರ್, ಪಾಲಿಕೆ ಮಾಜಿ ಸದಸ್ಯ ಎಂ.ಕೆ.ಶಂಕರ್, ಮೋದಿ ಅಭಿಮಾನಿ ಬಳಗದ ಎನ್.ಗಂಗಾಧರ್, ಎನ್.ಶ್ರೀನಿವಾಸ್‌ಪ್ರಸಾದ್, ಚನ್ನಪ್ಪ ಮಹೇಶ್, ಕೃಷ್ಣಪ್ಪ ಕೆಂಪೇಗೌಡ, ಹರ್ಷ, ಪೂರ್ಣಿಮಾ, ಸುಕುಮಾರ್, ಶಶಿಧರ್ ಇನ್ನಿತರರಿದ್ದರು.

ಸೈನಿಕರಿಗೆ ಸನ್ಮಾನ: ಪ್ರಧಾನಿ ಮೋದಿ ಅವರ 75ನೇ ವರ್ಷದ ಜನುಮದಿನದ ಅಂಗವಾಗಿ ಖಾಸಗಿ ಹೋಟೆಲ್‌ನಲ್ಲಿ ಪ್ರತಾಪ್ ಸಿಂಹ ಅಭಿಮಾನಿ ಬಳಗ ಹಾಗೂ ಚಾಮರಾಜ ಕ್ಷೇತ್ರದ ವತಿಯಿಂದ 75 ಮಂದಿ ನಿವೃತ್ತ ಸೈನಿಕರನ್ನು ಸನ್ಮಾನಿಸಲಾಯಿತು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಸಾರ್ವಜನಿಕರು ನಿರ್ಭಯವಾಗಿ ಜೀವನ ನಡೆಸುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ನಮ್ಮ ದೇಶದ ಸೈನಿಕರು. ಯೋಧರು ಗಡಿ ಕಾಯದೆ ಹೋದರೆ, ಉಗ್ರರಿಂದ ನಾವೆಲ್ಲರೂ ಪ್ರಾಣ ರಕ್ಷಣೆ ಮಾಡಿಕೊಳ್ಳುವುದಕ್ಕೆ ಪರದಾಡುವ ಸ್ಥಿತಿ ನಿರ್ಮಾಣವಾಗುತ್ತಿತ್ತು. ಸೈನಿಕರು ಗಡಿಯಲ್ಲಿ ನಿದ್ದೆ ಬಿಟ್ಟು ನಮ್ಮ ದೇಶವನ್ನು ಕಾಪಾಡುತ್ತಿರುವರಿಂದಲೇ ನಾವಿಂದು ನೆಮ್ಮದಿಯಿಂದ ಕಣ್ಣು ಮುಚ್ಚಿ ನಿದ್ರಿಸಲು ಸಾಧ್ಯವಾಗಿದೆ ಎಂದರು.

ಪಾಲಿಕೆ ಮಾಜಿ ಸದಸ್ಯರಾದ ಎಂ.ಸತೀಶ್, ಗಿರೀಶ್‌ಪ್ರಸಾದ್, ಬಿ.ಉಮೇಶ, ಸುಬ್ಬಯ್ಯ, ಮುಖಂಡರಾದ ಎಸ್.ಕೆ. ದಿನೇಶ್, ದಿನೇಶ್‌ಗೌಡ, ರಾ.ಪರಮೇಶಗೌಡ, ಚೇತನ್‌ಗೌಡ, ಗುರುವಿನಾಯಕ್, ಭೈರಪ್ಪ, ಕೇಬಲ್ ವೆಂಕಟೇಶ್, ಪ್ರಮೋದ್, ಸುರೇಂದ್ರ, ಶ್ರವಣ್ ಮಾಲಿ, ವಿನೋದ್, ಸಂದೇಶ್, ಜಗದೀಶ್, ವಸಂತ ಮನೀಶ್, ನಾಗರಾಜ್, ಗಂಗಣ್ಣ, ಕಿರಣ್, ಚಂದ್ರಕಲಾ, ಪ್ರಕಾಶ್, ನಿಖಿಲ್, ಜಯಪ್ಪ, ಮಹೇಶ್ ಮತ್ತಿತರರಿದ್ದರು.



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 75ನೇ ವರ್ಷದ ಜನುಮದಿನದ ಅಂಗವಾಗಿ 75 ಮಂದಿ ನಿವೃತ್ತ ಸೈನಿಕರನ್ನು ಸನ್ಮಾನಿಸಲಾಯಿತು.

ಜಾತಿಗಣತಿ ವೇಳೆ ಮಡಿವಾಳ ಸಮುದಾಯದವರು 'ಮಡಿವಾಳ' ಎಂದು ನಮೂದಿಸಲು ಮನವಿ

ಮೈಸೂರು,ಸೆ.18(ಜಿಎ)–ಮಡಿವಾಳ ಸಮುದಾಯಕ್ಕೆ ರಾಜ್ಯದ ನಾನಾ ಭಾಗಗಳಲ್ಲಿ ವಿವಿಧ ಹೆಸರುಗಳಿವೆ. ಆದರೆ ಒಟ್ಟಾರೆ ಜನಸಂಖ್ಯೆ ನಿಖರವಾಗಿ ತಿಳಿದುಬಂದಲ್ಲಿ ವಿವಿಧ ಸವಲತ್ತು ಪಡೆಯಲು ಸಹಕಾರಿಯಾಗುತ್ತದೆ. ಹೀಗಾಗಿ ಸಮುದಾಯದವರು ರಾಜ್ಯ ಸರ್ಕಾರದ ಜನಗಣತಿ ವೇಳೆ ಜಾತಿ ಕಾಲಂನಲ್ಲಿ ಮಡಿವಾಳ ಎಂದೇ ಬರೆಸಬೇಕೆಂದು ಜಿಲ್ಲಾ ಮಡಿವಾಳರ ಮಹಾ ಸಂಘದ ಅಧ್ಯಕ್ಷ ಚನ್ನಕೇಶವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮುದಾಯ ಇದುವರೆಗೆ ಬೇರೆ ಬೇರೆ ಉಪಜಾತಿಗಳ ಹೆಸರಿನಲ್ಲಿ ನೋಂದಾಯಿಸಿಕೊಳ್ಳುವುದು ನಡೆದಿದೆ. ಇದರಿಂದಾಗಿ ರಾಜ್ಯದಲ್ಲಿ ಈ ಸಮುದಾಯದ ಸಂಖ್ಯೆ ಕಡಿಮೆ ಇದೆ ಎಂಬ ನಂಬಿಕೆ ಬಂದು ವಿವಿಧ ಸವಲತ್ತು ಸರ್ಕಾರದಿಂದ ದೊರಕುತ್ತಿಲ್ಲ. ಆದ್ದರಿಂದ ಸಮೀಕ್ಷೆ ವೇಳೆ ಕೇವಲ ಮಡಿವಾಳ ಎಂದೇ ನಮೂದಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಳೆದ ಮೂರು ದಶಕಗಳಿಂದ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಹೋರಾಟಗಳು ನಡೆದಿವೆ. ಆದರೆ ಇದುವರೆಗೆ ಯಾವುದೇ ಸರ್ಕಾರ ಗಮನ ನೀಡಿಲ್ಲ. ಸಿದ್ದರಾಮಯ್ಯ ಅವರನ್ನು ಕಳೆದ ಎರಡು ದಶಕಗಳಿಂದ ಸಮುದಾಯ ಬೆಂಬಲಿಸುತ್ತಲೇ ಬಂದಿದೆ. ಈಗಲಾದರೂ ಸಿಎಂ ಸಿದ್ದರಾಮಯ್ಯ ಅವರು ಸಂಪುಟ ಸಭೆಯಲ್ಲಿ ಈ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮುದ್ದುರಾಜು, ಶಿವಣ್ಣ, ರವಿಚಂದ್ರ, ದುದ್ದಗೆರೆ ಜಯರಾಮು, ಕುಕ್ಕರಹಳ್ಳಿ ಮಡಿಕಟ್ಟೆ ಶಂಕರ್, ಸಿದ್ದರಾಜು, ಪ್ರಶಾಂತ್, ಶಂಕರ್, ರಂಗಸ್ವಾಮಿ ಉಪಸ್ಥಿತರಿದ್ದರು.

'ಆರೋಗ್ಯ ಮತ್ತು ಸದೃಢತೆಗಾಗಿ' ಮ್ಯಾರಥಾನ್



ಮೈಸೂರಿನ ವಿಜಯನಗರದಲ್ಲಿರುವ ಮುಡಾ ಮೈದಾನದಲ್ಲಿ ವಿಜಯನಗರ ಸೇವಾ ಟ್ರಸ್ಟ್‌ನಿಂದ 'ಆರೋಗ್ಯ ಮತ್ತು ಸದೃಢತೆಗಾಗಿ' ಮಹಿಳೆಯರು, ಯುವಕರು, ಮಕ್ಕಳಿಂದ ಮ್ಯಾರಥಾನ್ ಏರ್ಪಡಿಸಲಾಗಿತ್ತು. ಮಹಿಳಾ ಉದ್ಯಮಿ ಖುಷಿ ವಿನು ಮ್ಯಾರಥಾನ್‌ಗೆ ಚಾಲನೆ ನೀಡಿದರು. ಪೊಲೀಸ್ ಅಧಿಕಾರಿಗಳು, ಟ್ರಸ್ಟ್‌ನ ಪದಾಧಿಕಾರಿಗಳು ಭಾಗವಹಿಸಿದ್ದರು.

ಮೀಸಲಾತಿ ಮುನ್ನೋಟ: ನಾಳೆ ವಿಚಾರ ಗೋಷ್ಠಿ

ಮೈಸೂರು,ಸೆ.18(ಜಿಎ)–ಭೀಮ ಬಲ ಬಳಗ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ಸಂಯುಕ್ತಾಶ್ರಯದಲ್ಲಿ ಸೆ.20ರಂದು ಬೆಳಗ್ಗೆ 10.30ಕ್ಕೆ ಮೈಸೂರು ವಿವಿ ಇಎಂಎಂಆರ್‌ಸಿ ಸಭಾಂಗಣದಲ್ಲಿ ಮೀಸಲಾತಿ ಮುನ್ನೋಟ ಕುರಿತ ವಿಚಾರಗೋಷ್ಠಿ ಆಯೋಜಿಸಲಾಗಿದೆ ಎಂದು ಮುಖಂಡ ಹೆಚ್.ಎಸ್.ಗಣೇಶಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ಎನ್.ಮಹೇಶ್ ವಿಷಯ ಪ್ರಸ್ತುತಪಡಿಸುವರು. ಮಾಜಿ ಶಾಸಕ ಎಂ.ಅಶ್ವಿನ್‌ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಬಿ.ಶಿವಣ್ಣ ಅಧ್ಯಕ್ಷತೆ ವಹಿಸುವರು. ಮೀಸಲಾತಿ ವಿಸ್ತಾರ ಕುರಿತು ಡಾ.ನವೀನ್ ಮನಿಯ ಮಾತನಾಡುವರು. ಎಂ.ಮಹದೇವಯ್ಯ, ವರಹಳ್ಳಿ ಆನಂದ, ವೇದಾವತಿ, ಡಾ.ಅಶ್ವಿನ್ ಶರತ್, ಸಾಮ್ರಾಟ್ ಸುಂದರೇಶನ್, ಕಾರ್ತಿಕ್ ಮತ್ತಿತರರು ಭಾಗವಹಿಸಲಿದ್ದಾರೆ. ಸರ್ಕಾರ ಒಳ ಮೀಸಲಾತಿ ಪ್ರಕಟಿಸಿದೆ. ಆದರೆ ಇದರಿಂದ ಮುಂದೆ ಎದುರಾಗಬಹುದಾದ ಸವಾಲು, ಅಡೆ ತಡೆ ಏನು? ಬಡ್ತಿ ಮೀಸಲು ಹೇಗೆ? ರೋಸ್ಟರ್ ಪದ್ಧತಿ ಮೊದಲಾದ ವಿಷಯಗಳ ಬಗ್ಗೆ ಕಾರ್ಯಕ್ರಮದಲ್ಲಿ ಬೆಳಕು ಚೆಲ್ಲಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಚಾಲಕ ಪರಮಾನಂದ್, ಡಾ.ನಟರಾಜ್ ಶಿವಣ್ಣ ಪಲ್ಲವಿ ಬೇಗಂ, ಡಾ.ಹೂವಿನ ಸಿದ್ದು ಇದ್ದರು.

ಸೆ.22ರಿಂದ ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ

ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ

ಮೈಸೂರು,ಸೆ.18– ಮೈಸೂರು ದಸರಾ ಮಹೋತ್ಸವ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ವತಿಯಿಂದ ಸೆ.22ರಿಂದ 30ರವರೆಗೆ ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸೆ.22ರಂದು ಸಂಜೆ 4 ಗಂಟೆಗೆ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ) ಸಿದ್ಧಾರ್ಥನಗರ, (ಹೊಸ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ) ಮೈಸೂರು ಇಲ್ಲಿ ಆಯೋಜಿಸಲಾಗಿದೆ.

ಸೆ.28, ವಾರ್ಷಿಕ ಮಹಾಸಭೆ

ಮೈಸೂರು, ಸೆ.18– ಮೈಸೂರಿನ ಬಂಜಾರ (ಲಂಬಾಣಿ) ಸೇವಾ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಸೆ.28ರಂದು ಬೆಳಗ್ಗೆ 10 ಗಂಟೆಗೆ ವಿಜಯನಗರ ಎರಡನೇ ಹಂತದಲ್ಲಿರುವ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಸುಂದರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಂಘದ ಸರ್ವ ಸದಸ್ಯರು ಸಕಾಲಕ್ಕೆ ಸಭೆಗೆ ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ಅಯೂಬ್‌ಖಾನ್‌ಗೆ ಸನ್ಮಾನ...



ಇತ್ತೀಚೆಗೆ ನಡೆದ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆಯ ಯಶಸ್ಸಿಗೆ ಸಹಕರಿಸಿದ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಅವರನ್ನು ಬ್ಯಾಂಕಿನ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಸಿ.ಚಂದ್ರಶೇಖರ್, ಎನ್.ಯೋಗಾನಂದ್, ಕೆ.ಗಿರೀಶ್, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇನ್ನಿತರರು ಆತ್ಮೀಯವಾಗಿ ಸನ್ಮಾನಿಸಿದರು.

ಪಿಎಂ ಸ್ವ–ನಿಧಿಯಡಿ ಬೀದಿಬದಿ ವ್ಯಾಪಾರಿಗಳ 'ಲೋಕ ಕಲ್ಯಾಣ ಮೇಳ'

ಸಾಲ ಸೌಲಭ್ಯ ಕಲ್ಪಿಸಲು 16 ದಿನಗಳ ಮಹತ್ವದ ಕಾರ್ಯಕ್ರಮ

ಮೈಸೂರು, ಸೆ.18 (ಎಂಕೆ)– ಮೈಸೂರು ಮಹಾನಗರಪಾಲಿಕೆ ವತಿಯಿಂದ ಪಿ.ಎಂ ಸ್ವ–ನಿಧಿ(ಪ್ರಧಾನ ಮಂತ್ರಿ ಆತ್ಮ ನಿರ್ಭರ್ ನಿಧಿ ಯೋಜನೆ) ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳಿಗಾಗಿ 16 ದಿನಗಳ 'ಲೋಕ ಕಲ್ಯಾಣ ಮೇಳ' ಆಯೋಜಿಸಲಾಗಿದೆ.

ಬೀದಿ ಬದಿ ವ್ಯಾಪಾರಿಗಳಿಗೆ ಮೊದಲ ಹಂತದಲ್ಲಿ 15 ಸಾವಿರ ರೂ., ಎರಡನೇ ಹಂತದಲ್ಲಿ 25 ಸಾವಿರ ರೂ., ಮೂರನೇ ಹಂತದಲ್ಲಿ 50 ಸಾವಿರ ರೂ. ಸಾಲ–ಸೌಲಭ್ಯ ನೀಡುವ ಯೋಜನೆ ಇದಾಗಿದ್ದು, ಮೈಸೂರಿನ ಪ್ರಮುಖ ಬ್ಯಾಂಕ್‌ಗಳಲ್ಲಿ ಅ.2ರವರೆಗೆ ಲೋಕ ಕಲ್ಯಾಣ ಮೇಳ ನಡೆಯಲಿದೆ.

ಮೇಳದಲ್ಲಿ ಪರಿಷ್ಕೃತ ಸಾಲಕ್ಕೆ ಹೊಸ ಅರ್ಜಿಗಳ ಸ್ವೀಕಾರ, ಬಾಕಿ ಉಳಿದ ಅರ್ಜಿಗಳಿಗೆ ಸಾಲ ಮರುಪಾವತಿ, ಮಂಜೂರಾತಿಯಾದ ಸಾಲಗಳ ವಿತರಣೆ, ತಿರಸ್ಕೃತ ಅರ್ಜಿಗಳಿಗೆ ಬ್ಯಾಂಕಿಗೆ ಮರು ಸಲ್ಲಿಕೆ, ಡಿಜಿಟಲ್ ವಹಿವಾಟುಗಳಿಗೆ ಉತ್ತೇಜನ ಮತ್ತು ಪ್ರೋತ್ಸಾಹ ನೀಡುವುದು, ಸಾಲ ಮರುಪಾವತಿಗೆ ಶೇ.7 ರಷ್ಟು ಬಡ್ಡಿ ಸಹಾಯಧನ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. www.mysurucity.mrc.gov.in/en ಮೂಲಕ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಸಾಧಕರಿಗೆ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಪ್ರದಾನ



ಮೈಸೂರು ಶರಣ ಮಂಡಲಿ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ನೀಡಲಾಯಿತು.

ಮೈಸೂರು,ಸೆ.18(ಜಿಎ)–ಮೈಸೂರು ಶರಣ ಮಂಡಲಿಯ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಸಮಾಜ ಸೇವಕ ಮಹೇಶಶೆಣೈ, 'ಮೈಸೂರು ಮಿತ್ರ' ವರದಿಗಾರ ಎಂ.ಟಿ.ಯೋಗೇಶ್ ಕುಮಾರ್, ಕೈಗಾರಿಕೋದ್ಯಮಿ ಆರ್.ವೀರೇಶ್ ಅವರಿಗೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಪ್ರಧಾನ ಮಾಡಿದರು.

ನಂತರ ಮಾತನಾಡಿದ ಅವರು, ಮೈಸೂರು ಶರಣ ಮಂಡಲಿಯೂ ಸಮಾಜದ ಏಳಿಗೆಗಾಗಿ ತಮ್ಮ ಕ್ಷೇತ್ರದಲ್ಲಿ ಶ್ರಮಿಸುತ್ತಿರುವರನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಭಾಜನರಾದ ಸಾಧಕರಿಗೆ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತಿ ಚಿಂತಕ ಕೆರಘುರಾಂ ವಾಜಪೇಯಿ, ಶರಣ ಮಂಡಲಿ ಅಧ್ಯಕ್ಷ ಮುಗೂರು ನಂಜುಂಡಸ್ವಾಮಿ, ಗುರುಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಪಿತೃ ದೋಷ ಪರಿಹಾರ

ಮೈಸೂರು,ಸೆ.18–ಪಿತೃ ದೋಷ ಪರಿಹಾರ ಹಾಗೂ ಮಹಾಲಯ ಪಿತೃ ಪಕ್ಷದ ಅಂಗವಾಗಿ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸೆ.20ರ ಶನಿವಾರ ಮಹಾಲಯ ಪಿತೃ ಪಕ್ಷದ ಅಂಗವಾಗಿ ಪಿತೃ ದೋಷ ಪರಿಹಾರ ಮಾಡಲಾಗುತ್ತದೆ. ರುದ್ರ ಶಾಂತಿ ಪುರುಷ ಸೂಕ್ತ ಶ್ರೀ ಸೂಕ್ತ ಹೋಮದಿಂದ ಪಿತೃ ದೋಷವುಳ್ಳ ಭಕ್ತಾದಿಗಳು ಪಿತೃ ಶಾಂತಿ ಹೋಮದಲ್ಲಿ ಭಾಗವಹಿಸಬಹುದು. ಸಾಮೂಹಿಕವಾಗಿ ಸಂಕಲ್ಪ ಮಾಡಿಸಲಾಗುತ್ತದೆ. ಆಸಕ್ತಿವುಳ್ಳ ಪಿತೃದೋಷ ಪರಿಹಾರ ಮಾಡಿಕೊಳ್ಳುವವರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ವಿದ್ವಾನ್ ಎಸ್.ಕೃಷ್ಣಮೂರ್ತಿ ಮೈಸೂರ್, ಮೊ.ಸಂ.9342112477 ಸಂಪರ್ಕಿಸಲು ಕೋರಲಾಗಿದೆ.

ಜಾತಿಗಣತಿ ವೇಳೆ ಪರಿಶಿಷ್ಟ ಜಾತಿ, ಪಂಗಡದವರು ಧರ್ಮ ಕಾಲಂನಲ್ಲಿ ಬೌದ್ಧ ಎಂದು ಬರೆಸಲು ಮನವಿ


ಮೈಸೂರು,ಸೆ.18(ಜಿಎ)–ಜಾತಿಗಣತಿ ವೇಳೆ ಪರಿಶಿಷ್ಟ ಜಾತಿ, ಪಂಗಡದವರು ಧರ್ಮ ಕಾಲಂನಲ್ಲಿ ಬೌದ್ಧ ಎಂದು ಬರೆಸುವುದು ಸೂಕ್ತ ಎಂದು ಕರ್ನಾಟಕ ಬುದ್ಧ ಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಶೂದ್ರ, ಅತಿ ಶೂದ್ರರು ಈ ದೇಶದ ಆದಿ ಜನರು ಮತ್ತು ಬೌದ್ಧರು. ಪ್ರತಿ ಕ್ರಾಂತಿಯ ಸಂದರ್ಭದಲ್ಲಿ ಸಂಸ್ಕೃತೀಕರಣಕ್ಕೆ ಒಳಗಾಗಿ ಬ್ರಾಹ್ಮಣರ ತಂತ್ರಗಾರಿಕೆಯಿಂದ ಹಿಂದೂಗಳೆನಿಸಿದ್ದಾರೆ ಎಂದರು.

ಜಾತಿ ವ್ಯವಸ್ಥೆಯ ಶ್ರೇಣಿಯಲ್ಲಿ ಕೆಳಗಡೆ ನೂಕಲ್ಪಟ್ಟ ಅಸ್ಪೃಶ್ಯರು ಜಾತಿ ವ್ಯವಸ್ಥೆಯ ಹೊರಗಿದ್ದಾರೆ. ಆದ್ದರಿಂದಲೇ ಅವರನ್ನು ಸವರ್ಣೀಯರು ಎಂದು ಸಹಾ ಕರೆಯುತ್ತಾರೆ. ಈ ಸತ್ಯವನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿದ್ದರೂ ಅರಗಿಸಿಕೊಳ್ಳಲಾಗದೇ ಪರಿತಪಿಸುತ್ತಿದ್ದಾರೆ. ಹೀಗಾಗಿ ಜಾತಿಗಣತಿಯಲ್ಲಿ ಎಲ್ಲ ಅಸ್ಪೃಶ್ಯ ಸಮುದಾಯ ಧರ್ಮದ ಕಾಲಂನಲ್ಲಿ ಬೌದ್ಧ ಎಂದು ಬರೆಯಿಸಿಕೊಳ್ಳಬೇಕು. ಬೇಕಿದ್ದರೆ ಜಾತಿ ಕಾಲಂನಲ್ಲಿ ತಮ್ಮ ಮೂಲ ಜಾತಿಯ ಹೆಸರನ್ನು ಬರೆಯಿಸಬಹುದಾಗಿದೆ. ಇದರಿಂದ ಮೀಸಲಾತಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ಹರಿಹರ ಆನಂದಸ್ವಾಮಿ, ಶಿವರಾಜು, ಪ್ರೊ.ಟಿ.ನಂಜುಂಡಯ್ಯ ಉಪಸ್ಥಿತರಿದ್ದರು.

ದೇಶ – ವಿದೇಶ

ಸೆಂಟ್ರಲ್ ಪೆನ್ಸಿಲ್ವೇನಿಯಾದಲ್ಲಿ ಗುಂಡಿನ ದಾಳಿ: ಮೂವರು ಅಧಿಕಾರಿಗಳು ಸಾವು




ವಾಷಿಂಗ್ಟನ್: ಅಮೆರಿಕದಲ್ಲಿ ಮತ್ತೆ ಗುಂಡಿನ ದಾಳಿ ನಡೆದಿದ್ದು, ಬುಧವಾರ ಗ್ರಾಮೀಣ ಮಧ್ಯ ಪೆನ್ಸಿಲ್ವೇನಿಯಾದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಮೂವರು ಪೊಲೀಸ್ ಅಧಿಕಾರಿಗಳು ಸಾವನ್ನಪ್ಪಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಗುಂಡು ಹಾರಿಸಿದವನನ್ನು ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ಗುಂಡಿನ ದಾಳಿ ನಡೆದಾಗ ಅಧಿಕಾರಿಗಳು ಆತನನ್ನು ಬಂಧಿಸಲು ಮುಂದಾದರು. ಆದರೆ ಆತ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದ ಎಂದು ತಿಳಿದುಬಂದಿದೆ.


ಇದು ಯಾರ್ಕ್‌ಕೌಂಟಿ ಮತ್ತು ಪೆನ್ಸಿಲ್ವೇನಿಯಾದ ಸಂಪೂರ್ಣ ಕಾಮನ್‌ವೆಲ್ತ್‌ಗೆ ಸಂಪೂರ್ಣವಾಗಿ ದುರಂತ ಮತ್ತು ವಿನಾಶಕಾರಿ ದಿನವಾಗಿದೆ. ಮೃತರ ಕುಟುಂಬಗಳಿಗಾಗಿ ಪ್ರಾರ್ಥನೆ ಸಲ್ಲಿಸುತ್ತೇವೆ. ದುಃಖವನ್ನು ಬರಿಸುವ ಶಕ್ತಿಯನ್ನು ದೇವರು ಅವರಿಗೆ ನೀಡಲಿ ಎಂದು ರಾಜ್ಯ ಪೊಲೀಸ್ ಆಯುಕ್ತ ಕರ್ನಲ್ ಕ್ರಿಸ್ಟೋಫರ್ ಪ್ಯಾರಿಸ್ ಹೇಳಿದ್ದಾರೆ. ಸದ್ಯ ಕುಟುಂಬಸ್ಥರಿಗೆ ಶವ ಹಸ್ತಾಂತರಿಸಲಾಗಿದೆ. ಗವರ್ನರ್ ಕೂಡ ಆಸ್ಪತ್ರೆಗೆ ಆಗಮಿಸಿ ಅಂತಿಮ ನಮನ ಸಲ್ಲಿಸಿದರು.

ಮುಂಬೈ–ಬೆಂಗ್ಳೂರು ಹೈವೇಯಲ್ಲಿ ಅಪಘಾತ: ಇಬ್ಬರ ದುರಂತ ಸಾವು



ಮುಂಬೈ: ಲೋನಾವಾಲಾ ಟ್ರಿಪ್‌ದಿಂದ ವಾಪಸ್ಸಾಗುತ್ತಿದ್ದ ಕಾರೊಂದು ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿರುವ ಘಟನೆ ಮುಂಬೈ–ಬೆಂಗಳೂರು ಹೆದ್ದಾರಿಯಲ್ಲಿ ನಡೆದಿದೆ. ಮೃತರನ್ನು ದಿವ್ಯಾ ರಾಜ್ ಸಿಂಗ್ ರಾಥೋಡ್ (20), ಸಿದ್ಧಾಂತ್ ಆನಂದ್ ಶೇಖರ್ (20) ಎಂದು ಗುರುತಿಸಲಾಗಿದೆ. ಇನ್ನೂ ಹರ್ಷ್ ಮಿಶ್ರಾ (21), ನಿಹಾರ್ ತಂಬೋಲಿ (20) ಗಾಯಗೊಂಡಿದ್ದಾರೆ. ನಾಲ್ವರು ಪುಣೆಯ ಸಿಂಬಿಯೋಸಿಸ್ ಅಂತಾರಾಷ್ಟ್ರೀಯ ವಿವಿಯ ಬಿಬಿಎ ವಿದ್ಯಾರ್ಥಿಗಳು. ಬುಧವಾರ ನಾಲ್ವರು ವಿದ್ಯಾರ್ಥಿಗಳು ಲೋನಾವಾಲಾಕ್ಕೆ ತೆರಳಿದ್ದರು. ಗುರುವಾರ ಬೆಳಗ್ಗೆ 5:45ರ ಸುಮಾರಿಗೆ ಮಾರುತಿ ಸ್ವಿಫ್ಟ್ ಕಾರಿನಲ್ಲಿ ಕ್ಯಾಂಪಸ್‌ಗೆ ವಾಪಸ್ಸಾಗುತ್ತಿದ್ದರು. ಈ ವೇಳೆ ಮುಂಬೈ–ಬೆಂಗಳೂರು ಹೆದ್ದಾರಿಯಲ್ಲಿ ಬರುತ್ತಿದ್ದಾಗ ಪುಣೆಯ ಈದ್ಗಾ ಮೈದಾನದ ಬಳಿ ನಿಂತಿದ್ದ ಕಂಟೇನರ್ ಟ್ರಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನಿಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಖಾಸಗಿ ಆಸ್ಪತ್ರೆ ದಾಖಲಿಸಲಾಗಿದೆ.


ಆಂಟಿಫಾವನ್ನು ಪ್ರಮುಖ ಉಗ್ರ ಸಂಘಟನೆಯೆಂದು ಘೋಷಿಸುತ್ತೇವೆ



ವಾಷಿಂಗ್ಟನ್: ಅಮೆರಿಕಾದಲ್ಲಿ ಎಡಪಂಥೀಯ ಗುಂಪುಗಳನ್ನು ವಿವರಿಸಲು ಬಳಸುವ 'ಫ್ಯಾಸಿಸ್ಟ್ ವಿರೋಧಿ' ಎಂಬ ಪದದ ಸಂಕ್ಷಿಪ್ತ ರೂಪವಾದ 'ಆಂಟಿಫಾ'ವನ್ನು ಒಂದು ಪ್ರಮುಖ ಭಯೋತ್ಪಾದಕ ಸಂಘಟನೆ ಎಂದು ಘೋಷಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ,


ಆಂಟಿಫಾಗೆ ಹಣಕಾಸು ಒದಗಿಸುವವರನ್ನು ಅತ್ಯುನ್ನತ ಕಾನೂನು ಮಾನದಂಡಗಳು ಮತ್ತು ಅಭ್ಯಾಸಗಳಿಗೆ ಅನುಗುಣವಾಗಿ ಸಂಪೂರ್ಣವಾಗಿ ತನಿಖೆ ಮಾಡಬೇಕೆಂದು ನಾನು ಶಿಫಾರಸು ಮಾಡುತ್ತೇನೆ ಎಂದು ಟ್ರಂಪ್ ಟ್ರೂತ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ, ಆಂಟಿಫಾವನ್ನು ಅನಾರೋಗ್ಯ, ಅಪಾಯಕಾರಿ, ಮೂಲಭೂತ ಎಡಪಂಥೀಯ ವಿಪತ್ತು ಎಂದು ಕರೆದಿದ್ದಾರೆ. ಬಲಪಂಥೀಯ ಕಾರ್ಯಕರ್ತ ಚಾರ್ಲಿ ಕಿರ್ಕ್ ಹತ್ಯೆಗೆ ಸಂಬಂಧಿಸಿದಂತೆ ದೇಶೀಯ ಭಯೋತ್ಪಾದನಾ ಚಳವಳಿಯನ್ನು ನಾಶಪಡಿಸುವುದಾಗಿ ಶ್ವೇತಭವನದ ಹಿರಿಯ ಅಧಿಕಾರಿ ಸ್ಟೀಫನ್ ಮಿಲ್ಲರ್ ಶಪಥ ಮಾಡಿದ್ದಾರೆ. ಪೊಲೀಸರ ಮೇಲಿನ ಹಿಂಸಾಚಾರದಿಂದ ಹಿಡಿದು ಯುಎಸ್ ಕ್ಯಾಪಿಟಲ್ ಗಲಭೆಯನ್ನು ನಡೆಸುವುದರವರೆಗೆ ಆಂಟಿಫಾ ಮೇಲೆ ಆರೋಪಗಳಿವೆ.

ಮಗಳನ್ನು ಸರೋವರಕ್ಕೆ ಎಸೆದ ತಾಯಿ



ಅಜ್ಮೀರ್: ಮೂರು ವರ್ಷದ ತನ್ನ ತಾಯಿಯೇ ಸರೋವರಕ್ಕೆ ಎಸೆದು ಕೊಲೆ ಮಾಡಿರುವ ಘಟನೆ ರಾಜಸ್ಥಾನದ ಅಜ್ಮೀರ್‌ನಲ್ಲಿ ನಡೆದಿದೆ. ಪೊಲೀಸರು ಮಹಿಳೆಯನ್ನು ಬಂಧಿಸಿದ್ದಾರೆ. ಆರೋಪಿಯನ್ನು ಅಂಜಲಿ ಅಲಿಯಾಸ್ ಪ್ರಿಯಾಸಿಂಗ್ ಎಂದು ಗುರುತಿಸಲಾಗಿದೆ. ಆಕೆ ಮೂಲತಃ ಉತ್ತರ ಪ್ರದೇಶದ ಬನಾರಸ್ ಜಿಲ್ಲೆಯ ಸಕುಲ್ಪುರದವಳು. ಆಕೆ ಅಜ್ಮೀರ್‌ನ ದತ್ತನಗರ ಪ್ರದೇಶದಲ್ಲಿ ಅಕ್ಲೇಶ್ ಗುಪ್ತಾ ಎಂಬವರೊಂದಿಗೆ ಲಿವ್–ಇನ್ ಸಂಬಂಧದಲ್ಲಿದ್ದಳು. ಅಂಜಲಿ ತನ್ನ ಪತಿಯಿಂದ ಬೇರ್ಪಟ್ಟಿದ್ದಳು. ಅವರಿಗೆ 3 ವರ್ಷದ ಮಗಳಿದ್ದಳು. ಪೊಲೀಸರ ಮಾಹಿತಿ ಪ್ರಕಾರ, ಕ್ರಿಶ್ಚಿಯನ್ ಗಂಜ್ ಠಾಣೆಯ ಪೊಲೀಸರು ಬೆಳಗಿನ ಜಾವ 4 ಗಂಟೆ ಸುಮಾರಿಗೆ ಬಜರಂಗ್ ಘರ್ ಛೇದಕ ಬಳಿ ಅಂಜಲಿ ಮತ್ತು ಅಕ್ಲೇಶ್ ಅವರನ್ನು ನೋಡಿದಾಗ ಅವರಿಗೆ ಅನುಮಾನ ಬಂದಿತ್ತು. ಅವರನ್ನು ಪ್ರಶ್ನಿಸಿದಾಗ, ಮಹಿಳೆ ತನ್ನ ಮಗಳು ಕಾಣೆಯಾಗಿದ್ದಾಳೆ ಮತ್ತು ಅವಳನ್ನು ಹುಡುಕುತ್ತಿದ್ದೇವೆ ಎಂದು ಸುಳ್ಳು ಹೇಳಿದ್ದಳು. ಆದರೆ, ಪೊಲೀಸರು ಆ ಪ್ರದೇಶದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಸತ್ಯ ಗೊತ್ತಾಗಿದೆ. ವಿಚಾರಣೆಯ ನಂತರ, ಅಂಜಲಿ ತನ್ನ ಮಗಳನ್ನು ರೇಲಿಂಗ್ ಕಾಣದ ಭಾಗದ ಮೂಲಕ ಸರೋವರಕ್ಕೆ ತಳ್ಳಿದ್ದಾಗಿ ಒಪ್ಪಿಕೊಂಡಿದ್ದಾಳೆ.

ವಿಶ್ವದ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾ ಮೇಲೂ ಮೋದಿ ಫೋಟೋ



ದುಬೈ: ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಹುಟ್ಟುಹಬ್ಬದ ಶುಭಾಶಯ ಕೋರಲು ದುಬೈನಲ್ಲಿರುವ ವಿಶ್ವದ ಅತಿ ಎತ್ತರದ ಕಟ್ಟಡವಾದ ಬುರ್ಜ್ ಖಲೀಫಾ ದೀಪಗಳಿಂದ ಬೆಳಗಿತು. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಇಂದು ರಾತ್ರಿ ದುಬೈನ ಬುರ್ಜ್ ಖಲೀಫಾ ಮೋದಿಯವರ ಫೋಟೋಗಳಿಂದ ಬೆಳಗಿತು. ವಿಶ್ವದ ಅತಿ ಎತ್ತರದ ಕಟ್ಟಡವಲ್ಲಿ ಮೋದಿ ಅವರ ಫೋಟೋಗಳನ್ನು ಪ್ರದರ್ಶಿಸಲಾಗಿದ್ದು, 'ಜನ್ಮದಿನದ ಶುಭಾಶಯಗಳು' (ಹ್ಯಾಪಿ ಬರ್ತಡೇ) ಎಂಬ ಪದಗಳೊಂದಿಗೆ ಬಣ್ಣ ಬಣ್ಣದ ಲೈಟ್‌ಗಳನ್ನು ಬೆಳಗಿಸಲಾಯಿತು. ಹಾಗೇ, ಈ ವೇಳೆ ಭಾರತೀಯ ಧ್ವಜದ ಬಣ್ಣಗಳಾದ ಕೇಸರಿ, ಬಿಳಿ ಮತ್ತು ಹಸಿರು ಬಣ್ಣವನ್ನು ಬುರ್ಜ್ ಖಲೀಫಾ ಮೇಲೆ ಪ್ರದರ್ಶಿಸಲಾಯಿತು.

ಇಂದು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದ್ದರು.

ಮದ್ದೂರಲ್ಲಿ ಬಿಗಿ ಪೊಲೀಸ್ ಭದ್ರತೆಯಲ್ಲಿ ಗಣಪನ ವಿಸರ್ಜನೆ

ಕಲ್ಲು ತೂರಾಟ ನಡೆದಿದ್ದ ಮಸೀದಿ ಮುಂದೆ ಗಣೇಶ ಮೂರ್ತಿ ಮೆರವಣಿಗೆ



ಮದ್ದೂರಲ್ಲಿ ಗಣೇಶ ಮೂರ್ತಿಗಳನ್ನು ಭವ್ಯ ಮೆರವಣಿಗೆ ಮೂಲಕ ತೆರಳಿ ವಿಸರ್ಜನೆ ಮಾಡಲಾಯಿತು.

ಮದ್ದೂರು,ಸೆ.18– ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯ ವೇಳೆ ಕಲ್ಲು ತೂರಾಟ ಘಟನೆ ನಡೆದಿದ್ದ ಮಸೀದಿಯ ಮುಂದೆ ಚನ್ನೇಗೌಡ ಬಡಾವಣೆಯಲ್ಲಿ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆಯನ್ನು ಪೊಲೀಸ್ ಬಿಗಿ ಬಂದೋಬಸ್ತ್‌ನಲ್ಲಿ ನಡೆಸಲಾಯಿತು.

ಚನ್ನೇಗೌಡ ಬಡಾವಣೆಯ ಗೆಳೆಯರ ಬಳಗದ ವತಿಯಿಂದ ಗಣೇಶ ಚತುರ್ಥಿಯಂದು ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು, ಗುರುವಾರ ಮೂರ್ತಿಯ ವಿಸರ್ಜನಾ ಮೆರವಣಿಗೆಗೆ ಅನುಮತಿ ಪಡೆಯಲಾಗಿತ್ತು.

ಮೆರವಣಿಗೆಯಲ್ಲಿ ಅಕ್ಕ ಪಕ್ಕದ ಗ್ರಾಮಗಳ ದೇವರ ಕುಣಿತ, ಕೇರಳದ ಡೊಳ್ಳು ಕುಣಿತಗಳ ತಂಡಗಳು, ಆಂಜನೇಯ ಸೇರಿದಂತೆ ಹಲವು ದೇವರುಗಳ ವೇಷಧಾರಿಗಳ ಕುಣಿತ, ವೀರಗಾಸೆ ಕುಣಿತ ಸೇರಿದಂತೆ ಹಲವು ಜಾನಪದ ಪ್ರಕಾರಗಳ ಮೆರವಣಿಗೆಯೊಂದಿಗೆ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯು ಘಟನಾ ಸ್ಥಳದ ಮಸೀದಿಯ ಮುಂದೆ ಹಾಗೂ ರಾಮ್ ರಹೀಮ್ ನಗರ ನಂತರ ಪೇಟೆಬೀದಿಯ ಮುಖಾಂತರ ಸಾಗಿತು. ಅಂತಿಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್‌ನಲ್ಲಿ ಪಟ್ಟಣದ ಶಿಂಷಾ ನದಿಯಲ್ಲಿ ಗಣೇಶನ ಮೂರ್ತಿಗಳನ್ನು ವಿಸರ್ಜನೆ ಮಾಡಲಾಯಿತು.

ಈ ವೇಳೆ ಬಿಜೆಪಿ ಮುಖಂಡ ಎಸ್.ಪಿ ಸ್ವಾಮಿ, ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಸತೀಶ್, ಹಿಂದೂ ಪರ ಸಂಘಟನೆಗಳ ಮುಖಂಡರಾದ ಕದಲೂರು ನವೀನ್, ವೀರಭದ್ರ ಸ್ವಾಮಿ, ಯೋಗೇಶ್, ಗುರುಮಲ್ಲೇಶ್ ಸೇರಿದಂತೆ ಹಲವು ಮುಖಂಡರು ನೇತೃತ್ವದಲ್ಲಿ ಸ್ಥಳೀಯ ಬಡಾವಣೆಯ ಯುವಕರು, ಸಾರ್ವಜನಿಕರು ಮೆರವಣಿಗೆಯಲ್ಲಿ ಸಾಗಿದರು. ಮಸೀದಿಯ ಮುಂದೆ ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ ಗಣೇಶ ಮೂರ್ತಿಗೆ ಪೂಜೆ ಸಲ್ಲಿಸಿದರು. ಯುವಕರು, ಯುವತಿಯರು ಡಿ.ಜೆ ಸದ್ದಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದರು. ಕಲ್ಲು ತೂರಾಟ ಘಟನೆ ನಡೆದು ಗಲಭೆಗೆ ಕಾರಣವಾಗಿದ್ದ ಮಸೀದಿಯ ಮುಂದೆ ಗಣೇಶ ವಿಸರ್ಜನಾ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಸೂಕ್ತ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು, ನೂರಾರು ಮಂದಿ ಪೊಲೀಸರು ಸೇರಿದಂತೆ ಹಲವು ಪೊಲೀಸ್ ಪಡೆಗಳ ತುಕಡಿಗಳನ್ನೂ ನಿಯೋಜಿಸುವ ಜತೆಗೆ ಮಸೀದಿ ಬಳಿ ಪೊಲೀಸರ ಸರ್ಪಗಾವಲಿನ ಜತೆಗೆ ಡ್ರೋನ್ ಮೂಲಕ ಮೆರವಣಿಗೆ ಮೇಲೆ ಹದ್ದಿ ಕಣ್ಣನ್ನು ಪೊಲೀಸರು ಇಟ್ಟಿದ್ದರು. ಈ ಹಿನ್ನೆಲೆಯಲ್ಲಿ ಗಣೇಶ ವಿಸರ್ಜನಾ ಮೆರವಣಿಗೆಯು ಶಾಂತಿಯುತವಾಗಿ ಜರುಗಿತು.

ಗಣೇಶನ ಮೂರ್ತಿಗಳಿಗೆ ಪೂಜೆ ಸಲ್ಲಿಸಿ ಮಾತನಾಡಿದ ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ, ಗಣೇಶ ವಿಸರ್ಜನೆ ವೇಳೆ ವಿವಾದಿತ ಸ್ಥಳವಾಗಿದ್ದ ಮಸೀದಿ ಮುಂಭಾಗದಲ್ಲಿ ಗಣೇಶ ವಿಸರ್ಜನೆ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದ ಹಾಗೆ ಹಿಂದುಗಳೆಲ್ಲ ಒಂದಾಗಿ ಗಣೇಶ ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮದಿಂದ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಯಿತು ಎಂದರು.

ಮದ್ಯದಂಗಡಿ ಬಂದ್: ಪಟ್ಟಣದ ವ್ಯಾಪ್ತಿಯಲ್ಲಿ ಹಲವು ಗಣೇಶ ವಿಸರ್ಜನೆ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆದಯಂತೆ ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪಟ್ಟಣ ಸೇರಿದಂತೆ ಸುತ್ತ ಮುತ್ತ 5 ಕಿ.ಮೀ ವ್ಯಾಪ್ತಿಯಲ್ಲಿ ಬೆಳಗ್ಗೆ 6 ರಿಂದ ರಾತ್ರಿ 10 ಗಂಟೆಯವರಗೆ ಮದ್ಯ ಮಾರಾಟ, ಸಾಗಾಣಿಕೆ ಹಾಗೂ ಸಂಗ್ರಹಕ್ಕೆ ನಿಷೇಧ ಮಾಡಲು ಜಿಲ್ಲಾಧಿಕಾರಿ ಡಾ.ಕುಮಾರ ಆದೇಶ ಮಾಡಿದ್ದರು.

ಹಲಗೂರು ಗ್ರಾಪಂಗೆ ಗುಲ್ನಾಜ್ ಭಾನು ಅಧ್ಯಕ್ಷೆ

ಹಲಗೂರು, ಸೆ.18– ಹಲಗೂರು ಗ್ರಾಪಂ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗುಲ್ನಾಜ್ ಭಾನು 5 ಮತಗಳ ಅಂತರದಿಂದ ಗೆದ್ದು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತರಾದ ರುಕ್ಸಾನ ಬೇಗಂ ಹಾಗೂ ಕಾಂಗ್ರೆಸ್ ಬೆಂಬಲಿತ ಗುಲ್ನಾಜ್ ಭಾನು ಸ್ಪರ್ಧಿಸಿದ್ದರು. ಮತ ಎಣಿಕೆಯಲ್ಲಿ ಗುಲ್ನಾಜ್ ಭಾನು 15 ಮತಗಳು ಹಾಗೂ ರುಕ್ಸಾನ ಬೇಗಂ ಅವರು 10 ಮತಗಳನ್ನು ಪಡೆದರು, ಗುಲ್ನಾಜ್ ಭಾನು 5 ಮತಗಳ ಅಂತರದಿಂದ ಗೆಲುವು ಸಾಧಿಸಿರುವುದಾಗಿ ಚುನಾವಣಾಧಿಕಾರಿ ಹೆಚ್.ಜಿ.ಶ್ರೀನಿವಾಸ್ ಘೋಷಿಸಿದರು.

ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಗ್ರಾಪಂ ಸದಸ್ಯರು ನೂತನ ಅಧ್ಯಕ್ಷರನ್ನು ಮೈಸೂರು ಪೇಟಾ ಧರಿಸಿ, ಶಾಲು ಹೊದಿಸಿ ಗೌರವಿಸಿದರು. ಪಟಾಕಿ ಸಿಡಿಸಿ ಹರ್ಷೋದ್ಗಾರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷೆ ಶಶಿಕಲಾ ಆರ್.ಶ್ರೀನಿವಾಸಚಾರಿ, ಉಪಾಧ್ಯಕ್ಷೆ ಲತಾ ಸಿ.ಮಹದೇವ, ಸದಸ್ಯರಾದ ಲಿಯಾಕತ್ ಅಲಿ ಪಿಳ್ಳ ಸಧ್ರುಲ್, ಜಮೀಲ್ ಪಾಷಾ, ನಾರಾಯಣಗೌಡ, ಶಿವಲಿಂಗೇಗೌಡ, ಚಿಕ್ಕತಾಯಮ್ಮ, ಲಕ್ಷ್ಮಮ್ಮ, ಶೈಲಜ, ಹಫಿಜುಲ್ಲ ಉ.ಬಾಬು, ಹೆಚ್.ವಿ.ರಾಜಣ್ಣ, ಪದ್ಮನಾಬ್, ಜೀವನ್‌ಕುಮಾರ್ ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣದಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬ ಆಚರಣೆ



ಪೌರಕಾರ್ಮಿಕರು, ನೀರುಗಂಟಿಗಳು, ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು.

ಶ್ರೀರಂಗಪಟ್ಟಣ, ಸೆ.18– ವಿಕಸಿತ ಭಾರತ ನಿರ್ಮಾಣದ ಮೂಲಕ ದೇಶ ಹಾಗೂ ದೇಶವಾಸಿಗಳ ಸರ್ವಾಂಗೀಣ ಅಭಿವೃದ್ಧಿಗೆ ಅಹರ್ನಿಶಿ ನಿಸ್ವಾರ್ಥವಾಗಿ ದುಡಿದು ವಿಶ್ವ ನಾಯಕನೆನಿಸಿಕೊಂಡ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರನ್ನು ಜನಪರ ಸಮಾಜಮುಖಿ ಕಾರ್ಯಗಳ ಮೂಲಕ ನೆನೆಯುವ ಕಾರ್ಯ ದೇಶದುದ್ದಕ್ಕೂ ನಡೆಯುತ್ತಿದೆ ಎಂದು ಬಿಜೆಪಿ ಯುವ ಮುಖಂಡ ಎಸ್.ಸಚ್ಚಿದಾನಂದ ತಿಳಿಸಿದರು.

ಪಟ್ಟಣದ ಶ್ರೀರಂಗನಾಥಸ್ವಾಮಿ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ 75ನೇ ವರ್ಷದ ಜನುಮದಿನದ ಅಮೃತ ಮಹೋತ್ಸವ ಪ್ರಯುಕ್ತ ಬಿಜೆಪಿ ಮಂಡಲ ಹಾಗೂ ಎಸ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ಸಾಧಕರು, ಮಹನೀಯರು ಹಾಗೂ ಶ್ರಮಿಕರಿಗೆ ಸನ್ಮಾನಿಸಿ ಗೌರವಿಸುವ ಸಮಾಜಮುಖಿ ಕಾರ್ಯ ನೆರವೇರಿಸಿ ಅವರು ಮಾತನಾಡಿದರು.

ಸ್ವಚ್ಛ ಭಾರತ ಮಿಷನ್, ಭೇಟಿ ಬಚಾವೋ ಭೇಟಿ ಪಡಾವೋ, ಮೇಕ್ ಇನ್ ಇಂಡಿಯಾ, ಪಿಎಂ ಮುದ್ರಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಸ್ಮಾರ್ಟ್ ಸಿಟಿ ಅಂತಹ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿ ವಿಶ್ವದೆದರು ಭಾರತವನ್ನು ಜಾಗತಿಕ ಮಟ್ಟದಲ್ಲಿ ಮುನ್ನಲೆಗೆ ತಂದು ಇಂದು 4ನೇ ಸ್ಥಾನಕ್ಕೆ ತರುವ ಮೂಲಕ ವಿಶ್ವನಾಯಕರಾಗಿದ್ದಾರೆ. ಭಯೋತ್ಪಾದನೆ ನಿಗ್ರಹಕ್ಕೆ ಹೊಸ ನಾಂದಿ ಹಾಡಿದ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರು ಧೈರ್ಯ ಮತ್ತು ದಿಟ್ಟ ನಿರ್ಧಾರದಿ ಭಾರತದ ಸೈನ್ಯಕ್ಕೆ ಹೊಸ ಬಲತುಂಬಿ ಶತ್ರು ರಾಷ್ಟ್ರಗಳ ಉಗ್ರವಾದದ ಹುಟ್ಟಡಗಿಸಿ ನಡುಕಹುಟ್ಟಿಸಿದ್ದಾರೆ.

ಬಿಜೆಪಿ ಮಂಡಲ ಅಧ್ಯಕ್ಷ ಪೀಹಳ್ಳಿ ರಮೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ಕೆಲ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರೋತ್ಸಾಹಿಸುವ ಕೆಲಸವಾಯಿತು. ಪಟ್ಟಣ ಪುರಸಭೆಯ ಪೌರಕಾರ್ಮಿಕರು ಮತ್ತು ನೀರುಗಂಟಿಗಳು ಹಾಗೂ 500ಕ್ಕೂ ಹೆಚ್ಚು ಆಟೋ ಮತ್ತು ಗೂಡ್ಸ್ ಆಟೋ ಚಾಲಕರಿಗೆ ಸಿಹಿಯೊಂದಿಗೆ ಸಮವಸ್ತ್ರ ವಿತರಿಸಿ ಶುಭಕೋರಲಾಯಿತು.

ಇದೇ ವೇಳೆ ಬಿಜೆಪಿ ಶ್ರೀರಂಗಪಟ್ಟಣ ನಗರ ಘಟಕದ ನೂತನ ಅಧ್ಯಕ್ಷರನ್ನಾಗಿ ಪಟ್ಟಣದ ಜಿ.ಇ.ಸುಧಾಕರ್ ಅವರನ್ನು ಮಂಡಲ ಅಧ್ಯಕ್ಷ ಪೀಹಳ್ಳಿ ನೇಮಕಗೊಳಿಸಿ, ಸನ್ಮಾನಿಸಿ ನೇಮಕಾತಿ ಪತ್ರ ವಿತರಿಸಿದರು.

ಪುರಸಭಾ ಸದಸ್ಯರಾದ ಗಂಜಾಂ ಕೃಷ್ಣಪ್ಪ, ಗಂಜಾಂ ಶಿವು, ಎಸ್.ಪ್ರಕಾಶ್, ಎಸ್.ಟಿ.ರಾಜು, ಲಿಂಗರಾಜು, ಶ್ರೀನಿವಾಸ್, ಚೈತ್ರಾ, ಬಿಜೆಪಿ ಮಂಡಲ ಅಧ್ಯಕ್ಷ ಪೀಹಳ್ಳಿ ರಮೇಶ್, ಬಿಜೆಪಿ ಮುಖಂಡರುಗಳಾದ ಮದನ್ ಮಾದೇಶ್, ದರ್ಶನ್ ಲಿಂಗರಾಜು, ಪೈಮಹದೇವು, ಪುಟ್ಟರಾಜು ಉಪಸ್ಥಿತರಿದ್ದರು.

ಸೆ.30ರಂದು ಪಾಂಡವಪುರ ಟಿಎಪಿಸಿಎಂಎಸ್ ಚುನಾವಣೆ

ಪಾಂಡವಪುರ, ಸೆ.18– ತಾಲೂಕು



ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್)ದ ಆಡಳಿತ ಮಂಡಳಿಗೆ ಇದೇ ಸೆ.30 ರಂದು ಚುನಾವಣೆ ನಡೆಯಲಿದ್ದು ಅಂದೇ ಫಲಿತಾಂಶವನ್ನು ಪ್ರಕಟಿಸಲಾಗುವುದು ಎಂದು ಚುನಾವಣಾಧಿಕಾರಿಯೂ ಆದ ತಹಸೀಲ್ದಾರ್ ಬಸವರೆಡ್ಡಪ್ಪ ರೋಣದ ಹೇಳಿದರು.

ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಸಂಘಕ್ಕೆ 12 ನಿರ್ದೇಶಕರು ಆಯ್ಕೆಯಾಗಬಹುದಾಗಿದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿತರಾಗುವ 'ಎ' ತರಗತಿಯಿಂದ 4 ಮಂದಿ ನಿರ್ದೇಶಕರು ಹಾಗೂ ಷೇರುದಾರು, ರೈತರಿಂದ ಆಯ್ಕೆಯಾಗುವ 'ಬಿ' ತರಗತಿಯಿಂದ 8 ಮಂದಿ ನಿರ್ದೇಶಕರು ಆಯ್ಕೆ ಯಾಗಲು ಅವಕಾಶವಿದೆ. 'ಬಿ' ತರಗತಿಯ 8 ಮಂದಿ ಸದಸ್ಯರ ಆಯ್ಕೆಗೆ ಮಹಿಳಾ ಮೀಸಲು–2, ಪರಿಶಿಷ್ಟ ಜಾತಿ–1, ಪರಿಶಿಷ್ಟ ಪಂಗಡ–1, ಹಿಂದುಳಿದ ವರ್ಗ (ಎ)–1, ಹಿಂದುಳಿದ ವರ್ಗ(ಬಿ)–1 ಹಾಗೂ ಸಾಮಾನ್ಯ ವರ್ಗ–2 ಕ್ಷೇತ್ರ ಮೀಸಲಾಗಿದೆ.

ನಾಮಪತ್ರಸಲ್ಲಿಸಲು ಸೆ.22ರಂದು ಕೊನೆಯ ದಿನ, ಸೆ.23 ನಾಮಪತ್ರ ಪರಿಶೀಲನೆ, ಅಂದೇ ಪಟ್ಟಿ ಪ್ರಕಟಣೆ, ಸೆ.24 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನ, ಅಂದೇ ಸಂಜೆ 3 ಗಂಟೆಗೆ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ, ಸೆ.25 ರಂದು ಅಂತಿಮ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಟಿಸಲಾಗುವುದು, ಸೆ.30ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಗೆ ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮತದಾನ ನಡೆಯಲಿದೆ. ಮತದಾನದ ಮುಗಿದ ಬಳಿಕ ಸಂಜೆ ಮತ ಎಣಿಕೆ ನಡೆಯಲಿದ್ದು ಫಲಿತಾಂಶ ಪ್ರಕಟಿಸಲಾಗುವುದು,

'ಎ' ತರಗತಿಯಲ್ಲಿ 22 ಮಂದಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯ ಮತದಾರರು ಹಾಗೂ 'ಬಿ'ತರಗತಿಯಲ್ಲಿ 4870 ಷೇರುದಾರ ಮತದಾರಿದ್ದಾರೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ಸಹಾಯಕ ಚುನಾವಣಾಧಿಕಾರಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ರವಿಕುಮಾರ್, ಉಪತಹಸೀಲ್ದಾರ್ ಮೋಹನ್, ಟಿಎಪಿಸಿಎಂಎಸ್ ಕಾರ್ಯ ದರ್ಶಿ ನವೀನ್‌ಕುಮಾರ್ ಇದ್ದರು.

ಕಂಠಪೂರ್ತಿ ಕುಡಿದು ಕೆಎಸ್‌ಆರ್‌ಟಿಸಿ ಬಸ್ ಚಾಲಕನ ರಂಪಾಟ

ಮಂಡ್ಯ: ಕೆಎಸ್‌ಆರ್‌ಟಿಸಿ ಬಸ್ ಚಾಲಕ ನೋರ್ವ ಕಂಠಪೂರ್ತಿ ಕುಡಿದು ರಂಪಾಟ ನಡೆಸಿರುವ ಘಟನೆ ಮಂಡ್ಯದ ಕೇಂದ್ರ ಬಸ್ ನಿಲ್ದಾಣದಲ್ಲಿ ನಡೆದಿದೆ.

ಚಾಲಕ ತಾನು ಧರಿಸಿದ್ದ ಸಮವಸ್ತ್ರವನ್ನು ಕಳಚಿ, ಅವಾಚ್ಯ ಶಬ್ಧಗಳನ್ನು ಬಳಸಿದ ಪರಿಣಾಮ ಚಾಲಕನ ಕಿರಿಕಿರಿಯಿಂದ ಬೇಸತ್ತು ಪೊಲೀಸರಿಗೆ ದೂರು ನೀಡಿದ ತರುವಾಯ ಪೊಲೀಸರು ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಉಮಾಶಂಕರ್ ನಿಧನ

ಶ್ರೀರಂಗಪಟ್ಟಣ: ತಾಲೂಕಿನ ಬಾಬುರಾಯನಕೊಪ್ಪಲು ಗ್ರಾಮದ ಜವರೇಗೌಡ (ಪಾಪಣ್ಣ) ಅವರ ಮಗ ಬಿ.ಜೆ. ಉಮಾಶಂಕರ್ (66) ಗುರುವಾರ ಬೆಳಿಗ್ಗೆ ನಿಧನರಾದರು.



ಉಮಾಶಂಕರ್ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಹಾಲಿ ನಿರ್ದೇಶಕರೂ ಆಗಿದ್ದರು. ದಿವಂಗತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು –ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ಬಾಬುರಾಯನ ಕೊಪ್ಪಲು ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಯುವ ಸಂಭ್ರಮಕ್ಕೆ ಸಂತಸದ ತೆರೆ



ಮೈಸೂರಿನ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ತಂಡದಿಂದ ಶ್ರೀಕೃಷ್ಣನ ಕುರಿತ ನೃತ್ಯ ರೂಪಕ ಪ್ರದರ್ಶಿಸಲಾಯಿತು.

ಹೆಜ್ಜೆ ಹಾಕಿ ಕನ್ನಡ ಕಂಪು ಸೂಸಿತು. ಜೊತೆಗೆ ಕರ್ನಾಟಕ ರತ್ನ ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅವರ ಜನ್ಮದಿನದ ಪ್ರಯುಕ್ತ ವಿಷ್ಣು ಅವರ ಬೃಹತ್ ಭಾವಚಿತ್ರವಿಡಿದು, 'ಸಿಂಹಾದ್ರಿಯ ಸಿಂಹ...' ಗೀತೆಗೆ ನೃತ್ಯ ಪ್ರದರ್ಶಿಸಿ, ಅಭಿಮಾನ ಮೆರೆದು ಸ್ಮರಿಸಿತು.

ಅರ್ಜುನ ಆನೆ ಸ್ಮರಣೆ: ಗಣೇಶನ ಆರಾಧಿಸುವ ಗೀತೆಗೆ ನೃತ್ಯ ಪ್ರದರ್ಶಿಸಿದ ಬೋಗಾದಿಯ ಹರಿವಿದ್ಯಾಲಯ ಸಂಯುಕ್ತ ಪದವಿಪೂರ್ವ ಕಾಲೇಜು ತಂಡ, ಭಕ್ತಿಭಾವ ಮೂಡಿಸಿತು. ಹೆಚ್‌ಡಿ ಕೋಟೆ ತುಂಬಸೋಗೆಯ ಎಂಎಂಕೆ ಇಂಡಿಪೆಂಡೆಂಟ್ ಪಿಯು ಕಾಲೇಜು ತಂಡ, ಓಂ ಶಕ್ತಿ... ಗೀತೆಗೆ ಹೆಜ್ಜೆ ಹಾಕಿ ದೇವಿಯ ಆರಾಧನೆ ಮೂಲಕ ಭಕ್ತಿಭಾವ ಮೆರೆಯಿತು. 8 ಬಾರಿ ಅಂಬಾರಿ ಹೊತ್ತು ಖ್ಯಾತನಾಮಗೊಂಡಿರುವ ಅರ್ಜುನ ಆನೆಯ ಸ್ಮರಣೆಯ ಗೀತೆಗೆ ಶ್ರೀರಂಗಪಟ್ಟಣದ ಡಿ ಪಾಲ್ ಕಾಲೇಜು ತಂಡ ಹೆಜ್ಜೆ ಹಾಕಿತು. 'ಸಲಗ ಇವ ಒಂಟಿ ಸಲಗ...', 'ಮದಗಜ...' ಗೀತೆಗಳಿಗೆ ನೃತ್ಯ ಪ್ರದರ್ಶಿಸಿ ಅರ್ಜುನ ಆನೆಯ ಸಾಹಸಗಾಥೆ ಅನಾವರಣಗೊಳಿಸಿತು. ಈ ತಂಡದ ಶರವೇಗದ ನರ್ತನ ಭಂಗಿಗೆ ಪ್ರೇಕ್ಷಕರು ಅಭಿಮಾನದ ಚಪ್ಪಾಳೆ ನೀಡಿದರು.

ಗುಂಡ್ಲುಪೇಟೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ತಂಡವು ನೃತ್ಯ ರೂಪಕದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರು ಬ್ರಿಟಿಷರನ್ನು ನಡುಗಿಸಿದ ಚಿತ್ರಣವನ್ನು ಅನಾವರಣಗೊಳಿಸಿತು. ವಿರಾಜಪೇಟೆಯ ಸೆಂಟ್ ಎನಿಸ್ ಡಿಗ್ರಿ ಕಾಲೇಜು ತಂಡವು 'ಕನ್ನಡ ನಾಡಿನ ವೀರರಮಣೀಯ...' ಗೀತೆಗೆ ನೃತ್ಯ ಪ್ರದರ್ಶಿಸಿ ವೀರ ವನಿತೆ ಒನಕೆ ಓಬವ್ವ ಮೆರೆದ ಸಾಹಸದ ಚಿತ್ರಣವನ್ನು ಕಣ್ಮುಂದೆ ತಂದಿತು.

ರೋಚಕ ನೃತ್ಯೋಲ್ಲಾಸ: ಮೈಸೂರಿನ ಸಿಎಫ್‌ಟಿಆರ್‌ಐ ಲೇಔಟ್‌ನ ಅಜಿತ ನೆಲೆ ಆಶ್ರಯ ಸಂಸ್ಥೆ ತಂಡ 'ಆಟ ಹುಡುಗಾಟವೋ...' ಗೀತೆಗೆ ಶರವೇಗ ಮಾತ್ರವಲ್ಲದೇ ಸಾಹಸಮಯ ಭಂಗಿತ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರಲ್ಲಿ ರೋಮಾಂಚನದ ಸಿಂಚನ ಉಂಟು ಮಾಡಿತು. ಆ ಮೂಲಕ ಶಿವ ತಾಂಡವನ ರೋಚಕ ನೃತ್ಯೋಲ್ಲಾಸ ಅನಾವರಣಗೊಳಿಸಿ ಚಪ್ಪಾಳೆ ಗಿಟ್ಟಿಸಿತು.

ಮೈಸೂರು ಕೃಷ್ಣಮೂರ್ತಿಪುರಂನ ಶಾರದಾ ನೆಲೆ ಉಚಿತ ವಿದ್ಯಾರ್ಥಿನಿಲಯದ ತಂಡವು 'ಪಹಲ್ಗಾಮ್ ದಾಳಿ ಹಾಗೂ ಅದಕ್ಕೆ ಪ್ರತಿಯಾಗಿ ನಡೆದ ಯಶಸ್ವಿ ಆಪರೇಷನ್ ಸಿಂಧೂರ್ ಚಿತ್ರಣ ಮೂಡಿಸಿತು. ಅನೇಕ ತಂಡಗಳು ಶ್ರೀರಾಮ, ಆಂಜನೇಯ, ಕೃಷ್ಣನ ಆರಾಧನೆಯನ್ನು ನೃತ್ಯ ಮುಖೇನ ಅನಾವರಣಗೊಳಿಸಿದವು. ಈ ಮಧ್ಯೆ 'ಮುಂಜಾನೆ ಮಂಜಲ್ಲಿ...' ಗೀತೆ ಸಾದರಪಡಿಸುವ ಮೂಲಕ ಗಹನ ಮ್ಯೂಸಿಕ್ ಬ್ಯಾಂಡ್ ತಂಡ, ಮುಸ್ಸಂಜೆಯ ಗಾನಸುಧೆಯಲ್ಲಿ ಸಭಿಕರನ್ನು ತೇಲಿಸಿತು. ಒಟ್ಟಾರೆ 59 ಕಾಲೇಜು ತಂಡಗಳು ನೃತ್ಯ ಪ್ರದರ್ಶಿಸಿ ರಂಜಿಸಿದವು. ಅಲ್ಲದೆ, ಪೀಟರ್ ಸಿನಿಮಾದ ನಾಯಕ ರಾಜೇಶ್ ಧ್ರುವ ಹಾಗೂ ನಾಯಕಿ ರವೀಕ್ಷಾ ಶೆಟ್ಟಿ ಸೇರಿದಂತೆ ಚಿತ್ರತಂಡ ವೇದಿಕೆಯಲ್ಲಿ ಬಂದು ಪ್ರೇಕ್ಷಕರಿಗೆ ತಾರಾ ಮೆರಗು ನೀಡಿ ಪುಳಕವಿಟ್ಟಿತು.

ಬಾಲ ಪ್ರತಿಮೆ ಕಂಠಸಿರಿಯಲ್ಲಿ ಸಂವಿಧಾನ ಪೀಠಿಕೆಯ ಹಾಡು: ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯ 1ನೇ ತರಗತಿ ವಿದ್ಯಾರ್ಥಿನಿ ಸಂವಿಧಾನ ಪೀಠಿಕೆ ಹಾಡನ್ನು ಅದ್ಭುತವಾಗಿ ಸಾದರಪಡಿಸಿ ಗಮನ ಸೆಳೆದಳು. ನೋಡಿಕೊಳ್ಳದೇ ಪೂರ್ತಿಯಾಗಿ ತನ್ನ ಇಂಪಿನ ದನಿಯಲ್ಲಿ ಹಾಡುವ ಮೂಲಕ ಸಭಿಕರ ಅಭಿಮಾನಕ್ಕೆ ಪಾತ್ರಳಾಗಿ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾದಳು.



ನೃತ್ಯದಲ್ಲಿ ವೀರವನಿತೆ ಒನಕೆ ಓಬವ್ವ ಮೆರೆದ ಸಾಹಸ ಅನಾವರಣಗೊಳಿಸಿದ ವಿರಾಜಪೇಟೆಯ ಸೆಂಟ್ ಎನಿಸ್ ಡಿಗ್ರಿ ಕಾಲೇಜು ತಂಡ.

20 ಕೋಟಿಗೂ ಅಧಿಕ ಜಿಎಸ್‌ಟಿ ವಂಚನೆ

ವ್ಯವಹಾರ ನಡೆಸುತ್ತಿರುವ ಇವರು ಮೈಸೂರು, ಬೆಂಗಳೂರು ಸೇರಿದಂತೆ ಹಲವೆಡೆ ಜಿಎಸ್‌ಟಿ ನಕಲಿ ಇನ್‌ವಾಯ್ಸ್ ನೀಡುವ ಮೂಲಕ ವ್ಯಾಪಕ ವಹಿವಾಟು ನಡೆಸಿದ್ದಾರೆ. ಇವರು ವ್ಯವಹಾರ ಮಾಡುವಾಗ ಗ್ರಾಹಕರಿಂದ ಜಿಎಸ್‌ಟಿ ಹಣ ಸಂಗ್ರಹಿಸುತ್ತಿದ್ದರೂ ಅದನ್ನು ಜಿಎಸ್‌ಟಿ ಇಲಾಖೆಗೆ ಪಾವತಿ ಮಾಡುತ್ತಿರಲಿಲ್ಲ. ಈ ವಂಚನೆ ಗ್ರಾಹಕರಿಗೆ ತಿಳಿಯದಂತೆ ನಕಲಿ ಇನ್‌ವಾಯ್ಸ್‌ಗಳನ್ನು ನೀಡುತ್ತಿದ್ದರು. ಕೆಲವು ಕಡೆ ಯಾವುದೇ ಸರಕು ಅಥವಾ ಸೇವೆಗಳ ಪೂರೈಕೆ ಇಲ್ಲದೆಯೇ ನಕಲಿ ಇನ್‌ವಾಯ್ಸ್‌ಗಳನ್ನು ನೀಡುವುದರಲ್ಲಿ ನಿರತರಾಗಿದ್ದರು. ಇದರಲ್ಲಿ ಪೂರೈಕೆದಾರರು ಹಾಗೂ ಖರೀದಿದಾರರು ವಂಚನೆಯಲ್ಲಿ ಭಾಗಿಯಾಗಿವುದು ಕಂಡು ಬಂದಿದೆ.

ಬೃಹತ್ ಜಾಲ: ಜಿಎಸ್‌ಟಿ ವಂಚಕರನ್ನು ಪತ್ತೆ ಮಾಡಲು ಹದ್ದಿನ ಕಣ್ಣಿಟ್ಟಿರುವ ಜಿಎಸ್‌ಟಿ ಮಹಾ ನಿರ್ದೇಶನಾಲಯ ಗುಪ್ತಚರ ಇಲಾಖೆ (ಡಿಜಿಜಿಐ– ಡೈರೆಕ್ಟರೇಟ್ ಜನರಲ್ ಆಫ್ ಗೂಡ್ಸ್ ಅಂಡ್ ಸರ್ವೀಸ್ ಟ್ಯಾಕ್ಸ್ ಇಂಟಲಿಜೆನ್ಸ್) ಐಪಿ ವಿಳಾಸ ವಿಶ್ಲೇಷಣೆ ಆಧಾರದ ಮೇಲೆ ಡಿಜಿಜಿಐ ಈ ತಂದೆ, ಮಗನ ವಂಚಕರ ಜಾಲವನ್ನು ಪತ್ತೆ ಮಾಡಿದೆ. ಇವರಿಬ್ಬರೂ ಸುಮಾರು 20 ಕೋಟಿ ರೂಪಾಯಿ ವಂಚಿಸಿದ್ದಾರೆ ಎಂದು ಜಿಎಸ್‌ಟಿ ಅಧಿಕಾರಿಗಳು ಅಂದಾಜಿಸಿದ್ದಾರೆ.

ಜಿಎಸ್‌ಟಿ ಪಾವತಿಸದೇ ಸರ್ಕಾರವನ್ನು ವಂಚಿಸಲು ಉದ್ಯಮಿಗಳು ಒಂದು ಜಾಲವನ್ನೇ ಸೃಷ್ಟಿಸಿಕೊಂಡಿದ್ದರು. ವ್ಯವಹಾರ ಮಾಡುತ್ತಿದ್ದರೂ ಜಿಎಸ್‌ಟಿ ಹಣವನ್ನು ಮಾತ್ರ ಸರ್ಕಾರಕ್ಕೆ ಪಾವತಿ ಮಾಡುತ್ತಿರಲಿಲ್ಲ. ಖರೀದಿದಾರ ಹಾಗೂ ಮಾರಾಟಗಾರರ ನಡುವೆ ನಡೆಯುವ ವಂಚನೆಯ ಕರಾಮತ್ತು ಇದಾಗಿತ್ತು. ಒಂದು ಬಾರಿ ಖರೀದಿದಾರ ಜಿಎಸ್‌ಟಿ ತೋರಿಸುತ್ತಿದ್ದರೆ, ಮತ್ತೊಂದು ಬಾರಿ ಮಾರಾಟಗಾರ ಜಿಎಸ್‌ಟಿ ತೋರಿಸುತ್ತಿದ್ದ. ಈ ಸಮಯದಲ್ಲಿ ನಕಲಿ ಇನ್‌ವಾಯ್ಸ್ ಸೃಷ್ಟಿಸಿಕೊಂಡು ಆ ಹಣವನ್ನು ಲಪಟಾಯಿಸುತ್ತಿದ್ದರು.

ಸುಮಾರು 419 ಕೋಟಿ ರೂಪಾಯಿ ವಹಿವಾಟಿನಲ್ಲಿ ಜಿಎಸ್‌ಟಿಯಲ್ಲಿ ಬಾರೀ ವಂಚನೆ ಮಾಡಿರುವ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಿದ್ದ ಡಿಜಿಜಿಐ ಸೆ.9 ರಂದು ಅಕ್ರಂ ಪಾಷ ಹಾಗೂ ಮೊಹಮ್ಮದ್ ಕಮ್ರಾನ್ ಮನೆಯನ್ನು ಸರ್ಚ್ ಮಾಡಿ ದಾಖಲೆಗಳನ್ನು ಸಂಗ್ರಹಿಸುವಂತೆ ಆದೇಶಿದ್ದ ಹಿನ್ನಲೆಯಲ್ಲಿ ಡಿಜಿಜಿಐ ಉಪ ನಿರ್ದೇಶಕ ಡಾ.ಎನ್.ವಿವೇಕ್‌ರೆಡ್ಡಿ ಅವರು ಇತರ ಅಧಿಕಾರಿಗಳಾದ ರತನ್, ಅಶೋಕ್‌ಕುಮಾರ್ ಯಾದವ್, ಬಸವರಾಜ್, ರಂಜಿತ್ ಪ್ರಸಾದ್, ಹರ್ಷಿತಾ, ಭವ್ಯಾ ಮತ್ತು ಅನಂತ್‌ಜೀತ್ ಹಾಗೂ ಪಂಚರರಾದ ವೆಂಕಟೇಶ್, ಚನ್ನೇಗೌಡ ಅವರೊಂದಿಗೆ ಸೆ.10ರಂದು ಬೆಳಗ್ಗೆ 7.50ರಲ್ಲಿ ಬನ್ನಿಮಂಟಪದ ಆರೋಪಿಗಳ ಮನೆಗೆ ತೆರಳಿ, ಸರ್ಚ್ ವಾರಂಟ್ ತೋರಿಸಿ, ಪರಿಶೀಲನೆ ನಡೆಸುತ್ತಿದ್ದಾಗ ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ಕಮ್ರಾನ್, ಉಮರ್ ಅವರುಗಳು ಇದ್ದಕ್ಕಿದ್ದಂತೆ ಅಧಿಕಾರಿಗಳೊಂದಿಗೆ ಜಗಳ ತೆಗೆದು ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ಈ ವೇಳೆ ಕಮ್ರಾನ್ ತಂಗಿ ಫಿರ್ದೋಷ್ ಬಾನು ಎಂಬಾಕೆ ಮೊಬೈಲ್ ಮತ್ತು ಮನೆಯಲ್ಲಿದ್ದ ಸಿಸಿ ಕ್ಯಾಮರಾ ಹಾರ್ಡ್ ಡಿಸ್ಕ್ ಅನ್ನು ಕಿತ್ತುಕೊಂಡು ಓಡಿದ್ದಾಳೆ. ಇದೇ ವೇಳೆ ಅಕ್ರಂ ಪಾಷ ಸ್ಥಳದಿಂದ ಪರಾರಿಯಾಗಿದ್ದು, ಆತನ ಕುಟುಂಬದವರು ಅಧಿಕಾರಿಗಳು ತನಿಖೆಗಾಗಿ ತೆಗೆದುಕೊಂಡು ಹೋಗಿದ್ದ ಪರಿಕರಗಳನ್ನು ಮನೆಯಿಂದ ಹೊರಗೆ ಬಿಸಾಡಲು ಪ್ರಯತ್ನಿಸಿದ್ದಲ್ಲದೇ, ಮೀಡಿಯಾದವರನ್ನು ಕರೆಸುತ್ತೇವೆ ಎಂದು ಹೆದರಿಸಿದ್ದಾರೆ. ಅಲ್ಲದೇ ಹಲವರು ಗುಂಪು ಸೇರಿ ಅಧಿಕಾರಿಗಳ ಮೇಲೆ ಗಲಾಟೆ ಮಾಡಿ, ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಲ್ಲದೇ, ಕಮ್ರಾನ್ ಕೂಡ ಪರಾರಿಯಾಗಲು ಸಹಕರಿಸಿದ್ದಾರೆ.

ಈ ಸಂಬಂಧ ಎನ್.ಆರ್.ಠಾಣೆಯಲ್ಲಿ ಅಕ್ರಂ ಪಾಷ, ಮೊಹಮ್ಮದ್ ಕಮ್ರಾನ್, ಮೊಹಮ್ಮದ್ ಉಮರ್, ಫಿರ್ದೋಷ್ ಬಾನು, ಪರ್ಜಾನ್ ಬಾನು ಮತ್ತು ನಾಸಿರ್ ಅಹಮದ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಅದೇ ವೇಳೆ ಕಮ್ರಾನ್ ಮತ್ತು ಈತನ ತಂದೆ ಅಕ್ರಮ್ ಪಾಷಾಗೆ ಸೇರಿದ್ದ ಬೆಂಗಳೂರಿನ ಮೂರು ಮತ್ತು ಮೈಸೂರಿನ 10 ಸೇರಿ ಒಟ್ಟು 13 ಸ್ಥಳಗಳಲ್ಲಿ ಡಿಜಿಜಿಐ ಅಧಿಕಾರಿಗಳು ದಾಳಿ ನಡೆಸಿದ್ದರು. ಪರಿಶೀಲನೆ ನಡೆಸಿದ್ದಾಗ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಕ್ಲೈಮ್‌ನಲ್ಲಿ ವಂಚನೆ ಮಾಡಿರುವುದು ಕಂಡು ಬಂದಿದೆ.

ಅಧಿಕಾರಿಗಳ ಮೇಲೆ ಗಲಾಟೆ ಮಾಡಿ ಪರಾರಿಯಾಗಿದ್ದ ಮೊಹಮ್ಮದ್ ಕಮ್ರಾನ್ ಮತ್ತು ಅಕ್ರಂ ಪಾಷ ಚಲನ–ವಲನದ ಮೇಲೆ ಜಿಎಸ್‌ಟಿ ಅಧಿಕಾರಿಗಳು ನಿಗಾ ವಹಿಸಿದ್ದು, ಮುಂಬೈಗೆ ಪರಾರಿಯಾಗಿದ್ದ ಮೊಹಮ್ಮದ್ ಕಮ್ರಾನ್ ಸೆ.16ರಂದು ವಿಮಾನದಲ್ಲಿ ಬೆಂಗಳೂರಿಗೆ ಬರುತ್ತಿದ್ದಾನೆ ಎಂಬ ಮಾಹಿತಿ ಆಧರಿಸಿ ಅಂದು ಆತ ವಿಮಾನದಿಂದ ಇಳಿಯುತ್ತಲೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನದಲ್ಲಿ ಆತನನ್ನು ಬಂಧಿಸಿದ್ದಾರೆ.

ಸೂಪರ್–4ಗೆ ಶ್ರೀಲಂಕಾ: ಹೊರಬಿದ್ದ ಆಫ್ಘಾನ್

ಅಬುದಾಬಿ, ಸೆ18(ವಿವಿಹೆಚ್)– ಕುಸಾಲ್ ಮೆಂಡಿಸ್ ಅವರ ಅಜೇಯ ಅರ್ಧಶತಕದ ನೆರವಿನಿಂದ ಶ್ರೀಲಂಕಾ ಆಫ್ಘಾನಿಸ್ತಾನ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಶ್ರೀಲಂಕಾ ಸೂಪರ್–4 ಹಂತಕ್ಕೆ ಲಗ್ಗೆ ಹಾಕಿದರೇ, ಆಫ್ಘಾನ್ ಟೂರ್ನಿಯಿಂದ ಹೊರ ನಡೆದಿದೆ.

ಇಲ್ಲಿನ ಶೇಖ್ ಜಾಯೇದ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಏಷ್ಯಾ ಕಪ್‌ನ ಬಿ ಗುಂಪಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆಫ್ಘಾನಿಸ್ತಾನ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ತಂಡದ ಪರ ಮಿಂಚಿನ ಬ್ಯಾಟಿಂಗ್ ನಡೆಸಿದ ಮೊಹಮ್ಮದ್ ನಬಿ ಕೇವಲ 22 ಎಸೆತಗಳಲ್ಲಿ 6 ಸಿಕ್ಸರ್, 3 ಬೌಂಡರಿ ಒಳಗೊಂಡ 60 ರನ್ ಗಳಿಸಿದರು. ಉಳಿದಂತೆ ಗುರ್ಬಾಜ್ 14, ಸೆಡಿಕುಲ್ಲಾ ಅಟಲ್ 18, ಇಬ್ರಾಹಿಂ ಜದ್ರಾನ್, ರಶೀದ್ ಖಾನ್ ತಲಾ 24 ರನ್ ಗಳಿಸಿದರು. ಶ್ರೀಲಂಕಾ ಪರ ನುವಾನ್ ತುಷಾರ 4, ಚಮೀರಾ, ಡುನಿತ್ ವಲ್ಲಾಲಗೆ, ಶನಕ ತಲಾ ಒಂದೊಂದು ವಿಕೆಟ್ ಉರುಳಿಸಿದರು. 170 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶ್ರೀಲಂಕಾ 18.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ 10 ಬೌಂಡರಿ ಒಳಗೊಂಡ 74 ರನ್ ಗಳಿಸಿದ ಕುಸಾಲ್ ಮೆಂಡಿಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಉಳಿದಂತೆ ಕುಸಾಲ್ ಪರೇರಾ 28, ಚರತ್ ಅಸಲಂಕಾ 17, ಕಾಮಿಂದು ಮೆಂಡಿಸ್ 26, ಆಫ್ಘಾನ್ ಪರ ಮುಜೀಬ್ ಉರ್ ರೆಹಮಾನ್, ಅಜ್ಮತುಲ್ಲಾ ಒಮರ್ಜೈ, ನೂರ್ ಅಹಮ್ಮದ್, ಮೊಹಮ್ಮದ್ ನಬಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದರೊಂದಿಗೆ ಸೂಪರ್–4 ಹಂತಕ್ಕೆ 'ಎ' ಗುಂಪಿನಿಂದ ಭಾರತ ಮತ್ತು ಪಾಕಿಸ್ತಾನ್, 'ಬಿ' ಗುಂಪಿನಿಂದ ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳು ಅರ್ಹತೆ ಪಡೆದುಕೊಂಡಿವೆ.

ರಾಷ್ಟ್ರಮಟ್ಟದ ಕವನ ಸ್ಪರ್ಧೆಯಲ್ಲಿ ತೃತೀಯ ಬಹುಮಾನ



ಮೈಸೂರು, ಸೆ.18– ಮೈಸೂರು ಐಡಿಯಲ್ ಜಾವಾ ರೋಟರಿ ಶಾಲೆಯ ವಿದ್ಯಾರ್ಥಿ ಎಸ್.ಜೆ. ವೀರ ಅವರು ಅಹಮದಾಬಾದ್‌ನ ಅನುವ್ರತ ವಿಶ್ವ ಭಾರತಿ ಸೊಸೈಟಿ ಆಚಾರ್ಯ ಶ್ರೀ ಮಹಾಶ್ರಮನ್‌ಜೀ ಅವರ ಆಶೀರ್ವಾದಗಳೊಂದಿಗೆ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಅನುವ್ರತ ಸೃಜನಶೀಲತೆ ಸ್ಪರ್ಧೆ 2025ರಲ್ಲಿ ಕವನ ಸ್ಪರ್ಧೆ ವಿಭಾಗದಲ್ಲಿ ತೃತೀಯ ಬಹುಮಾನ ಗಳಿಸಿದ್ದಾರೆ. ದೇಶದ 25 ರಾಜ್ಯಗಳ 3,175 ಕ್ಕೂ ಅಧಿಕ ಶಾಲೆಗಳ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಮೈಸೂರು ಅನುವ್ರತ ಸಮಿತಿ ಬಹುಮಾನ ವಿಜೇತ ಎಸ್.ಜೆ. ವೀರ ಅವರನ್ನು ಅಭಿನಂದಿಸಿದೆ.

ಜಾತಿ ಗಣತಿಯೇ ಬೇಡ...!

ಬಳಿಯುವ ಕಾರ್ಯ ಆರಂಭಗೊಂಡಿದೆ. ಪ್ರತಿಪಕ್ಷ ಬಿಜೆಪಿ ಇದನ್ನೇ ರಾಜಕೀಯ ಬಂಡವಾಳ ಮಾಡಿಕೊಳ್ಳಲು ಶಿಬಿರ ಆರಂಭಿ ಸಿದೆ. ವೀರಶೈವ, ಒಕ್ಕಲಿಗ ಸಮಾಜದ ಮಠಾಧೀಶರು ತಮ್ಮ ಸಮುದಾಯಗಳ ಪರ ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದಾರೆ.

ಸಮೀಕ್ಷೆ ಹೀಗೇ ಇರಬೇಕು ಎಂಬು ದಾಗಿ ಸರ್ಕಾರ ಹೇಳಿಲ್ಲ. ಆದರೆ, ಆಯೋಗ ಸಮುದಾಯಗಳನ್ನು ವಿಭಜಿಸಿ ಸಮೀಕ್ಷೆಗೆ ಹೊರಟಿದೆ. ಇದು ಸರಿಯಲ್ಲ. ಇದಕ್ಕೆ ತಿಲಾಂಜಲಿ ಹಾಡಲೇಬೇಕು. ಹೆಚ್ಚುವರಿಯಾಗಿ 331 ಜಾತಿಗಳನ್ನು ಪಟ್ಟಿಯಲ್ಲಿ ಸೇರಿಸ ಲಾಗಿದೆ. ಈ ಜಾತಿಗಳ ಹೆಸರು ಕೊಟ್ಟವ ರ್‍ಯಾರು. ಹಿಂದೆ ಇಲ್ಲದ್ದು ಈಗ ಏಕೆ ಎಂದು ಖಾರವಾಗಿ ಶಿವಕುಮಾರ್, ಎಂ.ಬಿ. ಪಾಟೀಲ್, ಖಂಡ್ರೆ ಪ್ರಶ್ನೆ ಮಾಡಿದ್ದಾರೆ. ಮಧ್ಯೆ ಪ್ರವೇಶಿಸಿದ ಮುಖ್ಯಮಂತ್ರಿ, ನನಗೂ ಮೇಲ್ಜಾತಿ ವಿರೋಧಿ ಪಟ್ಟ ಕಟ್ಟಲಾಗುತ್ತಿದೆ. ಈ ಬಗ್ಗೆ ಸಂಪುಟ ಸಭೆ ನಂತರ ಕುಳಿತು ಚರ್ಚಿಸಿ ತೀರ್ಮಾನ ಕೈಗೊಳ್ಳೋಣ ಎಂದಿದ್ದಾರೆ.

ಇದಕ್ಕೆ ಮಣಿಯದ ಸಚಿವರುಗಳು ರಾಜ್ಯ ಸರ್ಕಾರಕ್ಕೆ ಜಾತಿ ಗಣತಿ ನಡೆಸಲು ಅಧಿಕಾರ ಇಲ್ಲ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಎಂದು ಜಾತಿ ಹಣೆಪಟ್ಟಿ ಕೊಟ್ಟಿರು ವುದು ಹೈಕೋರ್ಟ್ ಮೆಟ್ಟಿಲೇರಿದೆ. ಅರ್ಜಿ ಶುಕ್ರವಾರ ವಿಚಾರಣೆಗೆ ಬರಲಿದ್ದು, ಸರ್ಕಾರ ಇದನ್ನು ಯಾವ ರೀತಿ ಸಮರ್ಥನೆ ಮಾಡಿಕೊಳ್ಳಲಿದೆ ಎಂದು ಮುಖ್ಯಮಂತ್ರಿ ಅವರನ್ನು ಪ್ರಶ್ನಿಸಿದ್ದಾರೆ. ಏನೇ ಇರಲಿ, ಸಮೀಕ್ಷಾ ಉಸಾಬರಿಯೇ ಸರ್ಕಾರಕ್ಕೆ ಬೇಡ ಎಂದು ಬಲವಾದ ವಾದ ಮಂಡಿಸಿದ್ದಾರೆ.

ಜಾತಿಗಣತಿ ಸಮೀಕ್ಷೆ 2025: ಆಶಾ ಕಾರ್ಯಕರ್ತರಿಗೆ 2,000 ರೂ. ಗೌರವ ಧನ ಘೋಷಿಸಿದ ಸರ್ಕಾರ

ಬೆಂಗಳೂರು, ಸೆ.18– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ದಿಂದ ನಡೆಸುತ್ತಿರುವ ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆ– 2025ರಲ್ಲಿ ಭಾಗವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ 2,000 ರೂ. ಗೌರವ ಧನವನ್ನು ಘೋಷಿಸಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೆಪ್ಟೆಂಬರ್ 22ರಿಂದ ಅಕ್ಟೋಬರ್ 10ರವರೆಗೆ ರಾಜ್ಯದ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಡೆಸಲಿದೆ. ಆರೋಗ್ಯ ಇಲಾಖೆಯಿಂದ ನೇಮಿಸಲ್ಪಟ್ಟ ಆಶಾ ಕಾರ್ಯಕರ್ತರು ಸುಮಾರು ಶೇ.90ರಷ್ಟು ಮನೆಗಳಿಗೆ ಭೇಟಿ ನೀಡಿ ಜಾಗೃತಿ ಅಭಿಯಾನ ಅಪ್ಲಿಕೇಶನ್ ಮೂಲಕ UHID ಸಂಖ್ಯೆಗಳು ಮತ್ತು ಮೊಬೈಲ್ ಫೋನ್ ಸಂಖ್ಯೆಗಳನ್ನು ಸಂಗ್ರಹಿಸಬೇಕಿದೆ. ಈ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಆಶಾ ಕಾರ್ಯಕರ್ತೆಗೆ 2,000 ರೂ. ಗೌರವ ಧನವನ್ನು ನೀಡಲಾಗುತ್ತದೆ, ಇದನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಬಜೆಟ್ ಶೀರ್ಷಿಕೆಯಡಿಯಲ್ಲಿ ಒದಗಿಸಲಾದ ಅನುದಾನದಿಂದ ಬಿಡುಗಡೆ ಮಾಡಲಾಗುತ್ತದೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ವಿತರಿಸಲಾಗುತ್ತದೆ ಎಂದು ತಿಳಿಸಿದೆ.

ವಾಲ್ಮೀಕಿ ಸಮುದಾಯದ ವಿರೋಧ

ಸಿಬಿಐ ತನಿಖೆ ನಡೆಯುತ್ತಿದೆ. ಈಗ ಅದನ್ನು ಪ್ರಸ್ತಾಪಿಸುವುದು ಸರಿಯಲ್ಲ. ಈ ಸಭೆಯ ಉದ್ದೇಶ ಕುರುಬ ಸಮು ದಾಯದ ಎಸ್‌ಟಿ ಸೇರ್ಪಡೆ ವಿರೋಧಿಸಿ ಸ್ಪಷ್ಟ ಸಂದೇಶ ನೀಡುವುದಾಗಿತ್ತು ಎಂದರು. ಸಂಸದ ತುಕಾರಾಂ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಂಗಾರು ಹನುಮಂತು, ಕುಂಬಳಕಾಯಿ ಕಳ್ಳನೆಂದರೆ ಹೆಗಲು ಮುಟ್ಟಿಕೊಂಡರಂತೆ, ನಾನು ಎ.ಹೆಚ್.ವಿಶ್ವನಾಥ್ ಅವರ ಹೇಳಿಕೆಯ ನ್ನಷ್ಟೇ ಪ್ರಸ್ತಾಪಿಸಿದೆ. ಆದರೆ ಇವರೇಕೆ ಉರಿಬಿದ್ದಿದ್ದು? ವಾಲ್ಮೀಕಿ ನಿಗಮ ಹಗ ರಣದ ಹಣದಿಂದ ತುಕಾರಾಂ ಸಂಸದರಾಗಿದ್ದಾರೆ. ಅವರಷ್ಟೇ ಅಲ್ಲ ಅವರ ಮನೆಯ ವರು ಶಾಸಕಿಯಾಗಿರುವುದು ಕೂಡ ವಾಲ್ಮೀಕಿ ಹಗರಣದ ಹಣದಿಂದಲೇ. ಇಬ್ಬರು ಗಂಡ–ಹೆಂಡತಿ ಮೀಸಲಾತಿಯ ಮೇಲೆ ಗೆದ್ದಿದ್ದಾರೆ. ರಾಜೀನಾಮೆ ಕೊಟ್ಟು ವೇದಿಕೆಯಲ್ಲಿ ಮಾತನಾಡಲಿ. ಸಮಾಜ ಬಗ್ಗೆ ನಿಜವಾಗಲೂ ಕಳಕಳಿ ಇದ್ದರೆ ಮೊದಲು ತುಕಾರಾಂ ರಾಜೀನಾಮೆ ಕೊಟ್ಟು ಬರಲಿ. ಸಂಸದ ತುಕಾರಾಂಗೆ ಮಾನ ಮರ್ಯಾದೆ ಇದೆಯಾ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ವಾಲ್ಮೀಕಿ ಕ್ರಿಶ್ಚಿಯನ್ ಎಂದು ಬರೆದಿರುವ ಕುರಿತು ಸಿಎಂ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಬಂಗಾರು ಹನಮಂತು, ವಾಲ್ಮೀಕಿಯನ್ನು ಕ್ರಿಶ್ಚಿಯನ್ ಎಂದು ಸೇರ್ಪಡೆ ಮಾಡಲು ಸಿದ್ದರಾಮಯ್ಯ ಯಾರು? ಅಧಿಕಾರ ಉಳಿಸಿಕೊಳ್ಳಲು ಜಾತಿಗಣತಿಯನ್ನು ಸೃಷ್ಟಿಸಿದ್ದಾರೆ. ಕುರುಬ ಸಮುದಾಯದ ಎಸ್‌ಟಿ ಸೇರ್ಪಡೆ ವಿಚಾರವು ರಾಜಕೀಯ ತಿಕ್ಕಾಟಕ್ಕೆ ಕಾರಣವಾಗಿದ್ದು, ವಾಲ್ಮೀಕಿ ಸಮುದಾಯದ ಈ ಸಭೆ ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಮೈಸೂರು ದಸರಾ ಮಹೋತ್ಸವ-2025

ಆಹಾರ ಮೇಳ; 140 ಮಳಿಗೆ ವ್ಯವಸ್ಥೆ

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಮಾತ್ರವೇ ಖಾದ್ಯ ಸವಿಯುವ ಅವಕಾಶ



ಮಹಾರಾಜ ಕಾಲೇಜು ಮೈದಾನದಲ್ಲಿ ದಸರಾ ಆಹಾರ ಮೇಳಕ್ಕೆ ಮಳಿಗೆ ನಿರ್ಮಾಣ ಕಾರ್ಯ ನಡೆಯುತ್ತಿರುವುದು.

ಆಹಾರ ಮೇಳಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ

ದಸರಾ ಆಹಾರ ಮೇಳಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಮೊದಲ ಲಿಸ್ಟ್‌ನಲ್ಲಿ ಕೆಲವರು ಮಳಿಗೆಗೆ ಹಣ ಪಾವತಿಸಿಲ್ಲದ ಕಾರಣ ಎರಡನೇ ಲಿಸ್ಟ್‌ನಲ್ಲಿ ಕೆಲವರಿಗೆ ನಿಯಮಾನುಸಾರ ಮಳಿಗೆ ನೀಡಲಾಗುತ್ತದೆ. ಈಗಾಗಲೇ ಪ್ರಾಯೋಜಕರು ಮುಂದೆ ಬರುತ್ತಿದ್ದು, ಆದಾಯ ಸಂಗ್ರಹಿಸುವ ನಿಟ್ಟಿನಲ್ಲಿ ಕೆಲವು ಮಳಿಗೆಗಳನ್ನು ಪ್ರಾಯೋಜಕರಿಗೆ ನೀಡಲು ಚಿಂತಿಸಲಾಗುತ್ತಿದೆ. ಈಗಾಗಲೇ ವಾಹನ ಪ್ರದರ್ಶನ, ಇವಿ ವಾಹನ ಪ್ರದರ್ಶನಕ್ಕೆ ಮಳಿಗೆ ನೀಡುವಂತೆ ಕೆಲವರು ಮನವಿ ಸಲ್ಲಿಸಿದ್ದಾರೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ.

- **ಚಂದ್ರಶೇಖರ್**, ಕಾರ್ಯಾಧ್ಯಕ್ಷರು, ದಸರಾ ಆಹಾರ ಮೇಳ ಉಪಸಮಿತಿ

ಮೈಸೂರು,ಸೆ.18(ಎಂಟಿವೈ)- ದಸರಾ ಮಹೋತ್ಸವದ ವೇಳೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ದಸರಾ ಆಹಾರ ಮೇಳಕ್ಕೆ ಸಿದ್ಧತೆ ಭರದಿಂದ ಸಾಗಿದ್ದು, 140 ಮಳಿಗೆ ನಿರ್ಮಾಣ ಕಾರ್ಯ ಅಂತಿಮ ಹಂತ ತಲುಪಿದೆ.

ಈ ಬಾರಿ ದಸರಾ ಆಹಾರ ಮೇಳವನ್ನು ಒಂದೇ ಸ್ಥಳದಲ್ಲಿ ನಡೆಸಲು ತೀರ್ಮಾನಿಸಿದ್ದು, ಹಾಗಾಗಿ ವಿಶಾಲವಾದ ಮಹಾರಾಜ ಕಾಲೇಜು ಮೈದಾನಕ್ಕೆ ಸ್ಥಳಾಂತರಿಸಲಾಗಿದೆ. ಈ ಬಾರಿ ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ 140 ಮಳಿಗೆ ನಿರ್ಮಾಣ ಮಾಡಲಾಗಿದೆ. ಅರ್ಜಿ ಪಡೆದು ಮೊದಲ ಪಟ್ಟಿಯಲ್ಲಿ ಮಳಿಗೆ ಮಂಜೂರಾಗಿದ್ದ ಕೆಲವರು ಇನ್ನು ಹಣ ಪಾವತಿಸದ ಕಾರಣ, ಎರಡನೇ ಪಟ್ಟಿಯಲ್ಲಿ ಇತರರಿಗೆ ಅವಕಾಶ ನೀಡಲು ಉದ್ದೇಶಿಸಲಾಗಿದೆ.

ದಸರಾ ಆರಂಭಕ್ಕೆ ಕೇವಲ 4 ದಿನ ಮಾತ್ರ ಇರುವುದರಿಂದ ಕಳೆದ 3 ದಿನದಿಂದಲೇ ದಸರಾ ಆಹಾರ ಮೇಳ ನಡೆಯುವ ಮಹಾರಾಜ ಕಾಲೇಜು ಮೈದಾನದಲ್ಲಿ ಆಹಾರ ಮೇಳಕ್ಕಾಗಿ ಮಳಿಗೆ ನಿರ್ಮಾಣ ಕಾರ್ಯ ಆರಂಭಿಸಲಾಗಿದೆ. ಮಾಂಸಾಹಾರ ಮತ್ತು ಸಸ್ಯಾಹಾರ ಮಳಿಗೆಗಳನ್ನು ಪ್ರತ್ಯೇಕವಾಗಿ ವ್ಯವಸ್ಥೆಗೊಳಿಸಲು ಉದ್ದೇಶಿಸಲಾಗಿದೆ. ಕಟ್ಟುನಿಟ್ಟಿನ ಆಹಾರ ಪದ್ಧತಿ ಅನುಸರಿಸುವವರಿಗೆ ಮುಜುಗರವುಂಟಾಗಬಾರದೆಂದು ಮೈದಾನದ ಒಂದು ಸಾಲಿನಲ್ಲಿ ಸಸ್ಯಾಹಾರ, ಮತ್ತೊಂದು ಸಾಲಿನಲ್ಲಿ ಮಾಂಸಾಹಾರ ಮಳಿಗೆ ವ್ಯವಸ್ಥೆ ಮಾಡಲಾಗಿದೆ.

ಮೈದಾನದಲ್ಲಿನ ಮಳಿಗೆ ಮುಂದೆ ದೀಪಾಲಂಕಾರ ಮಾಡಲಾಗಿದೆ. ಅಲ್ಲದೆ, ಮಳೆ ಬಂದರೆ ಆಹಾರ ಸೇವಿಸುವವರಿಗೆ ನೆರವಾಗುವ ನಿಟ್ಟಿನಲ್ಲಿ ಆಶ್ರಯ ಪಡೆಯಲು ವಾಟರ್‌ಪ್ರೂಫ್ ಪೆಂಡಾಲ್ ನಿರ್ಮಿಸಲಾಗಿದೆ. ಪ್ರತಿವರ್ಷದಂತೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರತ್ಯೇಕ ವೇದಿಕೆ ಮಾಡಲಾಗುತ್ತಿದೆ.

ದಸರಾ ಗಜಪಡೆ ಮಾವುತರು, ಕಾವಾಡಿಗಳು, ಕುಟುಂಬದವರಿಗೆ ದಂತ ತಪಾಸಣೆ, ಚಿಕಿತ್ಸಾ ಶಿಬಿರ

ಅನಿ ಫೌಂಡೇಷನ್, ಸ್ಮೈಲ್ ಆರ್ಕಿಟೆಕ್ಟ್ ದಂತ ಚಿಕಿತ್ಸಾಲಯದಿಂದ ಆಯೋಜನೆ



ಅರಮನೆ ಆವರಣ ಕೋಡಿ ಸೋಮೇಶ್ವರ ದೇವಾಲಯದ ಬಳಿ ದಸರಾ ಗಜಪಡೆ ಮಾವುತರು, ಕಾವಾಡಿಗಳು ಹಾಗೂ ಕುಟುಂಬ ಸದಸ್ಯರಿಗೆ ಅನಿ ಫೌಂಡೇಷನ್ ವತಿಯಿಂದ ದಂತ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಆಯೋಜಿಸಲಾಗಿತ್ತು.

ಮೈಸೂರು,ಸೆ.18(ಎಂಟಿವೈ)- ದಸರಾ ಗಜಪಡೆಯ ಮಾವುತರು, ಕಾವಾಡಿಗಳು ಹಾಗೂ ಕುಟುಂಬ ಸದಸ್ಯರಿಗೆ ಏರ್ಪಡಿಸಿದ್ದ ದಂತ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರದಲ್ಲಿ ಹಲವು ಮಂದಿ ಪಾಲ್ಗೊಂಡು ಚಿಕಿತ್ಸೆ ಪಡೆದುಕೊಂಡರು.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಅನಿ ಫೌಂಡೇಷನ್ ಮತ್ತು ಸ್ಮೈಲ್ ಆರ್ಕಿಟೆಕ್ಟ್ ದಂತ ಚಿಕಿತ್ಸಾಲಯದ ವತಿಯಿಂದ ಸ್ವಚ್ಛ ದಂತ ಅಭಿಯಾನದ ಅಂಗವಾಗಿ ಆಯೋಜಿಸಿದ್ದ ದಂತ ತಪಾಸಣಾ ಶಿಬಿರದಲ್ಲಿ ದಸರಾ ಗಜಪಡೆ ಮಾವುತರು, ಕಾವಾಡಿಗಳ ಕುಟುಂಬದ ಸದಸ್ಯರು, ಮಕ್ಕಳು ತಪಾಸಣೆಗೊಳಪಟ್ಟು, ಚಿಕಿತ್ಸೆ ಪಡೆದರು. ದಂತ ವೈದ್ಯರಾದ ಡಾ.ಅನುಶ್ರೀ, ಡಾ.ಎನ್.ನಿಧಿ, ಡಾ.ದಿವ್ಯಾ ಹಾಗೂ ದಂತ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಸ್ಮೈಲ್ ಆರ್ಕಿಟೆಕ್ಟ್ ದಂತ ಚಿಕಿತ್ಸಾಲಯದ ಸಿಬ್ಬಂದಿ ದಂತ ತಪಾಸಣೆ ನಡೆಸಿದರು.

ಈ ವೇಳೆ ಅನಿ ಫೌಂಡೇಷನ್ ಮುಖ್ಯಸ್ಥೆ, ದಂತ ವೈದ್ಯರಾದ ಡಾ.ಅನುಶ್ರೀ ಮಾತನಾಡಿ, ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಗಜಪಡೆಯೊಂದಿಗೆ ಆಗಮಿಸಿರುವ ಮಾವುತರು, ಕಾವಾಡಿಗಳು ಹಾಗೂ ಕುಟುಂಬದ ಸದಸ್ಯರಿಗಾಗಿ ಕಳೆದ 4-5 ವರ್ಷದಿಂದಲೂ ಅನಿ ಫೌಂಡೇಷನ್ ವತಿಯಿಂದ ದಂತ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ದಂತ ರಕ್ಷಣೆ ಮಾಡಿಕೊಳ್ಳುವುದು, ಹಲ್ಲು ಉಜ್ಜುವಿಕೆ ವಿಧಾನ ಸೇರಿದಂತೆ ವಿವಿಧ ಮಾಹಿತಿಯನ್ನು, ಮಾವುತರು, ಕಾವಾಡಿಗಳ ಮಕ್ಕಳಿಗೆ ತಿಳಿ ಹೇಳಿ, ತಪಾಸಣೆ ಮಾಡಲಾಗಿದೆ. ಎಲ್ಲರಿಗೂ ಉಚಿತವಾಗಿ ಟೂತ್‌ಪೇಸ್ಟ್ ನೀಡಲಾಗಿದೆ ಎಂದರು.

ಚಾಮುಂಡಿಬೆಟ್ಟದಲ್ಲಿ ಪೊಲೀಸರ ಪಥ ಸಂಚಲನ; ಗ್ರಾಮಸ್ಥರ ಸಹಕಾರ ಕೋರಿಕೆ



ಚಾಮುಂಡಿಬೆಟ್ಟದ ವಿವಿಧ ರಸ್ತೆಯಲ್ಲಿ ಪೊಲೀಸರು ಪಥ ಸಂಚಲನ ನಡೆಸಿದರು.

ಮೈಸೂರು, ಸೆ.18(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಪೊಲೀಸರು ರೂಟ್ ಮಾರ್ಚ್ ನಡೆಸಿ, ಸೆ.22ರಂದು ನಡೆಯುವ ದಸರಾ ಉದ್ಘಾಟನಾ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಸ್ಥಳೀಯರಲ್ಲಿ ಮನವಿ ಮಾಡಿದರು.

ಮಹಿಷಾಸುರನ ಪ್ರತಿಮೆ ಬಳಿ ಗುರುವಾರ ಮುಂಜಾನೆ ಪಥ ಸಂಚಲನ ಆರಂಭಿಸಿದ ಪೊಲೀಸರು, ಚಾಮುಂಡಿ ಬೆಟ್ಟ ಗ್ರಾಮದ ವಿವಿಧ ರಸ್ತೆಯಲ್ಲಿ ಸಾಗಿದರು. ಕೆ.ಆರ್.ಠಾಣೆಯ ಇನ್ಸ್‌ಪೆಕ್ಟರ್ ಡಿ.ಪಿ.ಧನರಾಜ್ ನೇತೃತ್ವದಲ್ಲಿ ನಡೆದ ಪಥ ಸಂಚಲನದಲ್ಲಿ ಐವರು ಇನ್ಸ್‌ಪೆಕ್ಟರ್‌ಗಳು, 8 ಮಂದಿ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ 75 ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು.

ಗ್ರಾಮದ ವಿವಿಧ ಬೀದಿ, ದೇವಿಕೆರೆಯ ಸುತ್ತಮುತ್ತ ರೂಟ್ ಮಾರ್ಚ್ ನಡೆಸಿದರು. ಎರಡು ಗಂಟೆ ಕಾಲ ರೂಟ್ ಮಾರ್ಚ್ ನಡೆಸಿದ ಪೊಲೀಸರು, ನಂತರ ದೇವಾಲಯದ ಮುಂಭಾಗ ಅಂತ್ಯಗೊಳಿಸಿದರು. ಈ ವೇಳೆ ಸೆ.22ರಂದು ಬೆಳಗ್ಗೆ ಚಾಮುಂಡಿಬೆಟ್ಟದಲ್ಲಿ ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದ್ದು, ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಯಶಸ್ಸಿಗೆ ಬೆಟ್ಟದ ನಿವಾಸಿಗಳು ಸಹಕಾರ ನೀಡಬೇಕು. ಉದ್ಘಾಟನೆಯ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬೆಟ್ಟದಲ್ಲಿ ಸಮಾಜಘಾತುಕ ವ್ಯಕ್ತಿಗಳು ಕಂಡುಬಂದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವರಿಕೆ ಮಾಡಿಕೊಟ್ಟರು.

ಕಣ್ಮನ ಸೆಳೆಯುತ್ತಿದೆ ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂದಿನ ಹೂವಿನ ಅಲಂಕಾರ



ನೀರಿನ ಕಾರಂಜಿ ಬಳಿ ಹೂವಿನ ಗಿಡಗಳನ್ನು ಜೋಡಣೆ ಮಾಡುತ್ತಿರುವ ಸಿಬ್ಬಂದಿ.

ಮೈಸೂರು,ಸೆ.18(ಎಂಟಿವೈ)- ದಸರಾ ಮಹೋತ್ಸವದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂದೆ ಹೂವಿನ ಅಲಂಕಾರ ಮಾಡಲಾಗಿದ್ದು, ನೋಡುಗರ ಕಣ್ಮನ ಸೆಳೆಯುತ್ತಿದೆ.

ದಸರಾ ಫಲಪುಷ್ಪ ಪ್ರದರ್ಶನದ ಅಂಗವಾಗಿ ತೋಟಗಾರಿಕಾ ಇಲಾಖೆ ಸಂಘ ಸಂಸ್ಥೆಗಳಿಂದ ಹೂವಿನ ಅಲಂಕಾರ ಸ್ಪರ್ಧೆ ನಡೆಯಲಿದ್ದು, ಅದಕ್ಕಾಗಿ ಕ್ರಾಫರ್ಡ್ ಭವನದ ಮುಂದೆ ವಿವಿಧ ಹೂವಿನ ಗಿಡಗಳು ಮನಸೂರೆಗೊಳ್ಳುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗದ ವತಿಯಿಂದ ಕ್ರಾಫರ್ಡ್ ಭವನದ ಮುಂದೆ ಹೂವಿನ ಗಿಡಗಳ ಪಾಟ್‌ಗಳನ್ನು ಜೋಡಿಸಲಾಗಿದೆ.

ಕ್ರಾಫರ್ಡ್ ಭವನದ ಮುಂಭಾಗವಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಹಾಗೂ ನೀರಿನ ಕಾರಂಜಿ ಸುತ್ತಲೂ ಅಲಂಕಾರಿಕ ಹೂವಿನ ಗಿಡಗಳ ಪಾಟ್ ಜೋಡಣೆ ಮಾಡಲಾಗಿದೆ. ಹಳದಿ ಬಣ್ಣದ ಚೆಂಡೂವು, ರೆಡ್ ಸೆಲ್ವೆ, ಫ್ರೆಂಚ್ ಮೇರಿ ಗೋಲ್ಡ್, ಪಿಲಿಫರ್ ತಳಿಯ ಸುಮಾರು 3500ಕ್ಕೂ ಹೆಚ್ಚು ಪಾಟ್‌ಗಳಲ್ಲಿ ಬೆಳೆಸಿ ಜೋಡಣೆ ಮಾಡಲಾಗಿದೆ. ಕ್ರಾಫರ್ಡ್ ಭವನಕ್ಕೆ ವಿವಿಧ ಕೆಲಸಕ್ಕಾಗಿ ಬರುವವರು ಪಾಟ್‌ಗಳಲ್ಲಿ ಜೋಡಣೆ ಮಾಡಿರುವ ಹೂವಿನ ಕುಂಡಗಳ ಮುಂದೆ ಫೋಟೋ ತೆಗೆಸಿಕೊಂಡು ಸಂಭ್ರಮಿಸುತ್ತಿದ್ದಾರೆ.

ದಸರೆಗೆ ಝಗಮಗಿಸುತ್ತಿದೆ ಮೈಸೂರು



ಕೆ.ಆರ್.ವೃತ್ತದ ಬಳಿ ಸಯ್ಯಾಜಿರಾವ್ ರಸ್ತೆಯಲ್ಲಿ ಅಳವಡಿಸಿರುವ ವಿದ್ಯುತ್ ದೀಪಾಲಂಕೃತ ಕಮಾನು.



ಮೈಸೂರು ಮಹಾನಗರ ಪಾಲಿಕೆ ಮುಂಭಾಗದ ವೃತ್ತ ಹಾಗೂ ಬಿ.ಎನ್.ರಸ್ತೆ ಸಂಪರ್ಕಿಸುವ ಮಾರ್ಗದಲ್ಲಿ ಆಕರ್ಷಕ ವಿದ್ಯುತ್ ದೀಪಾಲಂಕಾರ.



ಕೆ.ಆರ್.ಆಸ್ಪತ್ರೆ ಬಳಿಯ ಹಸಿರು ಚಪ್ಪರ ಸೇರಿದಂತೆ ಸಯ್ಯಾಜಿರಾವ್ ರಸ್ತೆ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವುದು.

ಸೆ.22ರಿಂದ ನಾಲ್ಕು ದಿನ ರಾಜ್ಯಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟ



ಸುದ್ದಿಗೋಷ್ಠಿಯಲ್ಲಿ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಆಯುಕ್ತ ಚೇತನ್ ಮಾಹಿತಿ ನೀಡಿದರು.

ಕ್ರೀಡಾಕೂಟ ನಡೆಯುವ ಸ್ಥಳಗಳು

- ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆರ್ಚರಿ, ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಫೆನ್ಸಿಂಗ್, ಜಿಮ್ನಾಸ್ಟಿಕ್, ಹ್ಯಾಂಡ್‌ಬಾಲ್, ಹಾಕಿ, ಖೋ-ಖೋ, ನೆಟ್‌ಬಾಲ್, ಈಜು, ಥ್ರೋಬಾಲ್, ವಾಲಿಬಾಲ್, ವುಶು ಸ್ಪರ್ಧೆ
- ಮಾನಸ ಗಂಗೋತ್ರಿಯ ಒಳಾಂಗಣ ಕ್ರೀಡಾಂಗಣದಲ್ಲಿ ಬ್ಯಾಡ್ಮಿಂಟನ್ ಸ್ಪರ್ಧೆ
- ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್ ಹಾಕಿ ಮೈದಾನದಲ್ಲಿ ಬಾಲ್ ಬ್ಯಾಡ್ಮಿಂಟನ್, ಫುಟ್‌ಬಾಲ್, ಕಬಡ್ಡಿ
- ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ ಪೆವಿಲಿಯನ್‌ನ ಯೋಗ ಹಾಲ್‌ನಲ್ಲಿ ಯೋಗ
- ಮಹಾರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಜೂಡೋ
- ಚಾಮರಾಜಪುರಂನ ಮೈಸೂರು ಟೆನ್ನಿಸ್ ಕ್ಲಬ್‌ನಲ್ಲಿ ಲಾನ್ ಟೆನ್ನಿಸ್
- ವಿಶ್ವೇಶ್ವರನಗರದ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಟೇಬಲ್ ಟೆನ್ನಿಸ್
- ಯುವರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಟೆಕ್ವಾಂಡೋ
- ದೇವರಾಜ ಅರಸು ಕುಸ್ತಿ ಪೆವಿಲಿಯನ್ ಕ್ರೀಡಾಂಗಣದಲ್ಲಿ ಕುಸ್ತಿ ಸೇರಿದಂತೆ ರಿಂಗ್ ರಸ್ತೆಯಿಂದ ಸೈಕ್ಲಿಂಗ್ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ.

ಮೈಸೂರು, ಸೆ.18(ವಿವಿಹೆಚ್)- ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಸೆ.22 ರಿಂದ 25ರವರೆಗೆ ನಾಲ್ಕು ದಿನಗಳ ಕಾಲ ರಾಜ್ಯಮಟ್ಟದ ದಸರಾ ಸಿಎಂ ಕಪ್-2025 ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಆಯುಕ್ತ ಚೇತನ್ ತಿಳಿಸಿದರು.

ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ದಸರಾ ಕ್ರೀಡಾಕೂಟ ಮುಖ್ಯಮಂತ್ರಿ ಕಪ್-2025 ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಂದು (ಸೆ.22) ಸಂಜೆ 5.30ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ. ಇದರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಭಾಗವಹಿಸಲಿದ್ದು, ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಗ್ರಾಮ, ತಾಲೂಕು, ಜಿಲ್ಲೆ ಮತ್ತು ವಿಭಾಗೀಯ ಹಂತಗಳಲ್ಲಿ 45 ದಿನಗಳ ಕಾಲ ನಡೆದ ದಸರಾ ಕ್ರೀಡಾಕೂಟದಲ್ಲಿ ಗೆದ್ದ ಕ್ರೀಡಾಪಟುಗಳನ್ನು ರಾಜ್ಯಮಟ್ಟದ ದಸರಾ ಕ್ರೀಡಾಕೂಟಕ್ಕೆ ಆಯ್ಕೆ ಮಾಡಲಾಗಿದೆ. ಒಂದು ವಿಭಾಗದಿಂದ 646 ಮಹಿಳಾ ಮತ್ತು ಪುರುಷ ಕ್ರೀಡಾಪಟುಗಳು ಭಾಗವಹಿಸುತ್ತಿದ್ದು, ಐದು ವಿಭಾಗಗಳಿಂದ 3230 ಕ್ರೀಡಾಪಟುಗಳು ತಮ್ಮ ಪ್ರತಿಭೆ ಅನಾವರಣಗೊಳಿಸಲಿದ್ದಾರೆ ಎಂದರು.

ನಗರದ ಚಾಮುಂಡಿವಿಹಾರ ಕ್ರೀಡಾಂಗಣ, ಡಿ.ದೇವರಾಜ ಅರಸು ಕುಸ್ತಿ ಅಖಾಡ, ಮೈಸೂರು ವಿವಿ ಕ್ರೀಡಾಂಗಣಗಳನ್ನೊಳಗೊಂಡಂತೆ 13 ಸ್ಥಳಗಳಲ್ಲಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಕಬಡ್ಡಿ, ಖೋ-ಖೋ, ಈಜು, ವಾಲಿಬಾಲ್, ಥ್ರೋಬಾಲ್, ಹ್ಯಾಂಡ್‌ಬಾಲ್, ಭಾರ ಎತ್ತುವುದು, ಚೆಸ್, ದೇಹದಾರ್ಢ್ಯ, ಬಾಕ್ಸಿಂಗ್, ಬಾಲ್ ಬ್ಯಾಡ್ಮಿಂಟನ್, ಕುಸ್ತಿ, ಟೆನ್ನಿಸ್, ಶೂಟಿಂಗ್, ಯೋಗ, ನೆಟ್‌ಬಾಲ್, ಆರ್ಚರಿ, ವುಶು, ಟೇಬಲ್ ಟೆನಿಸ್ ಸೇರಿದಂತೆ 26 ಕ್ರೀಡೆಗಳು ನಡೆಯಲಿವೆ ಎಂದು ವಿವರಿಸಿದರು. ಶ್ರೀರಂಗಪಟ್ಟಣದಲ್ಲಿ ವಿವಿಧ ಜಲಸಾಹಸ ಕ್ರೀಡೆ ಆಯೋಜಿಸಲಾಗಿದೆ ಎಂದರು.

ಕ್ರೀಡಾಪಟುಗಳಿಗೆ ವಿಶೇಷ ಉಪಚಾರ: ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಅಗತ್ಯವಾಗಿ ಬೇಕಾದ ಊಟ, ವಸತಿ, ಸಾರಿಗೆ ವ್ಯವಸ್ಥೆಯನ್ನು ಮಾಡಲಾಗಿದೆ. ಇದರ ಮೇಲ್ವಿಚಾರಣೆಯನ್ನು ಖುದ್ದು ನಾವೇ ನೋಡಿಕೊಳ್ಳುತ್ತೇವೆ. ಕಳೆದ ಬಾರಿ ಉಂಟಾದ ಸಮಸ್ಯೆಗಳಿಗೆ ಈ ಬಾರಿ ಪರಿಹಾರ ಕಂಡುಕೊಳ್ಳಲಾಗಿದೆ. ಈ ಬಾರಿ 3230 ಕ್ರೀಡಾಪಟುಗಳು, 800 ತಾಂತ್ರಿಕ ಸಿಬ್ಬಂದಿ ಭಾಗವಹಿಸಲಿದ್ದು, 54 ವಸತಿ ಗೃಹಗಳಲ್ಲಿ ವಸತಿ, ನಂಜರಾಜ ಬಹುದ್ದೂರ್ ಛತ್ರದಲ್ಲಿ ಊಟೋಪಹಾರ, ಸಾರಿಗೆ, ವೈದ್ಯಕೀಯ ವ್ಯವಸ್ಥೆ ನೀಡಲಾಗುತ್ತದೆ. ಮತ್ತು ಕ್ರೀಡಾಕೂಟದಲ್ಲಿ ಭಾಗವಹಿಸುವ ಸ್ಪರ್ಧಾರ್ಥಿಗಳಿಗೆ ಟ್ರ್ಯಾಕ್ ಸೂಟ್ ಮಾತ್ರ ನೀಡಲಾಗುತ್ತಿದ್ದು, 'ಶೂ' ನೀಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ನಗದು ಬಹುಮಾನ: ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾಗುವ ಕ್ರೀಡಾಪಟುಗಳಿಗೆ ವೈಯಕ್ತಿಕ ಮತ್ತು ಗುಂಪು ಕ್ರೀಡೆಗಳಿಗೆ ನಗದು ಬಹುಮಾನ ಇರಲಿದೆ. ವೈಯಕ್ತಿಕ ಕ್ರೀಡೆಗಳಲ್ಲಿ ಪ್ರಥಮ ಬಹುಮಾನ 8 ಸಾವಿರ, ದ್ವಿತೀಯ 5 ಸಾವಿರ, ತೃತೀಯ ಬಹುಮಾನವಾಗಿ 2500 ನೀಡಲಾಗುವುದು. ಗುಂಪು ವಿಭಾಗದಲ್ಲಿ ಗರಿಷ್ಠ 7 ಜನರನ್ನೊಳಗೊಂಡ ತಂಡಕ್ಕೆ ಪ್ರಥಮ ಬಹುಮಾನ 4 ಸಾವಿರ, ದ್ವಿತೀಯ ಬಹುಮಾನ 3 ಸಾವಿರ ಹಾಗೂ ತೃತೀಯ ಬಹುಮಾನವಾಗಿ 2 ಸಾವಿರ ರೂ. ನೀಡಲಾಗುವುದು. ಇನ್ನು 8ಕ್ಕಿಂತ ಹೆಚ್ಚು ಆಟಗಾರರನ್ನೊಳಗೊಂಡ ತಂಡಕ್ಕೆ ಪ್ರಥಮ 3 ಸಾವಿರ, ದ್ವಿತೀಯ 2 ಸಾವಿರ ಮತ್ತು ತೃತೀಯ ಸ್ಥಾನಕ್ಕೆ 1 ಸಾವಿರ ಮೊತ್ತವನ್ನು ಬಹುಮಾನವಾಗಿ ನೀಡಲಾಗುವುದು ಎಂದರು.

ಚಾಮುಂಡಿಬೆಟ್ಟ ಹತ್ತಿ 10 ಸಾವಿರ ಗೆಲ್ಲಿ: ದಸರಾ ಕ್ರೀಡಾಕೂಟ ಅಂಗವಾಗಿ ಸೆ.24ರಂದು ಸ್ಥಳೀಯರಿಗಾಗಿ ಚಾಮುಂಡಿಬೆಟ್ಟ ಹತ್ತುವ ಸ್ಪರ್ಧೆ ಆಯೋಜಿಸಲಾಗಿದೆ. ಪ್ರಥಮ ಸ್ಥಾನ ಪಡೆಯುವವರಿಗೆ 10 ಸಾವಿರ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಕ್ರಮವಾಗಿ 7 ಸಾವಿರ, 5 ಸಾವಿರ ಪ್ರೋತ್ಸಾಹ ಧನ ನೀಡಲಾಗುವುದು ಎಂದು ತಿಳಿಸಿದರು.

ಸ್ಥಳೀಯರಿಗೆ ವಿವಿಧ ಕ್ರೀಡೆಗಳು: ಇದರ ಜತೆಗೆ ಸ್ಥಳೀಯವಾಗಿ ಕ್ರೀಡಾಕೂಟದಲ್ಲಿ ಭಾಗವಹಿಸುವವರಿಗೆ ಆಯ್ದ ಕ್ರೀಡೆಗಳಾದ ಅಂಧರ ಚೆಸ್, ಸೈಕಲ್ ಪೋಲೋ, ಕರಾಟೆ, ಬಾಡಿ ಬಿಲ್ಡಿಂಗ್ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ. ಜೊತೆಗೆ ಪುರುಷರಿಗೆ 10 ಸಾವಿರ ಮೀ. ಮ್ಯಾರಥಾನ್ ಮಹಿಳೆಯರಿಗೆ 5 ಸಾವಿರ ಮೀ. ಮ್ಯಾರಥಾನ್ ಆಯೋಜಿಸಲಾಗಿದೆ. ಆದರೆ ಅದಕ್ಕೆ ದಿನಾಂಕ ನಿಗದಿಯಾಗಿಲ್ಲ ಎಂದು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ದಸರಾ ಕ್ರೀಡಾ ಉಪ ಸಮಿತಿಯ ಉಪ ವಿಶೇಷಾಧಿಕಾರಿ, ಮುಡಾ ಕಾರ್ಯದರ್ಶಿ ಎ.ಟಿ.ಜಾನ್ಸನ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 19 ಸೆಪ್ಟೆಂಬರ್ 2025

ಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿಸಿ, ದೂರು ಬರದಂತೆ ಗಮನಹರಿಸಿ

ಮಡಿಕೇರಿ, ಸೆ.18– ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಕಾರ್ಮಿಕ ಸಂಘಟನೆಗಳು, ಹೋಂಸ್ಟೇ ಹಾಗೂ ಹೋಟೆಲ್ ಅಸೋಷಿಯೇಷನ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಜೊತೆ ಚರ್ಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಸಂಘ ಸಂಸ್ಥೆ ಜೊತೆ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು ಕಾರ್ಮಿಕರಿಗೆ ಕನಿಷ್ಠ ವೇತನ ಕಲ್ಪಿಸಬೇಕು. ಆರೋಗ್ಯ ವಿಮೆ ಸೇರಿದಂತೆ ಸರ್ಕಾರದ ಯೋಜನೆಗಳನ್ನು ಪಡೆದುಕೊಳ್ಳುವಂತಾಗಲು ಕಾರ್ಮಿಕರಿಗೆ ಮಾಹಿತಿ ನೀಡುವಂತಾಗಬೇಕು ಎಂದು ಸಲಹೆ ನೀಡಿದರು.

ಹೋಂಸ್ಟೇ, ಹೋಟೆಲ್ ಸೇರಿದಂತೆ ಕಾರ್ಮಿಕರು ಕೆಲಸ ಮಾಡುವ ಸ್ಥಳಗಳಲ್ಲಿ ಸುರಕ್ಷತೆಗೆ ಒತ್ತು ನೀಡಬೇಕು. ಸಿಸಿಟಿವಿ ಅಳವಡಿಸುವುದು, ಸಂಚಾರಿ ದೂರವಾಣಿ ಸಂಖ್ಯೆ ಸೇರಿದಂತೆ ವಾಸ್ತವ್ಯ ಹೂಡುವವರ ಮಾಹಿತಿ ಇರಬೇಕು. ಹೋಂ ಸ್ಟೇ ನೋಂದಣಿ, ಪರವಾನಗಿ, ನವೀಕರಣ ಸಂಬಂಧ ಪ್ರವಾಸೋದ್ಯಮ, ಪೌರಾಡಳಿತ ಹಾಗೂ ಪಂಚಾಯತ್ ರಾಜ್ ಸಚಿವರ ಜೊತೆ ಚರ್ಚಿಸಲಾಗುವುದು ಎಂದು ಸಚಿವರು ತಿಳಿಸಿದರು.

ಜೊತೆಗೆ ಶಾಸಕರ ನೇತೃತ್ವದಲ್ಲಿ ಸಚಿವರನ್ನು ಭೇಟಿ ಮಾಡಲು ನಿಯೋಗ ತೆರಳುವಂತೆ ಸಲಹೆ ನೀಡಿದರು. ಹೋಂ ಸ್ಟೇ ನೋಂದಣಿ, ಪರವಾನಗಿ ನೋಂದಣಿ ಮತ್ತಿತರ ಸಂಬಂಧ ಸಕಾಲದಲ್ಲಿ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಿದರು.

ಹೋಂಸ್ಟೇ ಅಸೋಷಿಯೇಷನ್ ಅವರು ಒಂದೆಡೆ ಸೇರಿ ಒಬ್ಬರನ್ನು ಪಿಆರ್‌ಒ ಅಥವಾ ಲೈಜನಿಂಗ್ ಅಧಿಕಾರಿಯನ್ನು ನಿಯೋಜಿಸಿಕೊಳ್ಳುವುದರಿಂದ ಹೋಂಸ್ಟೇ ನೋಂದಣಿ, ನವೀಕರಣ ಬಗ್ಗೆ ಗಮನಹರಿಸಬಹುದಾಗಿದೆ ಎಂದರು.

ಕಾರ್ಮಿಕರ ವೇತನ ಮತ್ತಿತರ ಬಗ್ಗೆ ದೂರುಗಳು ಬಂದರೆ ಕಂದಾಯ, ಕಾರ್ಮಿಕ, ಪ್ರವಾಸೋದ್ಯಮ ಪೊಲೀಸ್, ಸೆಸ್ಕ್, ಪಂಚಾಯತ್ ರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸ್ಥಳೀಯ ಸಂಸ್ಥೆಗಳು, ಹೀಗೆ ಜಂಟಿ ತಪಾಸಣೆ ಕೈಗೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸಿಂಗಲ್ ವಿಂಡೋ ಮಾದರಿಯಲ್ಲಿ ಮೂರು ತಿಂಗಳಿಗೊಮ್ಮೆ ನಡೆಯುವ ಕೆಡಿಪಿ ಸಭೆ ಸಂದರ್ಭದಲ್ಲಿ ಹೋಂಸ್ಟೇ ಸಂಬಂಧ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಬಹುದಾಗಿದೆ ಎಂದರು.

ಕೊಡಗು ಜಿಲ್ಲೆಯ ನೆಲ, ಜಲ, ಸಂಸ್ಕೃತಿ, ಪರಿಸರ ಉಳಿಸಿಕೊಂಡು ಹೋಗಬೇಕು. ಇದರಿಂದ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಡಾ.ಮಂತರ್‌ಗೌಡ, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್, ಪೌರಾಡಳಿತ ಸಚಿವ ರಹೀಮ್ ಖಾನ್, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ದಸರಾ ನಂತರ ನಿಯೋಗ ತೆರಳಿ ಭೇಟಿ ಮಾಡಲಾಗುವುದು ಎಂದರು.

ಹೋಂಸ್ಟೇ ಅಸೋಷಿಯೇಷನ್‌ಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಬೇಕಿದ್ದು, ಕೆಲವು ತಾಂತ್ರಿಕ ತೊಂದರೆಯಿಂದ ವಿಳಂಬವಾಗುತ್ತಿದೆ. ಆದ್ದರಿಂದ ಮ್ಯಾನ್ಯುವೆಲ್ ಮೂಲಕ ನೋಂದಣಿ ಮಾಡಿಕೊಳ್ಳುವಂತಾಗಬೇಕು. ಪರವಾನಗಿ ನವೀಕರಣ ಮಾಡಬೇಕು ಎಂದು ಶಾಸಕರು ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಪ್ರತಿನಿಧಿ ಅವರು ಜಿಲ್ಲೆಯಲ್ಲಿ ಸುಮಾರು 230 ಅರ್ಜಿಗಳು ಬಾಕಿ ಇದೆ ಎಂದು ತಿಳಿಸಿದರು.



ಮಡಿಕೇರಿಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಕಾರ್ಮಿಕ ಸಂಘಟನೆಗಳೊಂದಿಗೆ ಸಭೆ ನಡೆಸಿದರು.

ದಸರಾ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಧ್ವನಿವರ್ಧಕ ಬಳಸಲು ನಿಯಮಗಳನ್ನು ಸಡಿಲಿಸಿ

ಸಂಸದ ಯದುವೀರ್‌ಗೆ ದಶಮಂಟಪ ಸಮಿತಿ ಮನವಿ

ಮಡಿಕೇರಿ,ಸೆ.18– ಮಡಿಕೇರಿ ದಸರಾ ಜನೋತ್ಸವದ ಪ್ರಮುಖ ಆಕರ್ಷಣೆಯಾಗಿರುವ ದಶಮಂಟಪಗಳ ಶೋಭಾಯಾತ್ರೆಯ ಸಂದರ್ಭ ಅಗತ್ಯ ಧ್ವನಿವರ್ಧಕಗಳನ್ನು ಬಳಸಲು ನಿಯಮಗಳನ್ನು ಸಡಿಲಿಸಬೇಕು ಮತ್ತು ಈ ಕುರಿತು ಅವಕಾಶ ನೀಡಲು ಪೊಲೀಸ್ ಇಲಾಖೆಗೆ ಸೂಚನೆ ನೀಡಬೇಕೆಂದು ಒತ್ತಾಯಿಸಿ ಮಡಿಕೇರಿ ದಸರಾ ದಶಮಂಟಪ ಸಮಿತಿ ಮೈಸೂರು– ಕೊಡಗು ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮನವಿ ಸಲ್ಲಿಸಿದೆ.

ಸಂಸದರು ಇಂದು ನಗರದ ದಶ ದೇವಾಲಯಗಳಿಗೆ ಭೇಟಿ ನೀಡಿ ದಸರಾ ಆಚರಣೆಯ ಕುರಿತು ದಸರಾ ಸಮಿತಿ ಮತ್ತು ದಶಮಂಟಪ ಸಮಿತಿಗಳ ಪ್ರಮುಖರೊಂದಿಗೆ ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಮನವಿ ಪತ್ರ ಸಲ್ಲಿಸಿದ ದಶ ಮಂಟಪ ಸಮಿತಿಯ ಪ್ರಮುಖರು ಮಡಿಕೇರಿ ದಸರಾ ಜನೋತ್ಸವ ಮೈಸೂರು ದಸರಾದಂತೆಯೇ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ನಾಲ್ಕು ಶಕ್ತಿ ದೇವತೆಗಳ ಕರಗೋತ್ಸವ ಮತ್ತು ನಗರ ಸಂಚಾರ ಭಕ್ತಿಪೂರ್ವಕವಾಗಿ ನಡೆಯುತ್ತದೆ. ವಿಜಯದಶಮಿಯಂದು ದಶಮಂಟಪಗಳ ಶೋಭಾಯಾತ್ರೆ ಜನಾಕರ್ಷಣೆಯನ್ನು ಪಡೆದುಕೊಳ್ಳುತ್ತದೆ.

ಪ್ರತಿ ಮಂಟಪವನ್ನು ತಯಾರಿಸಲು ಸುಮಾರು 25ರಿಂದ 30ಲಕ್ಷ ರೂ.ಗಳಷ್ಟು ಖರ್ಚು ಮಾಡಲಾಗುತ್ತಿದೆ. ಆದರೆ ಮಂಟಪಗಳ ಶೋಭಾಯಾತ್ರೆಯ ಸಂದರ್ಭ ಧ್ವನಿವರ್ಧಕಗಳನ್ನು ಬಳಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಿದೆ. ಮಂಟಪಗಳಲ್ಲಿ ಕಥಾ ಸಾರಾಂಶವನ್ನು ಪ್ರದರ್ಶಿಸುವಾಗ ಜೀವಕಳೆ ಬರಬೇಕಾದರೆ ಮತ್ತು ಆಕರ್ಷಣೆ ಹೆಚ್ಚಬೇಕಾದರೆ ಧ್ವನಿವರ್ಧಕದ ಬಳಕೆ ಅಗತ್ಯವಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮಂಟಪ ಸಮಿತಿಗಳ ಸದಸ್ಯರು ಕಾಳಜಿ ತೋರಲಿದ್ದಾರೆ. ಆದ್ದರಿಂದ ನಿಯಮಗಳನ್ನು ಸಡಿಲಿಸಿ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಬೇಕೆಂದು ಸಮಿತಿಯ ಪ್ರಮುಖರು ಸಂಸದರಲ್ಲಿ ಮನವಿ ಮಾಡಿದರು.

ಅದ್ದೂರಿ ದಸರಾ ಆಚರಣೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು. ವಿವಿಧ ದೇವಾಲಯ ಸಮಿತಿಗಳು ಸಂಸದರನ್ನು ಸನ್ಮಾನಿಸಿ ಗೌರವಿಸಿದವು. ಈ ಸಂದರ್ಭ ದಶಮಂಟಪ ಸಮಿತಿ ಅಧ್ಯಕ್ಷ ಬಿ.ಎಂ.ಹರೀಶ್ ಅಣ್ವೇಕರ್ ಹಾಗೂ ಎಲ್ಲಾ 10 ದೇವಾಲಯ ಸಮಿತಿಗಳ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.




ಸಂಸದ ಯದುವೀರ್‌ಗೆ ಅಭಿನಂದಿಸಿ, ಮನವಿ ಸಲ್ಲಿಸುತ್ತಿರುವುದು.

ಸಂತ ಮೇರಿ ಪಿಯು ಕಾಲೇಜು ರಾಜ್ಯಮಟ್ಟಕ್ಕೆ ಆಯ್ಕೆ



ಸುಂಟಿಕೊಪ್ಪ ಸಂತ ಮೇರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಪುಟ್ಬಾಲ್ ತಂಡ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದೆ. ಗೋಣಿಕೊಪ್ಪದ ಕಾಪ್ಸ್ ಶಾಲಾ ಮೈದಾನದಲ್ಲಿ ನಡೆದ ಜಿಲ್ಲಾ ಮಟ್ಟದ ಪಂದ್ಯಾವಳಿಯಲ್ಲಿ ಪದವಿ ಪೂರ್ವ ಕಾಲೇಜುಗಳ ಪುಟ್ಬಾಲ್ ವಿಭಾಗದಲ್ಲಿ ಸಂತ ಮೇರಿ ಪದವಿ ಕಾಲೇಜು ಬಾಲಕರು ಜಯಗಳಿಸುವ ಮೂಲಕ ಸೆ.19ರಿಂದ ದಾವಣಗೆರೆಯಲ್ಲಿ ಆರಂಭಗೊಳ್ಳಲಿರುವ ರಾಜ್ಯ ಮಟ್ಟದ ಪುಟ್ಬಾಲ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದೆ.

ಫಕ್ರುದ್ದೀನ್ ನಿಧನ



ನಾಪೋಕ್ಲು, ಸೆ.18– ಇಲ್ಲಿಗೆ ಸಮೀಪದ ಕುಂಜಿಲ ಗ್ರಾಮದ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕ, ಕುಂಜಿಲ ಪಯ್ ನರಿ ಮುಸ್ಲಿಂ ಜಮಾಅತ್ನ ಮಾಜಿ ಅಧ್ಯಕ್ಷ ಫಕ್ರುದ್ದೀನ್ (ಪಕ್ರು ಮಾಸ್ಟರ್) ಗುರುವಾರ ನಿಧನರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಅಂತ್ಯಕ್ರಿಯೆ ಗುರುವಾರ ಕುಂಜಿಲ ಪಯ್ ನರಿ ಮುಸ್ಲಿಂ ಜಮಾಅತ್ನ ಖಬರ್ ಸ್ಥಾನದಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ, ಇಬ್ಬರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ನಾಪೋಕ್ಲು ಬಿಜೆಪಿ ಶಕ್ತಿ ಕೇಂದ್ರದ ವತಿಯಿಂದ ಹಿಂದೂ ರುದ್ರಭೂಮಿಯಲ್ಲಿ ಸ್ವಚ್ಛತಾ ಕಾರ್ಯ

ನಾಪೋಕ್ಲು, ಸೆ.18– ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಜನ್ಮದಿನದ ಪ್ರಯುಕ್ತ ಸ್ಥಳೀಯ ಬಿಜೆಪಿ ಶಕ್ತಿ ಕೇಂದ್ರದ ವತಿಯಿಂದ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು. ಇಲ್ಲಿಯ ಬಿಜೆಪಿ ಶಕ್ತಿ ಕೇಂದ್ರದ ವತಿಯಿಂದ ನಾಪೋಕ್ಲು ಹಿಂದೂ ರುದ್ರಭೂಮಿಯ ಆವರಣದಲ್ಲಿದ್ದ ಗಿಡ ಗಂಟಿಗಳನ್ನು ಕಡಿದು ತೆರವುಗೊಳಿಸುವುದರ ಮೂಲಕ ಸ್ವಚ್ಛತಾ ಕಾರ್ಯ ಮಾಡಲಾಯಿತು.

ಈ ಸಂದರ್ಭದಲ್ಲಿ ನಾಪೋಕ್ಲು ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖ ಅಂಬಿ ಕಾರ್ಯಪ್ಪ ಹಾಗೂ ಸಹ ಪ್ರಮುಖರು ಹಾಗೂ ಬೂತ್ ಅಧ್ಯಕ್ಷರು ಕಾರ್ಯಕರ್ತರುಗಳಿಗೆ ಹಣ್ಣು ಹಂಪಲು ಹಾಗೂ ಜ್ಯೂಸ್ ವಿತರಿಸುವ ಮೂಲಕ ನರೇಂದ್ರ ಮೋದಿಯವರ ಜನ್ಮದಿನವನ್ನು ಅರ್ಥಪೂರ್ಣ ವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಬಿ.ಎಂ.ಪ್ರತೀಪ, ಪ್ರವೀಣ ಬಿ ಎಸ್ ,ಲೋಹಿತ್ ಕೆ ಎಸ್, ಸಂದೇಶ್, ಜೀವನ್, ಶಾಜೇಶ್, ಜಗದೀಶ್ ಕೆ.ವಿ, ನವೀನ್, ಗಿರೀಶ್ ಬಿ.ಎಸ್ , ಗಿರೀಶ್ ಬಿ.ಜಿ.ಕಿರಣ, ದರ್ಶನ್, ಮಹೇಶ್, ಶೇಕರ ಹಾಗು ಇತರ ಕಾರ್ಯಕರ್ತರಿದ್ದರು.



ಹೆಸರು ನೋಂದಾಯಿಸಿ

ಮಡಿಕೇರಿ: ಪ್ರಸಕ್ತ ಸಾಲಿಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ರ‍್ಯಾಂಪ್ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ ಉದ್ಯಮ ನೋಂದಣಿ ಪಡೆದಿರುವ ನೋಂದಾಯಿತ ಕೈಗಾರಿಕೋದ್ಯಮಿಗಳಿಗೆ TReDS ಯೋಜನೆಯ ಬಗ್ಗೆ ಅರಿವು ಮೂಡಿಸಲು ಒಂದು ದಿನದ ಕಾರ್ಯಾಗಾರವು ನಡೆಯಲಿದ್ದು ನಗರದ ಜಂಟಿ ನಿರ್ದೇಶಕರ ಕಚೇರಿ, ಕೊಹಿನೂರು ರಸ್ತೆ, ಮಡಿಕೇರಿ, ಕೊಡಗು ಜಿಲ್ಲಾ ಕಚೇರಿಯಲ್ಲಿ ಸೆ.25 ರೊಳಗೆ ಹೆಸರು ನೋಂದಾಯಿಸಿಕೊಳ್ಳಲು ಕೋರಿದೆ. (ದೂ.ನಂ.08272–228746)

ಕಾವೇರಿ ನದಿಯಲ್ಲಿ ಮುಳುಗಿ ಹೆಣ್ಣಾನೆ ಸಾವು

ಕುಶಾಲನಗರ : ಕೊಡಗು ವೃತ್ತ ಮಡಿಕೇರಿ ವಿಭಾಗ ಕುಶಾಲನಗರ ವಲಯದ ಮೀನುಕೊಲ್ಲಿ ಶಾಖೆಯ ವಾಲ್ನೂರು ಹಾಗೂ ಮಾಲ್ದಾರೆ ನದಿಯಲ್ಲಿ ಕಾಡಾನೆಯೊಂದು ಮುಳುಗಿ ಮೃತಪಟ್ಟಿರುವ ಘಟನೆ ನಡೆದಿದೆ.



ಕಾವೇರಿ ನದಿಗೆ ನೀರು ಕುಡಿಯಲು ಇಳಿದ ಹೆಣ್ಣು ಕಾಡಾನೆ ಬುಧವಾರ ಬೆಳಿಗ್ಗೆ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟಿದ್ದು, ಮಧ್ಯಾಹ್ನ ಆನೆಯ ಮೃತದೇಹ ಕಂಡು ಬಂದಿತು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎ.ಗೋಪಾಲ ಮಾರ್ಗದರ್ಶನದಂತೆ ವಲಯ ಅರಣ್ಯಾಧಿಕಾರಿ ಆರ್.ರಕ್ಷಿತ್ ಹಾಗೂ ಮುಖ್ಯ ಪಶುವೈದ್ಯಾಧಿಕಾರಿ ಡಾ. ಮುಜೀಬ್,ಪಶುವೈದ್ಯಾಧಿಕಾರಿ ಡಾ. ಚಿಟ್ಟಿಯಪ್ಪ ನೇತೃತ್ವದಲ್ಲಿ ಮೃತಪಟ್ಟ ಆನೆಯನ್ನು ನದಿಯ ಮಧ್ಯಭಾಗದಿಂದ ಗುರುವಾರ ಬೆಳಿಗ್ಗೆ ಬೋಟಿನ ವ್ಯವಸ್ಥೆ ಮಾಡಿಕೊಡು ಸಾಕಾನೆಯ ಸಹಾಯದಿಂದ ಆನೆಯ ಮೃತದೇಹವನ್ನು ಹೊರತೆಗೆಯಲಾಯಿತು. ಮೃತಪಟ್ಟ ಆನೆಯ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರಾದ ಡಾ.ಮುಜೀಬ್ ಹಾಗೂ ಡಾ.ಚಿಟ್ಟಿಯಪ್ಪ, ಮೃತಪಟ್ಟ ಆನೆಯು ಹೆಣ್ಣು ಕಾಡಾನೆಯಾಗಿದ್ದು ಆನೆಗೆ ಯಾವುದೇ ಗುಂಡು ತಗುಲಿ ಅಥವಾ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿಲ್ಲ. ಅದು ನದಿ ನೀರಿನಲ್ಲಿ ಮುಳುಗಡೆ ಆಗಿ ಸತ್ತಿದೆ ಎಂದು ದೃಢಪಡಿಸಿದರು. ನಂತರ ಅರಣ್ಯ ಇಲಾಖೆ ಸಿಬ್ಬಂದಿಗಳು, ಮಾವುತರಿಂದ ಮಾಲ್ದಾರೆ ಅರಣ್ಯ ಪ್ರದೇಶದಲ್ಲಿ ಮೃತಪಟ್ಟ ಆನೆ ಅಂತ್ಯಸಂಸ್ಕಾರ ನಡೆಸಲಾಯಿತು.

ಬಸ್ ಡಿಕ್ಕಿ; ಬೈಕ್ ಸವಾರ ಸಾವು

ಚಾಮರಾಜನಗರ, ಸೆ.18–ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಗುರುವಾರ ಮಧ್ಯಾಹ್ನ ನಡೆದಿದೆ.



ತಾಲೂಕಿನ ಕಾಡಹಳ್ಳಿ ಗ್ರಾಮದ ನಿವಾಸಿಯಾದ ಶಿವಮಲ್ಲು (45) ಮೃತ ಸವಾರ. ಈತ ಕಾರ್ಯನಿಮಿತ್ತ ಸ್ವ ಗ್ರಾಮದಿಂದ ಚಾಮರಾಜನಗರಕ್ಕೆ ಬೈಕ್‌ನಲ್ಲಿ ಬಂದಿದ್ದು, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ರಸ್ತೆ ವಿಭಜಕದ ಬಳಿ ತೆರಳುತ್ತಿದ್ದಾಗ ಕೊಳ್ಳೇಗಾಲದಿಂದ ನಗರಕ್ಕೆ ಬಂದ ಕೆಎಸ್‌ಆರ್‌ಟಿಸಿ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್‌ನಿಂದ ಸವಾರ ಕೆಳಕೆ ಬಿದ್ದಿದ್ದಾನೆ. ಈ ವೇಳೆ ಬಸ್‌ನ ಹಿಂಬದಿಯ ಚಕ್ರ ಸವಾರ ಶಿವಮಲ್ಲು ಮೇಲೆ ಹರಿದ ಪರಿಣಾಮ ತೀವ್ರ ಗಾಯಗೊಂಡು ಶಿವಮಲ್ಲು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರ ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ, ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಬೋಧನಾ ಆಸ್ಪತ್ರೆ (ಸಿಮ್ಸ್)ಗೆ ರವಾನಿಸಿದ್ದಾರೆ. ಬೈಕ್ ಹಾಗೂ ಬಸ್ ಅನ್ನು ಪೊಲೀಸರು ವಶಪಡಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೃತ ಶಿವಮಲ್ಲು ತಾಯಿ, ಪತ್ನಿ, ಎರಡು ವರ್ಷದ ಮಗು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮಹಿಳೆಯನ್ನು ನಂಬಿಸಿ, ಚಿನ್ನಾಭರಣಗಳನ್ನು ದೋಚಿದ್ದ ಇಬ್ಬರು ಮಹಿಳಾ ಆರೋಪಿಗಳ ಬಂಧನ



ಆರೋಪಿಗಳಿಂದ ವಶಪಡಿಸಿಕೊಳ್ಳಲಾದ ಚಿನ್ನಾಭರಣಗಳೊಂದಿಗೆ ಪೊಲೀಸರು.

ಯಳಂದೂರು, ಸೆ.18– ಮಹಿಳೆಯನ್ನು ವಂಚಿಸಿ ಚಿನ್ನಾಭರಣ ದೋಚಿದ್ದ ಇಬ್ಬರು ಮಹಿಳಾ ಆರೋಪಿಗಳನ್ನು ಯಳಂದೂರು ಪಟ್ಟಣ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜೂ.23ರಂದು ಸಂಜೆ ಗಂಗವಾಡಿ ಗ್ರಾಮದ ಮಹದೇವಮ್ಮ ಠಾಣೆಗೆ ಬಂದು ಜೂ.22 ರಂದು ಯಳಂದೂರು ಸಂತೆಗೆ ನಾನು ಹೋಗಿದ್ದಾಗ ಇಬ್ಬರು ಹೆಂಗಸರು ಹಾಗೂ ಒಬ್ಬ ಗಂಡಸು ನನ್ನ ಬಳಿ ಬಂದು ತಮ್ಮ ಆರೋಗ್ಯ ಸಮಸ್ಯೆ ಹೇಳಿಕೊಂಡು ನಮಗೆ ಅರ್ಜೆಂಟ್ ಹಣಬೇಕು, ನಿಮಗೆ ಜಾಸ್ತಿ ಚಿನ್ನದ ಒಡವೆಗಳನ್ನು ಕೊಡುತ್ತೇವೆಂದು ಹೇಳಿ ನನ್ನ ಕತ್ತಿನಲ್ಲಿದ್ದ ಮಾಂಗಲ್ಯ ಸರವನ್ನು ಬಿಚ್ಚಿಸಿಕೊಂಡು ಅವರ ಬಳಿ ಇದ್ದ ನಕಲಿ ಚಿನ್ನದಂತಿದ್ದ ಒಡವೆಗಳನ್ನು ಕೊಟ್ಟು ನನ್ನನ್ನು ವಂಚಿಸಿರುತ್ತಾರೆ ಎಂದು ದೂರು ನೀಡಿದ್ದರು.

ಪಟ್ಟಣ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡರು. ಹೊನ್ನೂರು ರಸ್ತೆಯಲ್ಲಿ ಅನುಮಾನಸ್ಪವಾದವಾಗಿ ತಿರುಗಾಡುತ್ತಿದ್ದ ಮಹಿಳೆಯರನ್ನು ಮಹಿಳಾ ಪೊಲೀಸ್ ಸಹ ಯೋಗದೊಂದಿಗೆ ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ನಡೆಸಿದಾಗ ಆರೋಪಿಗಳು ಸಿಕ್ಕಿ ಬಿದ್ದಿದ್ದಾರೆ. ಜಯಮ್ಮ(65) ಚಿಕ್ಕ ಬೆನ್ನೂರು, ಚೆನ್ನಗಿರಿ ತಾಲೂಕು ದಾವಣಗೆರೆ ಜಿಲ್ಲೆ ಮತ್ತು ಕಾವ್ಯ (32) ಬೆಳ್ಳಾವಿ ಗ್ರಾಮ ತುಮಕೂರು ತಾಲೂಕು ಮತ್ತು ಜಿಲ್ಲೆ. ಬಂಧಿತ ಆರೋಪಿಗಳು ವಿಚಾರಣೆ ವೇಳೆ ತಪ್ಪು ಒಪ್ಪಿಕೊಂಡಿದ್ದಾರೆ. 1,49.000 ಬೆಲೆ ಬಾಳುವ 15 ಗ್ರಾಂ ಚಿನ್ನದ ಸರವನ್ನು ವಶಪಡಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಅಪರ ಪೊಲೀಸ್ ಅಧಿಕಾರಿಯಾದ ಶಶಿಧರ್, ಡಿವೈಎಸ್‌ಪಿ ಧರ್ಮೇಂದ್ರ ಅವರ ಮಾರ್ಗದರ್ಶನದಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀಕಾಂತ್, ಸಬ್‌ಇನ್‌ಸ್ಪೆಕ್ಟರ್ ಆಕಾಶ್, ಸಿಬ್ಬಂದಿಗಳಾದ ಅನ್ವರ್ ಪಾಷ, ರಾಮಶೆಟ್ಟಿ, ಜಡೇಸ್ವಾಮಿ, ಪ್ರಮೋದ್, ವಾಸುದೇವಮೂರ್ತಿ, ನಾಗೇಂದ್ರ, ನಂಜುಂಡಸ್ವಾಮಿ, ಸುಮಾ ಅವರು ಪತ್ತೆ ಹಚ್ಚುವ ಕಾರ್ಯವನ್ನು ಕೈಗೊಂಡರು. ಈ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಶ್ಲಾಘಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕಾಮಗಾರಿ ನಿಮಿತ್ತ ಸೆ.20 ರಂದು ಬೆಳಿಗ್ಗೆ 10ರಿಂದ ಸಂಜೆ 6ಗಂಟೆಯವರೆಗೆ ಹಿರಿಕಾಟಿ, ನಿಟ್ರೆ, ಬೇಗೂರು, ವಾಟರ್ ಸಪ್ಲೈ, ಹೆಗ್ಗಡಹಳ್ಳಿ, ಮಂಚಳ್ಳಿ ಎನ್.ಜೆ.ವೈ, ಶೆಟ್ಟಿಹಳ್ಳಿ, ದೇಸಿಪುರ, ಇಂಡಸ್ಟ್ರಿಯಲ್, ಹೊರೆಯಾಲ, ಹಾಲಳ್ಳಿ, ಕಮರಹಳ್ಳಿ, ಬೊಗ್ಗನಪುರ, ಮರಳಾಪುರ, ರಂಗನಾಥಪುರ, ತೊರವಳ್ಳಿ, ನಿಟ್ರೆ, ಹಿರಿಕಾಟಿ, ಚಿಕ್ಕಾಟಿ, ಅರೇಪುರ, ತೊಂಡವಾಡಿ, ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವಿದ್ಯಾರ್ಥಿಗೆ ಥಳಿಸಿ ಗಾಯಗೊಳಿಸಿದ ಪ್ರಕರಣ

ಸ್ಥಳ ಪರಿಶೀಲನೆಗೆ ಬಂದ ಡಿಡಿಗೆ ಘೇರಾವ್

ಯಳಂದೂರು, ಸೆ.18– ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗೆ ಮಂಗಳವಾರ ಇಲ್ಲಿನ ಶಿಕ್ಷಕಿಯೊಬ್ಬರು ಥಳಿಸಿದ ಪರಿಣಾಮ ಗಂಭೀರ ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲು ಶಿಕ್ಷಣ ಇಲಾಖೆಯ ಉಪನಿರ್ದೇಶಕ ಚಂದ್ರಹಾಸ್ ಬುಧವಾರ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಗಾಯಗೊಂಡ ವಿದ್ಯಾರ್ಥಿಯ ಚಾಮಲಾಪುರ ಗ್ರಾಮದವರು ಶಾಲೆಯ ಆಡಳಿತ ಮಂಡಳಿ, ಶಿಕ್ಷಕರಿಗೆ ಘೇರಾವ್ ಹಾಕಿದ ಪ್ರಸಂಗ ನಡೆಯಿತು.

ಚಾಮಲಾಪುರ ಗ್ರಾಮದ ವಿದ್ಯಾರ್ಥಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಇಲ್ಲಿನ ಶಿಕ್ಷಕಿ ಭಾನುಮತಿ ಈತನ ಹಿಂದಿನ ಭಾಗ ತೊಡೆ, ಕೈ, ಹೊಟ್ಟೆಯ ಭಾಗಕ್ಕೆ ಥಳಿಸಿ ತೀವ್ರ ಗಾಯಗೊಳಿಸಿದ್ದರು. ಈತನಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ಉಪನಿರ್ದೇಶಕ ಶಾಲೆಗೆ ಭೇಟಿ ನೀಡಿ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದರು.

ಗ್ರಾಮಸ್ಥರು, ಪೋಷಕರಿಂದ ಘೇರಾವ್: ಇದೇ ಸಂದರ್ಭದಲ್ಲಿ ಸ್ಥಳ ಮಹಜರು ನಡೆಸಲು ಪೊಲೀಸರೊಂದಿಗೆ ಬಂದ ಬಾಲಕನ ಪೋಷಕರು ಹಾಗೂ ಗ್ರಾಮಸ್ಥರು ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕರಿಗೆ ಘೇರಾವ್ ಹಾಕಿದರು. ಶಾಲೆಯಲ್ಲಿ ಮಕ್ಕಳನ್ನು ಥಳಿಸುವ ಅಧಿಕಾರವಿಲ್ಲ, ಮಾರಣಾಂತಿಕ ಹಲ್ಲೆ ಮಾಡುವಂತಿಲ್ಲ. ಮಗುವಿನ ಬೆನ್ನುಹುರಿಗೆ ಆಗುವ ಗಾಯ ಅಲ್ಪದರಲ್ಲೇ ತಪ್ಪಿದೆ. ಈ ಶಾಲೆಯಲ್ಲಿ ಹಲವು ಲೋಪಗಳಿವೆ, ಸರ್ಕಾರದ ನೀತಿ ನಿಮಯಗಳನ್ನು ಇಲ್ಲಿ ಗಾಳಿಗೆ ತೂರಲಾಗಿದೆ. ಇಲ್ಲಿರುವ ಶಿಕ್ಷಕರ ವಿದ್ಯಾರ್ಹತೆಯ ಬಗ್ಗೆಯೂ ಅನುಮಾನವಿದೆ. ಇಲ್ಲಿ ಹಲವು ಸಮಸ್ಯೆಗಳಿವೆ. ಆಗಾಗ ಇಂತಹ ಪ್ರಕರಣಗಳು ನಡೆಯುತ್ತಿದ್ದರೂ ಇಲಾಖೆ ಕಣ್ಮುಚ್ಚಿ ಕುಳಿತಿದೆ. ಇಲ್ಲಿ ನೀತಿ ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ ಎಂದು ವಾಗ್ವಾದ ನಡೆಸಿದರು. ನಂತರ ಪೊಲೀಸರು ಬಂದು ವಾತಾವರಣವನ್ನು ತಿಳಿಗೊಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಮಾರಯ್ಯ, ಬಿಆರ್‌ಸಿ ನಂಜುಂಡಯ್ಯ, ಮಕ್ಕಳ ಸಹಾಯವಾಣಿಯ ಜಿಲ್ಲಾ ಸಂಯೋಜಕ ಸಿದ್ದರಾಜು, ಮಂಗಳಮ್ಮ, ನಾಗರಾಜು ಅನೇಕರು ಇದ್ದರು.



ವಿದ್ಯಾರ್ಥಿಗೆ ಶಿಕ್ಷಕಿ ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಆಗಮಿಸಿದ್ದ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಹಾಸ್ ಅವರನ್ನು ಸುತ್ತುವರೆದ ಗ್ರಾಮಸ್ಥರು ಘೇರಾವ್ ಮಾಡಿದರು.

ಶಿಕ್ಷಕಿ ಥಳಿಸಿರುವುದು ನಿಜ, ವಜಾಕ್ಕೆ ಸೂಚನೆ

ಪರಿಶೀಲನೆ ನಂತರ ಮಾತನಾಡಿದ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಹಾಸ್ ಈ ಶಾಲೆಯ ಶಿಕ್ಷಕಿ ವಿದ್ಯಾರ್ಥಿಗೆ ಥಳಿಸಿರುವುದು ಸತ್ಯ ಸಂಗತಿಯಾಗಿದೆ. ಈಕೆಯನ್ನು ಶಾಲೆಯ ಆಡಳಿತ ಮಂಡಳಿ ವಜಾ ಮಾಡಬೇಕು. ಅಲ್ಲದೆ ಇವರನ್ನು ಇಲ್ಲಿನ ಆಡಳಿತ ಮಂಡಳಿಯವರು ನೇಮಿಸಿಕೊಳ್ಳಲು ನೇಮಕಾತಿ ಆದೇಶವನ್ನೇ ನೀಡಿಲ್ಲ. ಕೇವಲ ಒಂದು ರಿಜಿಸ್ಟಾರ್‌ನಲ್ಲಿ ನಮೂದಿಸಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಈ ಹಿಂದೆಯೂ ಹಲವು ವಿದ್ಯಾರ್ಥಿಗಳಿಗೆ ಥಳಿಸಿರುವ ಬಗ್ಗೆ ದೂರುಗಳಿವೆ. ಅಲ್ಲದೆ ಇಲ್ಲಿ ಸಿಸಿ ಕ್ಯಾಮಾರವೂ ಕೆಲಸ ಮಾಡುತ್ತಿಲ್ಲ ಎಂಬ ಮಾಹಿತಿ ಇದೆ. ಇಲ್ಲಿ ಶೌಚಗೃಹದ ವ್ಯವಸ್ಥೆಯೂ ಸರಿಯಾಗಿಲ್ಲ ಎಂಬುದರ ಬಗ್ಗೆ ದೂರಿದ್ದು, ಈ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ನಡೆಸಲಾಗುವುದು. ಈಗಾಗಲೇ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ವಿ. ಮಲ್ಲಿಕಾರ್ಜುನಸ್ವಾಮಿರವರಿಗೆ ಈ ಶಿಕ್ಷಕಿಯನ್ನು ಶಾಲೆಯಿಂದ ವಜಾಗೊಳಿಸುವಂತೆ ಸೂಚನೆ ನೀಡಲಾಗಿದೆ. ಇನ್ನಷ್ಟು ಮಾಹಿತಿ ಸಂಗ್ರಹಿಸಿ, ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಲಾಗುವುದು ಎಂದರು.

ತೂಕದಲ್ಲಿ ವ್ಯತ್ಯಾಸ ಕಂಡುಹಿಡಿದ ಅನ್ನದಾತ

ಪ್ರಶ್ನೆ ಮಾಡುತ್ತಿದ್ದಂತೆ ಲಾರಿ, ತೂಕದ ಮಿಷನ್ ಬಿಟ್ಟು ದಲ್ಲಾಳಿ ಪರಾರಿ



ಮುಸುಕಿನ ಜೋಳ ಮತ್ತು ಲಾರಿಯನ್ನು ಸ್ಥಳದಲ್ಲೇ ಬಿಟ್ಟು ದಲ್ಲಾಳಿ ಪಾರಾರಿಯಾಗಿರುವುದು.

ಚಾಮರಾಜನಗರ : ತಾಲೂಕಿನ ರೇಚಂಬಳ್ಳಿ ಗ್ರಾಮದಲ್ಲಿ ಮುಸುಕಿನ ಜೋಳ ತೂಕದಲ್ಲಿ ಅನ್ಯಾಯ ಮಾಡುತ್ತಿದ್ದ ದಲ್ಲಾಳಿಯನ್ನು ಸ್ಥಳದಲ್ಲೇ ರೈತ ಪ್ರಶ್ನೆ ಮಾಡುತ್ತಿದ್ದಂತೆ ದಲ್ಲಾಳಿಯ ತೂಕದ ಮಿಷನ್, ಜೋಳ ತುಂಬಿದ ಲಾರಿಯನ್ನು ಬಿಟ್ಟು ಪಾರಾರಿಯಾಗಿರುವ ಘಟನೆ ಇಂದು ನಡೆದಿದೆ.

ಗ್ರಾಮದ ರೈತ ಗುರುಪ್ರಸಾದ್ ಅವರು ಒಂದು ಎಕರೆ ಜಮೀನಿನಲ್ಲಿ ಮುಸುಕಿನ ಜೋಳ ಬೆಳೆದು ಸಿದ್ದರಾಜು ಎಂಬ ದಲ್ಲಾಳಿಗೆ ಒಂದು ಕ್ವಿಂಟಾಲ್‌ಗೆ 2280 ರೂ ಬೆಲೆಗೆ ಮಾರಾಟ ಮಾಡಿದ್ದು, ಇಂದು ಬೆಳಿಗ್ಗೆ 9 ಗಂಟೆ ಜೋಳ ತೂಕ ಮಾಡಲು ಬಂದು ತೂಕ ಆರಂಭಿಸಿದ್ದಾರೆ. ತೂಕದಲ್ಲಿ ಇದ್ದಕ್ಕಿದ್ದಂತೆ ಕಡಿಮೆ ಆಗೋದನ್ನ ಕಂಡು ಅನುಮಾನಗೊಂಡ ರೈತರು ಇದನ್ನ ಪ್ರಶ್ನೆ ಮಾಡುತ್ತಿದ್ದಂತೆ ದಲ್ಲಾಳಿ ಓಡಿ ಹೋಗಿದ್ದಾನೆ.

ಗ್ರಾಮದ ರೈತ ಗುರುಪ್ರಸಾದ್ ಮಾತನಾಡಿ, ನಾನು ಒಂದು ಎಕರೆ ಜಮೀನಿನಲ್ಲಿ ಮುಸುಕಿನ ಜೋಳ ಬೆಳೆದು ಸಿದ್ದರಾಜು ಎಂಬ ದಲ್ಲಾಳಿಗೆ ಒಂದು ಕ್ವಿಂಟಾಲ್ ಗೆ 2280 ರೂ ಬೆಲೆಗೆ ಮಾರಾಟ ಮಾಡಿದ್ದು, ಇಂದು ಬೆಳಿಗ್ಗೆ ಜೋಳ ತೂಕ ಮಾಡಲು ಬಂದು ತೂಕ ಆರಂಭಿಸಿದ್ದಾರೆ. ತೂಕ ಪರೀಕ್ಷೆ ಮಾಡಿದೆ. 75 ಕೆಜಿ ಇತ್ತು ಎರಡು ಬಾರಿ ಎರಡು ಮೂಟೆ ಬಿಟ್ಟು ಬಿಟ್ಟು ಚೆಕ್ ಮಾಡಿದೆ. ಒಂದು ಬಾರಿ ಅನುಮಾನ ಬಂದು ಅವರ ಹತ್ತಿರ ಜೇಬಿನಲ್ಲಿ ಏನಿದೆ ತೆಗೆ ಎಂದೆ ಹೇಳಿದೆ ಆಗ ಅವನು ನನ್ನ ಹತ್ತಿರ ಏನು ಇಲ್ಲ ಎಂದು ಓಡಲು ಶುರು ಮಾಡಿದ. ಈ ರಿಮೋಟ್ ಅವನ ಹತ್ತಿರ ಸಿಕ್ತು. ಆ ರಿಮೋಟ್ ಚೆಕ್ ಮಾಡಿದಾಗ 75 ಕೆಜಿ ಇದ್ದದ್ದು 68 ಕೆಜಿ ಬಂತು ಪ್ರತಿ 60 ಕೆಜಿಯಲ್ಲಿ ರೈತರಿಂದ 2 ಕೆಜಿ, ರಿಮೋಟ್ ಪ್ರೆಸ್ ಮಾಡುವ ಮೂಲಕ 6 ಕೆ.ಜಿ ಒಟ್ಟು ರೈತರಿಂದ 8ಕೆಜಿ ಹೊಡೆಯುವ ಮೂಲಕ ರೈತರಿಗೆ ಮೋಸ ಮಾಡುತ್ತಿದ್ದಾನೆ ಎಂದು ಆರೋಪಿಸಿದರು. ಈ ಭಾಗದಲ್ಲಿ ಸಾವಿರಾರು ಕ್ವಿಂಟಾಲ್ ಜೋಳದ ಖರೀದಿ ಮಾಡಿದ್ದಾನೆ. ಇದನ್ನು ನೋಡಿದರೆ ರೈತರಿಗೆ ಸಾವಿರಾರು ಕೆ.ಜಿ ಮೋಸ ಮಾಡಿ ರೈತರಿಗೆ ಮಕ್ಮಲ್ ಟೋಪಿ ಹಾಕಿದ್ದಾನೆ. ಇತನ ವಿರುದ್ಧ ಪೋಲಿಸರಿಗೆ ದೂರು ನೀಡಲಾಗುವುದು. ಆತನನ್ನು ವಿಚಾರಣೆಗೆ ಒಳಪಡಿಸಿ, ವಶಕ್ಕೆ ಪಡೆದು ರೈತರಿಗೆ ನ್ಯಾಯ ಕೊಡಿಸಬೇಕು ಎಂದು ಗುರುಪ್ರಸಾದ್ ಒತ್ತಾಯಿಸಿದರು.

60 ಕೆಜಿ ತೂಕದಲ್ಲಿ 6ರಿಂದ 8 ಕೆಜಿ ತೂಕ ಕಡಿಮೆ, ತೂಕದಲ್ಲಿ ರೈತರಿಗೆ ಭಾರಿ ಅನ್ಯಾಯ

ಕುಡಿಯುವ ನೀರಿಗಾಗಿ ಒತ್ತಾಯಿಸಿ ಸೋಮವಾರ ಪೇಟೆ ಬಡಾವಣೆ ನಿವಾಸಿಗಳಿಂದ ಪ್ರತಿಭಟನೆ



ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸುತ್ತಿರುವ ನಿವಾಸಿಗಳು.

ಚಾಮರಾಜನಗರ, ಸೆ.18– ನಗರದ 1ನೇ ವಾರ್ಡ್ ಸೋಮವಾರಪೇಟೆ ಬಡಾವಣೆಗೆ ಕುಡಿಯುವ ನೀರು, ಮೂಲಸೌಕರ್ಯ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿ ಬಡಾವಣೆಯ ನಿವಾಸಿಗಳು ಬಿಎಸ್ಪಿ ಪಕ್ಷದ ಮುಖಂಡರೊಂದಿಗೆ ನಗರಸಭೆ ಮುಂಭಾಗದಲ್ಲಿ ಖಾಲಿ ಬಿಂದಿಗೆ ಹಿಡಿದು ಪ್ರತಿಭಟನೆ ನಡೆಸಿದರು.

ನಗರದ ನಗರಸಭೆ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾನಿತರು ನಗರಸಭೆ, ಶಾಸಕರು, ಸಂಸದರು, ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ನಗರಸಭಾ ಯೋಜನಾಧಿಕಾರಿ ವೆಂಕಟನಾಯಕ ಅವರಿಗೆ ಮನವಿ ಸಲ್ಲಿಸಿದರು.

ಬಿಎಸ್ಪಿ ರಾಜ್ಯ ಕಾರ್ಯದರ್ಶಿ ಎನ್. ನಾಗಯ್ಯ ಮಾತನಾಡಿ, ಚಾಮರಾಜನಗರದ 1ನೇ ವಾರ್ಡಿನ ಸೋಮವಾರಪೇಟೆಯ ಕರಿನಂಜನಪುರಕ್ಕೆ ಸಂಪರ್ಕ ಕಲ್ಪಿಸುವ ಬಡಾವಣೆಯಲ್ಲಿ ನೂರಾರು ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ನಿವಾಸಿಗಳು ಕುಡಿಯುವ ನೀರಿಗೆ ಪರದಾಡುತ್ತಿದ್ದಾರೆ. ಈ ಬಗ್ಗೆ ನಗರಸಭೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ. ಎಂದು ದೂರಿದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ಪೌರಾಯುಕ್ತ ರಾಮದಾಸ್ ಕುಡಿಯುವ ನೀರು ವಿಭಾಗದ ಅಧಿಕಾರಿಗಳೊಂದಿಗೆ ಭೇಟಿ ಪರಿಶೀಲಿಸಿ, ನಾಳೆ ಮಧ್ಯಾಹ್ನದವರೆ ನೀರು ಲಭ್ಯವಿರುವ ಬೋರ್‌ಗಳಿಗೆ ಹೆಚ್ಚಿನ ಪೈಪ್ ಬಿಡಿಸಿ ಬಡಾವಣೆಯ ನಿವಾಸಿಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಒಂದು ವೇಳೆ ಬೋರ್‌ನಲ್ಲಿ ನೀರು ಬರದಿದ್ದರೆ ಹೊಸ ಬೋರ್ ಕೊರೆಯಿಸುವುದಾಗಿ ತಿಳಿಸಿದರು.

ಕುಂಟೆಬಿಲ್ಲೆ ಚಿತ್ರದ ಕಾಕತ್ತೇ ಹಳ್ಳಿಸೊಗಡು





ಎಸ್.ಬಿ.ಶಿವ ಕುಮಾರ್‌ಗೌಡ ಸಿದ್ದೇಗೌಡ

ಗ್ರಾಮೀಣ ಸೊಗಡಿನ ಕಥಾಹಂದರ ಒಳಗೊಂಡ ಚಿತ್ರ ಕುಂಟೆಬಿಲ್ಲೆ ಇದೇ ತಿಂಗಳ ಅಂತ್ಯದಲ್ಲಿ ತೆರೆ ಕಾಣಲಿದೆ, ನಿರ್ದೇಶಕ ಜಿಬಿಎಸ್ ಸಿದ್ದೇಗೌಡ ಅವರು ಈವರೆಗೂ ನಿರ್ದೇಶನ ಮಾಡಿದ ಎಲ್ಲಾ ಚಿತ್ರಗಳು ಒಂದಕ್ಕಿಂತ ಒಂದು ವಿಭಿನ್ನ ಕಾನ್ಸೆಪ್ಟ್ ಒಳಗೊಂಡಿವೆ. ಆ ವಿಭಿನ್ನತೆಗೆ ಇನ್ನೊಂದು ಸಾಕ್ಷಿಯೇ ಕುಂಟೆಬಿಲ್ಲೆ ಎನ್ನಬಹುದು. ಈ ಹಿಂದೆ ಸಿದ್ದೇಗೌಡ ಅವರ ಅದ್ಭುತವಾದ ಕಥೆ, ಚಿತ್ರಕಥೆ, ಸಂಭಾಷಣೆ ಇದ್ದ ತರ್ಲೆ ವಿಲೇಜ್ ಚಿತ್ರ ತನ್ನ ಡೈಲಾಗ್ ಮೂಲಕವೇ ಕನ್ನಡಿಗರ ಮನ ಗೆದ್ದಿತ್ತು, ಅದಕ್ಕೂ ಮೊದಲು ದಕ್ಷಯಜ್ಞ ಎಂಬ ನಾಟಕವನ್ನಾಧರಿಸಿದ ಪೌರಾಣಿಕ ಸಿನಿಮಾ ಮಾಡುವ ಮೂಲಕ ಅಂತಹ ಪ್ರೇಕ್ಷಕರ ಮನವನ್ನೂ ಗೆದ್ದಿದ್ದರು. ಆನಂತರ ಹೂವಿನಹಾರ ಎಂಬ ಪ್ರಯೋಗಾತ್ಮಕ ಸಿನಿಮಾ ನಿರ್ದೇಶನ ಮಾಡಿದಾಗ ಅದಕ್ಕೆ ರಾಜ್ಯ ಪ್ರಶಸ್ತಿಯೂ ಬಂದಿತ್ತು. ಇದೀಗ ಕುಂಟೆಬಿಲ್ಲೆ ಎಂಬ ಅಪ್ಪಟ ಪ್ರೇಮಕಥೆಯನ್ನು ಕನ್ನಡಿಗರಿಗೆ ಹೇಳಹೊರಟಿದ್ದಾರೆ. ಯದು ಹಾಗೂ ಮೇಘಶ್ರೀ ಈ ಚಿತ್ರದ ನಾಯಕ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

ಮೈಸೂರಿನವರೇ ಆದ ಎಸ್.ಬಿ.ಶಿವ ಪಡುವಾರಹಳ್ಳಿ ಹಾಗೂ ಕೆ.ಜಿ.ಕೊಪ್ಪಲಿನ ಕುಮಾರ್‌ಗೌಡ ಸೇರಿ ಜೀವಿತಾ ಕ್ರಿಯೇಶನ್ಸ್ ಮೂಲಕ ಕುಂಟೆಬಿಲ್ಲೆ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಇದೊಂದು ಗ್ರಾಮೀಣ ಭಾಗದ ಲವ್ ಸ್ಟೋರಿಯಾಗಿದ್ದು, ಜತೆಗೆ ಸಸ್ಪೆನ್ಸ್ ಕಥೆಯನ್ನೂ ಒಳಗೊಂಡಿದೆ. ಹೆಸರೇ ಹೇಳುವಂತೆ ಈ ಚಿತ್ರದಲ್ಲಿ ಹಳ್ಳಿಯೊಂದರಲ್ಲಿ ಎರಡು ಹೃದಯಗಳ ನಡುವೆ ನಡೆಯುವ ಸುಂದರ ಪ್ರೇಮಕಥೆಯಿದ್ದು, ಆ ಕಥೆಗೆ ಹಲವಾರು ತಿರುವುಗಳನ್ನು ನೀಡುವ ಮೂಲಕ ಪೇಕ್ಷಕನನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಈ ಚಿತ್ರಕ್ಕೆ ಚಿಕ್ಕಮ್ಮ ಚಿಕ್ಕದೇವಿ ಬೆಟ್ಟ, ಕೆಂಡ ಗಣ್ಣಸ್ವಾಮಿ ಗದ್ದಿಗೆ, ಇಟ್ಟಿಗೆ ಫ್ಯಾಕ್ಟರಿ, ದೊಡ್ಡಹಟ್ಟಿ ತೊಟ್ಟಿಮನೆ, ಪೊಲೀಸ್‌ಠಾಣೆ, ಆಸ್ಪತ್ರೆ, ಕಂಠೀರವ ಸ್ಟುಡಿಯೋ, ಹಳ್ಳಿಯ ಗದ್ದೆ, ಹೊಲ ಮತ್ತು ನಗರ ವಾತಾವರಣದಲ್ಲಿ ಚಿತ್ರೀಕರಣ ನಡೆಲಾಗಿದೆ.

ಜೀವಿತ ಕ್ರಿಯೇಷನ್ ಸಂಸ್ಥೆ ಒಂದು ಆಡಿಯೋ, ವಿಡಿಯೋ ಸಂಶೋಧನಾ ಕೇಂದ್ರವಾಗಿ ಮೈಸೂರಿನ ಜನತಾ ನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಿವಿಧ ಇಲಾಖೆಗಳಿಗೆ ಸಾಕ್ಷ್ಯಚಿತ್ರಗಳನ್ನೂ ಅದು ನಿರ್ಮಿಸಿದೆ.

'ಕುಂಟೆಬಿಲ್ಲೆ' ಚಿತ್ರದಲ್ಲಿ ನಾಯಕಿ ಮೇಘಶ್ರೀ

'ನನ್ನ ಮಗಳೇ ಸೂಪರ್‌ಸ್ಟಾರ್' ಚಿತ್ರಕ್ಕೆ ಚಾಲನೆ



ಸೀತಾರಾಮ ಸೀರಿಯಲ್ ಖ್ಯಾತಿಯ ಬಾಲಪ್ರತಿಭೆ ಬೇಬಿ ರೀತುಸಿಂಗ್ 'ನನ್ನ ಮಗಳೇ ಸೂಪರ್‌ಸ್ಟಾರ್' ಎಂಬ ಚಿತ್ರದ ಮೂಲಕ ಬೆಳ್ಳಿತೆರೆಗೆ ಎಂಟ್ರಿ ಕೊಡುತ್ತಿದ್ದಾರೆ. ಇತ್ತೀಚೆಗೆ ಈ ನೂತನ ಚಿತ್ರದ ಮುಹೂರ್ತ ಸಮಾರಂಭ ನೆರವೇರಿತು. ಚಿತ್ರದ ಪ್ರಥಮ ದೃಶ್ಯಕ್ಕೆ ಹಿರಿಯ ಸಾಹಿತಿ ಬಿ.ಆರ್.ಲಕ್ಷ್ಮಣರಾವ್ ಆರಂಭ ಫಲಕ ತೋರಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಹನಿ ಫಿಲಂ ಮೇಕರ್ಸ್ ಮೂಲಕ ಎನ್.ಎ. ಶಿವಕುಮಾರ್ (ಕುಮಾರ್ ನೊಣವಿನಕೆರೆ) ಅವರ ನಿರ್ಮಾಣದ ಈ ಚಿತ್ರಕ್ಕೆ ಆಯುರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ರೀತುಸಿಂಗ್, ಭಜರಂಗಿ-2 ಖ್ಯಾತಿಯ ಚಲುವರಾಜ್, ಸಂಭ್ರಮಶ್ರೀ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ.



ಮುಹೂರ್ತದ ನಂತರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ನಿರ್ದೇಶಕ ಆಯುರ್ ಮಾತನಾಡುತ್ತಾ, ಈವರೆಗೂ ಸಾಕಷ್ಟು ಚಿತ್ರಗಳಿಗೆ ಸಂಕಲನ ಮಾಡಿದ್ದು, ಈ ಚಿತ್ರದ ಮೂಲಕ ನಿರ್ದೇಶಕನಾಗುತ್ತಿದ್ದೇನೆ. ತಂದೆ-ತಾಯಿಗೆ ತಮ್ಮ ಮಕ್ಕಳು ಸೂಪರ್‌ಸ್ಟಾರ್ ಆಗಬೇಕೆಂಬ ಕನಸಿರುತ್ತದೆ, ಜೊತೆಗೆ ತಾವಂದು ಕೊಂಡ ಹಾಗೇ ಅವರಿರಬೇಕು ಎಂದು ಬಯಸುತ್ತಾರೆ, ತಾಯಿಯಾದವಳಿಗೆ ಆ ಕನಸು ಸ್ವಲ್ಪ ಹೆಚ್ಚೇ ಇರುತ್ತದೆ. ಆದರೆ ಆ ಮಕ್ಕಳ ಆಸೆ, ಆಕಾಂಕ್ಷೆ ಏನಿರುತ್ತೆ, ಅವರ ಆಸಕ್ತಿ ಯಾವುದರ ಮೇಲಿದೆ ಎಂದು ಯಾರೂ ಗುರುತಿಸುವುದಿಲ್ಲ. ಪೋಷಕರು ತಮ್ಮ ಆಸೆಯನ್ನು ಮಕ್ಕಳ ಮೇಲೆ ಬಲವಂತವಾಗಿ ಹೇರಬಾರದು. ಅದರಿಂದ ಆ ಮಕ್ಕಳು ಏನೆಲ್ಲಾ ತೊಂದರೆ ಅನುಭವಿಸುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳುತ್ತಿದ್ದೇವೆ. ರಿಯಾಲಿಟಿ ಶೋ ಕಾನ್ಸೆಪ್ಟ್ ಕೂಡ ಚಿತ್ರದಲ್ಲಿದೆ. ಚಿತ್ರದ ಮೂರು ಹಾಡುಗಳಿಗೆ ಬಿ.ಆರ್. ಲಕ್ಷ್ಮಣರಾವ್ ಸಾಹಿತ್ಯ ಬರೆದಿದ್ದು, ಕೆವಿನ್ ಅವರ ಸಂಗೀತ ಸಂಯೋಜನೆಯಿದೆ ಎಂದು ಹೇಳಿದರು.

ಈವರೆಗೆ ವಿಲನ್ ಪಾತ್ರಗಳಲ್ಲಿ ನಟಿಸುತ್ತಿದ್ದ ನಾನು ಈ ಚಿತ್ರದ ಮೂಲಕ ನಾಯಕನಾಗುತ್ತಿದ್ದು, ಹೆಣ್ಣು ಮಗುವಿನ ತಂದೆಯಾಗಿ ಕಾಣಿಸಿಕೊಂಡಿದ್ದೇನೆ ಎಂದು ಚಲುವರಾಜ್ ಹೇಳಿದರು. ನಾಯಕಿ ಸಂಭ್ರಮಶ್ರೀ ಮಾತನಾಡುತ್ತಾ, ನಿರ್ದೇಶಕರು ಹೇಳಿದ ಹಾಗೆ ಪೋಷಕರು ಹಾಗೂ ಮಕ್ಕಳು ನೋಡಲೇಬೇಕಾದ ಚಿತ್ರವಿದು. ರೀತುಸಿಂಗ್ ತಾಯಿಯಾಗಿ ಅಭಿನಯಿಸುತ್ತಿದ್ದೇನೆ ಎಂದು ಹೇಳಿದರು.

ಹಾರರ್, ಥ್ರಿಲ್ಲರ್ 'ದೈಜಿ' ಚಿತ್ರದಲ್ಲಿ ರಮೇಶ್ ಅರವಿಂದ್



ಈ ಹಿಂದೆ ಶಿವಾಜಿ ಸೂರತ್ಕಲ್ ಎಂಬ ಥ್ರಿಲ್ಲರ್ ಚಿತ್ರ ನಿರ್ದೇಶಿಸಿದ್ದ ಆಕಾಶ್ ಶ್ರೀವತ್ಸ ಅವರೀಗ ಹಾರರ್, ಥ್ರಿಲ್ಲರ್ ಚಿತ್ರ ನಿರ್ದೇಶಿಸಿದ್ದಾರೆ, ಆ ಚಿತ್ರದ ಹೆಸರು ದೈಜಿ. 'ದೈಜಿ' ಎಂದರೆ ಪ್ರೇತಾತ್ಮಗಳ ದೈವ ಎಂದರ್ಥ. ರಮೇಶ್ ಅರವಿಂದ್ ನಾಯಕನಾಗಿ ನಟಿಸಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಚಿತ್ರದ ನಿರ್ಮಾಪಕ ರವಿ ಕಶ್ಯಪ್ ಮಾತನಾಡುತ್ತಾ, ವಿದೇಶದಲ್ಲಿ ನಾನು ಕಂಡಂತಹ ನೈಜ ಘಟನೆಯನ್ನು ಆಕಾಶ್ ಅವರಿಗೆ ಹೇಳಿದೆ. ಅದೇ ಕಥೆಯನ್ನು ಅವರು ಚಿತ್ರ ರೂಪಕ್ಕೆ ತಂದಿದ್ದಾರೆ. ಯಾವುದೇ ಹಾಲಿವುಡ್ ಚಿತ್ರಕ್ಕೂ ಕಮ್ಮಿ ಇಲ್ಲದಂತೆ ದೈಜಿ ಮೂಡಿಬಂದಿದೆ. ಕೆಲವೇ ದಿನಗಳಲ್ಲಿ ಚಿತ್ರವನ್ನು ನಿಮ್ಮ ಮುಂದೆ ತರುತ್ತೇವೆ ಎಂದರು.

ಇದು ನನ್ನ ಹಾಗೂ ರಮೇಶ್ ಅರವಿಂದ್ ಕಾಂಬಿನೇಶನ್ ಮೂರನೇ ಚಿತ್ರ. ಹಾಗೂ ನಾಯಕಿ ರಾಧಿಕಾ ನಾರಾಯಣ್ ಜೊತೆಗೂ ಮೂರನೇ ಚಿತ್ರ. ನಿರ್ಮಾಪಕರ ಜತೆಗೂ ಇದು ಮೂರನೇ ಸಿನಿಮಾ. ನಿರ್ಮಾಪಕರು ವಿದೇಶದಲ್ಲಿ ತಾವು ಕಂಡ ನೈಜ ಘಟನೆಯನ್ನು ನನಗೆ ವಿವರಿಸಿದರು. ಅವರು ಹೇಳಿದ ಕಥೆಯೇ ದೈಜಿ ಚಿತ್ರಕ್ಕೆ ಸ್ಫೂರ್ತಿ. ನಂತರ ಈ ಕಥೆಯ ಪ್ರಮುಖ ಪಾತ್ರಕ್ಕೆ ರಮೇಶ್ ಅರವಿಂದ್ ಅವರೇ ಸೂಕ್ತ ಎನಿಸಿ ಅವರಿಗೆ ಕಥೆ ಹೇಳಿದಾಗ, ಅವರೂ ಒಪ್ಪಿಕೊಂಡಿದ್ದು ಖುಷಿಯಾಯಿತು. ರಾಧಿಕಾ ನಾರಾಯಣ್ ಅವರು ಭೂಮಿ ಎಂಬ ಪಾತ್ರದಲ್ಲಿ ಹಾಗೂ ರಮೇಶ್ ಅವರ ಸಹೋದರನಾಗಿ ದಿಗಂತ್ ನಟಿಸಿದ್ದಾರೆ. ಸದ್ಯದಲ್ಲೇ ಚಿತ್ರದ ಟ್ರೇಲರ್ ರಿಲೀಸಾಗಲಿದ್ದು, ಈ ವರ್ಷದ ಕೊನೆಯಲ್ಲಿ ದೈಜಿ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಆಕಾಶ್ ಶ್ರೀವತ್ಸ ತಿಳಿಸಿದರು.

ರಮೇಶ್ ಅರವಿಂದ್ ಮಾತನಾಡುತ್ತಾ, ಹುಟ್ಟು, ಸಾವು ಬಾಳಿನ ಎರಡು ಕೊನೆಗಳು. ಆದರೆ ಇವೆರಡರ ಮಧ್ಯೆ ಏನಿದೆ? ಎಂದು ಯೋಚಿಸಿದಾಗ ಪ್ರೀತಿ ಇದೆ ಎಂಬ ಉತ್ತರ ಸಿಗುತ್ತದೆ. ಒಂದು ವೇಳೆ ಸಾವೇ ಕೊನೆಯಾಗದಿದ್ದರೆ ಏನಿರುತ್ತದೆ? ಅದರಾಚೆಗೆ ಒಂದು ದುಷ್ಟ ಶಕ್ತಿ ಇರುತ್ತದೆ. ಆ ಶಕ್ತಿ ಈ ಪ್ರೀತಿಯನ್ನು ಹೊತ್ತುಕೊಂಡು ಹೋಗುತ್ತದೆ. ಇದೇ ನಾವು ಸಾಮಾನ್ಯ ಹಾರರ್ ಚಿತ್ರಗಳಲ್ಲಿ ಕಾಣುವುದು. ಆದರೆ ನಿರ್ದೇಶಕ ಆಕಾಶ್ ಶ್ರೀವತ್ಸ ಈ ರೀತಿಯ ಸಿನಿಮಾ ಮಾಡಿಲ್ಲ. ಈವರೆಗೂ ನಾನು ಸಾಕಷ್ಟು ಹಾರರ್ ಸಿನಿಮಾ ನೋಡಿದ್ದೇನೆ. ಆದರೆ ಈ ರೀತಿಯ ಕಥೆ ನೋಡಿಲ್ಲ. ನಾನು ಕೆ.ಬಾಲಚಂದರ್‌ರಂತಹ ನಿರ್ದೇಶಕರ ಜೊತೆಗೆ ಹತ್ತು ಸಿನಿಮಾ ಮಾಡಿದ್ದೇನೆ. ಮುಂದೆ ವತ್ಸ ಅವರ ಜೊತೆಗೂ ಇದೇ ರೀತಿ ಮಾಡುತ್ತೇನೆ ಎಂದು ಹೇಳಿದರು. ಶ್ರೀಶ ಕುದುವಳ್ಳಿ ಅವರ ಛಾಯಾಗ್ರಹಣ, ಜ್ಯೂಡಾ ಸ್ಯಾಂಡಿ ಅವರ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ.

'ಕಮಲ್ ಶ್ರೀದೇವಿ' ಅದ್ದೂರಿ ಪ್ರೀ ರಿಲೀಸ್ ಸಮಾರಂಭ



ಸಚಿವ ಚೆಲುವರಾಯಸ್ವಾಮಿ ಅವರ ಪುತ್ರ ಸಚಿನ್ ನಾಯಕನಾಗಿ ನಟಿಸಿರುವ, ಈಗಾಗಲೇ ತನ್ನ ಟೈಟಲ್ ಮೂಲಕವೇ ಕುತೂಹಲ ಮೂಡಿಸಿರುವ ಚಿತ್ರ 'ಕಮಲ್ ಶ್ರೀದೇವಿ' ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಅದಕ್ಕೂ ಮುನ್ನ ಬೆಂಗಳೂರಲ್ಲಿ ಚಿತ್ರದ ಪ್ರೀ ರಿಲೀಸ್ ಇವೆಂಟ್ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿರ್ದೇಶಕ ತರುಣ್ ಸುಧೀರ್, ನಟಿ ರಾಗಿಣಿ ದ್ವಿವೇದಿ ಆಗಮಿಸಿದ್ದರು.

ವೇದಿಕೆಯಲ್ಲಿ ಡಿಂಗ್ರಿ ನಾಗರಾಜ್ ಅವರ ಪುತ್ರ ಚಿತ್ರದ ಕ್ರಿಯೇಟಿವ್ ಹೆಡ್ ಆದ ರಾಜವರ್ಧನ್ ಅವರು ಬೆಂಗಳೂರು ನಾಗೇಶ್, ಲಕ್ಷ್ಮಿದೇವಮ್ಮ, ಬಿರಾದಾರ್, ಉಮೇಶ್, ಹೊನ್ನವಳ್ಳಿ ಕೃಷ್ಣರಂತಹ ತಮ್ಮ ತಂದೆಯ ಸಮಕಾಲೀನ, ಕಷ್ಟದಲ್ಲಿರುವ ಹಿರಿಯ ಕಲಾವಿದರನ್ನು ಗೌರವಿಸಿ, ಸನ್ಮಾನ ಮಾಡಿದ್ದು ವಿಶೇಷವಾಗಿತ್ತು.

ಪೋಷಕ ನಟನ ಮಗನಾಗಿ ಇವತ್ತು ಇಷ್ಟು ಕೆಲಸ ಮಾಡ್ತಿದ್ದೀನಿ ಅಂದ್ರೆ ಅದಕ್ಕೆ ಕಾರಣ ತರುಣ್ ಸುಧೀರ್. ಅವರ ಸಲಹೆ ಮಾರ್ಗದರ್ಶನದಿಂದ ಇಲ್ಲಿಗೆ ಬಂದಿದ್ದೇನೆ. ಇವತ್ತು ಈ ಹಿರಿಯ ಜೀವಗಳಿಗೆ ಗೌರವ ಸಲ್ಲಿಸಿರುವುದು ಸಾರ್ಥಕಭಾವ ಮೂಡಿಸಿದೆ. ಕಮಲ್ ಶ್ರೀದೇವಿ ತುಂಬು ಸಿನಿ ಪ್ರೋತ್ಸಾಹದಲ್ಲಿ ಮಾಡಿರುವಂತಹ ಸಿನಿಮಾ. ಪ್ರಾಮಾಣಿಕ ಪ್ರಯತ್ನ ಮಾಡಿದ ಇಡೀ ತಂಡಕ್ಕೆ ಧನ್ಯವಾದ ಎಂದು ಹೇಳಿದರು.


ಉಳಿದಂತೆ ಚಿತ್ರತಂಡದ ಎಲ್ಲಾ ಕಲಾವಿದರು, ತಂತ್ರಜ್ಞರು ಸಿನಿಮಾದ ಪಯಣವನ್ನು ಮೆಲುಕು ಹಾಕಿ, ಈವರೆಗೂ ಪ್ರೇಕ್ಷಕರು ತಮ್ಮ ಚಿತ್ರದ ಮೇಲೆ ತೋರಿಸುತ್ತಿರುವ ಆಸಕ್ತಿ, ಕುತೂಹಲವನ್ನು 19ರಂದು ತಣಿಸೋದಾಗಿ ಹೇಳಿದರು.

ಕಮಲ್ ಶ್ರೀದೇವಿ ಚಿತ್ರದಲ್ಲಿ ಸಚಿನ್ ಚಲುವರಾಯಸ್ವಾಮಿ ಹಾಗೂ ಸಂಗೀತಾ ಭಟ್ ನಾಯಕ, ನಾಯಕಿಯಾಗಿ ಅಭಿನಯಿಸಿದ್ದಾರೆ. ಕಿಶೋರ್, ರಮೇಶ್ ಇಂದಿರಾ ಸೇರಿದಂತೆ ಪ್ರತಿಭಾವಂತ ಕಲಾವಿದರ ಬಳಗವಿರುವ ಈ ಚಿತ್ರಕ್ಕೆ ವಿ.ಎ. ಸುನೀಲ್‌ಕುಮಾರ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಚಿತ್ರದ ಸಂಪೂರ್ಣ ಜವಾಬ್ದಾರಿಯನ್ನ ಸಹನಿರ್ಮಾಪಕ ರಾಜವರ್ಧನ್ ಅವರು ಹೊತ್ತು ನಿಭಾಯಿಸಿದ್ದಾರೆ. ಕೀರ್ತನ್ ಅವರ ಸಂಗೀತ ಸಂಯೋಜನೆ, ನಾಗೇಶ್ ಆಚಾರ್ಯ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಸಿನಿಪದಬಂಧ-594



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1. ವಿಷ್ಣುವಿಗೆ ಲಭಿಸಿದ ಮರಣೋತ್ತರ ಪ್ರಶಸ್ತಿಗೆ ವರ್ಷಗಳೇ ಬೇಕಾಯಿತು 6
3. ಸಾಹಸಸಿಂಹನ ಅಭಿಮಾನಿಗಳ ಪಡೆ ! 4
6. ರಮೇಶ್ – ಸುಧಾರಾಣಿ ಪ್ರೇಮ ಕಾವ್ಯ ! 5
8. ಮಾಲಾಶ್ರೀ ಸ್ವಪ್ನದರಸಿ 6
9. ಕುಮಾರ್ ಗೋವಿಂದ್ ಸೂರ್ಯನಂತೆ ಹೊಳಪು 4
12. ಹುಲಿಯ ಹಾಲಿನ ಮೇವು ಚಿತ್ರದ ನಾಯಕಿಯರಲ್ಲಿ ಒಬ್ಬಳು ಇಲ್ಲಿ ತಿರುಗಿದ್ದಾಳೆ 4
14. ಹೆಸರಿನ ಕೊನೆಯಲ್ಲಿ ಕುದುರೆ ಇರಿಸಿಕೊಂಡಿರುವ ಹಿರಿಯ ನಟ 4
17. ಮಾಮಾಶ್ರೀಯೊಂದಿಗೆ ಬಂದವಳು 3
19. ಪುಂಗಿ ಊದಿ ಹಾವನ್ನು ಆಡಿಸುವವನು 4
20. ಹೆಸರಿನಲ್ಲಿ ಹಳೆಯ ಕಾಲವಿದ್ದರೂ ಈ ನಟಿ ಹೊಸಬಳೇ 4
21. ಎಸ್.ಎಲ್.ಭೈರಪ್ಪನವರ ಕಾದಂಬರಿಯಲ್ಲಿ ಓಟು ಚಲಾಯಿಸುವ ಹಕ್ಕಿದೆ 4

ಮೇಲಿನಿಂದ ಕೆಳಕ್ಕೆ

1. ವಿಷ್ಣುವರ್ಧನ್ ನಮ್ಮ ನಾಡಿನ ಹೆಮ್ಮೆಯ ಕುವರ 7
2. ವಿಷ್ಣುವರ್ಧನ್ – ಭಾರತಿಯ ಗೌಪ್ಯತೆಯ ಇರುಳು 5
4. ತ್ರಿಲೋಕ ಸಂಚಾರಿಯ ಗೆಲುವು 6
5. ರವಿಚಂದ್ರನ್ – ರಚನಾ ಅಭಿನಯದ ಚಿತ್ರ 3
7. ಭಲೇ ಎನಿಸಿಕೊಂಡ ಬುದ್ದಿವಂತ 3
10. ಗಣಪತಿ ಕುಳಿತ ಮೂಸಿಕನಿಗೆ ಪ್ರಭಾಕರ್ ಅಭಿನಯವಿದೆ 7
11. ವಿಷ್ಣುವರ್ಧನ್‌ನ 'ಲಾಲಿ' 3
13. ಗೆಲುವಿನ ಹಾರ ಹಾಕಿಕೊಂಡಿರುವ ಕ್ಯಾಬರೆ ತಾರೆ 5
15. ಕೋಟಿಗೊಬ್ಬ ಚಿತ್ರದ ನಿರ್ದೇಶಕ 3
16. ಗಂಗಾಳ ಜೊತೆ ಬಂದವಳು 3
18. ಉಪೇಂದ್ರ ಅಭಿನಯದ ಚಿತ್ರವೊಂದು ಇಲ್ಲಿ ಅಸ್ತವ್ಯಸ್ತಗೊಂಡಿದೆ 3

ಸಿನಿ ಪದಬಂಧ 593ರ ಉತ್ತರ

ಭೂ	ಮಿ	ತಾ	ಯಿ	ಯ	ಚೊ	ಚ್ಚ	ಲ	ಮ	ಗ	
ಲೋ			ತಾ					ಣ್ಣಿ		
ಕ		ವಿ		ನ್		ನ್ಯ	ಜ	ನ	ರ್ಜ	ಅ
ದ		ಜ	ನು	ಮ				ಮ		ಶ್ವ
ಲ್ಲಿ		ಯ		ಸು	ಮ	ನ್	ರಂ	ಗ	ನಾ	ಥ್
ಯ		ಸಾ			ನೆ		ಗ			
ಮ	ಧು	ರ	ಸಂ	ಗ	ಮ		ನಾ	ದ	ಸ್ವ	ರ
ರಾ		ಥಿ			ನೆ		ಯ			ಕ್ತ
ಜ			ಮೂ		ಕ		ಕಿ	ರಾ	ತ	ಕ
	ಚಿ	ತೆ	ಗೂ	ಚಿಂ	ತೆ					ಣ್ಣೀ
			ರು				ನ	ನ್ನ	ವ	ರು

ವಿಜೇತರು: ಎಂ.ಎಲ್.ಯೋಗಾನರಸಿಂಹಪ್ರಸಾದ್, ನಂ.132, 9ನೇ ಕ್ರಾಸ್, ಹೆಬ್ಬಾಳ್ 1ನೇ ಹಂತ, ಮೈಸೂರು-16

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015



ಸಾವಿರ ಸ್ಕ್ರೀನ್‌ಗಳಲ್ಲಿ ಕಾಂತಾರ-1 ಪೇಯ್ಡ್ ಪ್ರೀಮಿಯರ್ ಶೋ!

ನಟ, ನಿರ್ದೇಶಕ ರಿಷಬ್ ಶೆಟ್ಟಿ ನಾಯಕನಾಗಿ ನಟಿಸುವುದರೊಂದಿಗೆ ನಿರ್ದೇಶನ ಕೂಡ ಮಾಡಿರುವ ಕಾಂತಾರ ಚಾಪ್ಟರ್ 1 ಬಿಡುಗಡೆಗೆ ಇನ್ನು ಕೇವಲ 13 ದಿನ ಮಾತ್ರ ಬಾಕಿಯಿದೆ. ಹೊಂಬಾಳೆ ಫಿಲಂಸ್ ನಿರ್ಮಾಣದ ಈ ಚಿತ್ರ ಹಲವಾರು ಭಾಷೆಗಳಲ್ಲಿ ಅ.2ಕ್ಕೆ ತೆರೆಕಾಣಲಿದೆ. ಅದಕ್ಕೂ ಮುನ್ನ ದೊಡ್ಡಮಟ್ಟದಲ್ಲಿ ಪ್ರೀಮಿಯರ್ ಶೋ ಆಯೋಜಿಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ. ಸಾವಿರಾರು ಥಿಯೇಟರ್‌ಗಳಲ್ಲಿ ಈ ಚಿತ್ರದ ಪೇಯ್ಡ್ ಪ್ರೀಮಿಯರ್ ಶೋ ನಡೆಯಲಿದ್ದು, ಆ ಮೂಲಕ ಇದೊಂದು ಸಾರ್ವಕಾಲಿಕ ದಾಖಲೆಯಾಗಲಿದೆ.

ಈಗ ಪೇಯ್ಡ್ ಪ್ರೀಮಿಯರ್ ಶೋ ನಡೆಸುವುದು ಟ್ರೆಂಡ್ ಆಗಿದೆ. ಈಚೆಗೆ ರಿಲೀಸಾಗಿ ಯಶಸ್ವಿ ಪ್ರದರ್ಶನ ಕಾಣುತ್ತಿರುವ ಸು ಫ್ರಮ್ ಸೋ ಚಿತ್ರಕ್ಕೂ ಸಹ ರಾಜ್ಯಾದ್ಯಂತ ನಡೆಸಿದ ಪೇಯ್ಡ್ ಪ್ರೀಮಿಯರ್ ಶೋಗಳಿಂದ ದೊಡ್ಡಮಟ್ಟದ ಪ್ರಚಾರ ಸಿಕ್ಕಿತ್ತು. ಅದೇ ರೀತಿ ಪೇಯ್ಡ್ ಪ್ರೀಮಿಯರ್ ಶೋ ಮಾಡುವ ವಿಚಾರದಲ್ಲೇ ಕಾಂತಾರ ದೊಡ್ಡ ದಾಖಲೆ ಬರೆಯ ಹೊರಟಿದೆ. ಬಿಡುಗಡೆಗೂ ಮುನ್ನ ಅಂದರೆ, ಅ.1ರಂದೇ ರಾಜ್ಯಾದ್ಯಂತ ಪೇಯ್ಡ್ ಪ್ರೀಮಿಯರ್ ಶೋ ನಡೆಸುವ ಯೋಜನೆ ಸಿದ್ಧವಾಗಿದೆ. ಸಾಮಾನ್ಯವಾಗಿ ಹತ್ತಿಪ್ಪತ್ತು ಕೇಂದ್ರಗಳಲ್ಲಿ ನಡೆಯುತ್ತಿದ್ದ ಪೇಯ್ಡ್ ಪ್ರೀಮಿಯರ್ ಶೋ ಈ ಮೂಲಕ ಸಾವಿರದ ಲೆಕ್ಕ ತಲುಪಿದೆ.

ದೇಶದ ಯಾವ ಭಾಷೆಯ ಚಿತ್ರವೂ ಇಷ್ಟು ದೊಡ್ಡ ಮಟ್ಟದ ಪೇಯ್ಡ್ ಪ್ರೀಮಿಯರ್ ಶೋ ನಡೆಸಿದ ಉದಾಹರಣೆಯಿಲ್ಲ. ಇದೇನಾದರೂ ಯಶಸ್ವಿಯಾದರೆ ಕಾಂತಾರ-1 ವಿಶ್ವದಾಖಲೆ ಮಾಡುವುದಂತೂ ಖಚಿತ. ಇದರಿಂದಲೇ ಚಿತ್ರತಂಡಕ್ಕೆ ದೊಡ್ಡಮೊತ್ತದ ಗಳಿಕೆಯಾಗುವುದರಲ್ಲಿ ಅನುಮಾನವೇ ಇಲ್ಲ.

ಸದ್ಯ ಕಾಂತಾರ-1 ಚಿತ್ರದ ವಿತರಣೆಯ ಹಕ್ಕುಗಳ ಮಾರಾಟ ಬಿರುಸಿನಿಂದ ನಡೆಯುತ್ತಿದ್ದು, ವಿತರಕರು ಮುಗಿಬಿದ್ದು, ಸಿನಿಮಾ ಖರೀದಿ ಮಾಡಿಕೊಳ್ಳುತ್ತಿದ್ದಾರೆ. ಅಮೆಜಾನ್ ಪ್ರೈಮ್ ವಿಡಿಯೋ ಓಟಿಟಿ ಸಂಸ್ಥೆಯು ಸುಮಾರು 125 ಕೋಟಿ ರೂ.ಗಳಿಗೆ ಕಾಂತಾರ ಚಾಪ್ಟರ್ 1 ಚಿತ್ರದ ಪ್ರಸಾರದ ಹಕ್ಕುಗಳನ್ನು ಖರೀದಿ ಮಾಡಿದ್ದು, ನಿರ್ಮಾಪಕರಿಗೆ ಬಿಡುಗಡೆಗೂ ಮುನ್ನವೇ ದೊಡ್ಡಮಟ್ಟದ ಲಾಭವಾಗಿದೆ

ಮೈಸೂರು ಮಿತ್ರ

ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಿ

ಉತ್ಪಾದಕರಿಗೆ ಹುನುಗನಹಳ್ಳಿ ಡೇರಿ ಅಧ್ಯಕ್ಷ ವೆಂಕಟರಾಮು ಮನವಿ

ತಿ.ನರಸೀಪುರ, ಸೆ.18– ಸಹಕಾರ ಸಂಘಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡಿ ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಸಬಲರಾಗಬೇಕು ಎಂದು ಹುನುಗನಹಳ್ಳಿ ಡೇರಿ ಸಂಘದ ಅಧ್ಯಕ್ಷ ವೆಂಕಟರಾಮು ತಿಳಿಸಿದರು.

ತಾಲೂಕಿನ ಹುನುಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಉತ್ಪಾದಕರು ಸಂಘಕ್ಕೆ ಗುಣಮಟ್ಟದ ಹಾಲು ಪೂರೈಸಿದಲ್ಲಿ ಹೆಚ್ಚಿನ ಆದಾಯಗಳಿಸಬಹುದಾಗಿದ್ದು, ಇದನ್ನು ಗಮನದಲ್ಲಿಟ್ಟುಕೊಂಡು ಹಸುವಿಗೆ ಉತ್ತಮ ಆಹಾರ ನೀಡಬೇಕು. ಜೊತೆಗೆ ಆರೋಗ್ಯ ಕಾಪಾಡಬೇಕು. ಸಂಘದ ಸದಸ್ಯರು ಹಾಗೂ ಹೈನುಗಾರರು ಸರ್ಕಾರ, ಜಿಲ್ಲಾ ಹಾಲು ಒಕ್ಕೂಟದಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯದರ್ಶಿ ಕುಶಾಲ್‌ಗೌಡ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು ಷೇರುದಾರರ ಸಹಕಾರದಿಂದ ಪ್ರಸಕ್ತ ಸಾಲಿನಲ್ಲಿ 6,26,177 ರೂ.ಗಳ ನಿವ್ವಳ ಲಾಭ ಗಳಿಸಿ ತಾಲೂಕಿನಲ್ಲಿ ಮಾದರಿ ಸಂಘವಾಗಿ ಕಾರ್ಯ ನಿರ್ವಹಿಸುತ್ತಿದೆ. ಕಳೆದ 23 ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿರುವ ಸಂಘದಿಂದ ಪ್ರತಿ ವರ್ಷ ಉತ್ಪಾದಕರಿಗೆ ಬೋನಸ್ ವಿತರಿಸಲಾಗುತ್ತಿದೆ. ಅಲ್ಲದೇ ಸಂಘದ ಹೆಸರಿನಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಸಂಘ ಖರೀದಿಸಿರುವ ಹಾಲು ಹಾಗೂ ಇಲ್ಲಿನ ವ್ಯವಹಾರ ಗಮನಿಸಿದಾಗ ಲಾಭ ಎಲ್ಲೂ ಸೋರಿಕೆಯಾಗದೇ ಹೆಚ್ಚಿನ ನಿವ್ವಳ ಲಾಭ ಬಂದಿದೆ. ಲಾಭಾಂಶದಲ್ಲಿ ಆಯುಧ ಪೂಜೆ ವೇಳೆಗೆ 2,95,596 ರೂ.ಗಳನ್ನು ಬೋನಸ್ ನೀಡುವುದಾಗಿ ತಿಳಿಸಿದರು.

ಡೈರಿಗೆ ಯಾರು ಹೆಚ್ಚು ಹಾಲು ಸರಬರಾಜು ಮಾಡುತ್ತಾರೋ ಅವರಿಗೆ ಹೆಚ್ಚಿನ ಬೋನಸ್ ಸಿಗಲಿದೆ. ಅಲ್ಲದೇ ಹಾಲು ಉತ್ಪಾದಕರು ಆಕಸ್ಮಿಕವಾಗಿ ಮರಣ ಹೊಂದಿದರೆ ಸಂಘದಿಂದ 15 ಸಾವಿರ ರೂ. ನೀಡುವ ಪದ್ಧತಿ ಮೊದಲಿನಿಂದ ಜಾರಿಯಲ್ಲಿದೆ ಎಂದರು.

ವಿಸ್ತರಣಾಧಿಕಾರಿ ಬಿ.ಎಸ್.ರಂಜಿತ ಅವರು ರೈತರಿಗೆ ಉಪಯುಕ್ತ ಮಾಹಿತಿ ನೀಡಿದರು. ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಚಿನ್ನಮ್ಮ, ಕಮಲಾ ಮಾದೇಗೌಡ, ಪದ್ಮ ಅವರಿಗೆ ನೆನಪಿನ ಕಾಣಿಕೆ ಹಾಗೂ ಹಾಲಿನ ಕ್ಯಾನ್ ನೀಡಿ ಸನ್ಮಾನಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷೆ ರತ್ನಮ್ಮ, ನಿರ್ದೇಶಕರಾದ ಸಿ.ರಾಜೇಶ್, ಶಿವಣ್ಣ, ಗುಂಡಯ್ಯನ ಶಿವಣ್ಣ, ಜವರಪ್ಪನ ಶಿವಣ್ಣ, ಚಂದ್ರಶೇಖರ, ಕೃಷ್ಣೇಗೌಡ, ನಿಂಗೇಗೌಡ, ಮಂಜುಳಾ, ಗೌರಮ್ಮ, ಜ್ಯೋತಿ, ಹಾಲು ಪರೀಕ್ಷಕ ನಾರಾಯಣ, ಸಹಾಯಕ ರವಿಚಂದ್ರ ಸೇರಿದಂತೆ ಷೇರುದಾರರು, ಗ್ರಾಮಸ್ಥರು ಹಾಜರಿದ್ದರು.


ಸಭೆಯಲ್ಲಿ ಹೆಚ್ಚು ಹಾಲು ಸರಬರಾಜು ಮಾಡಿದ ರೈತರನ್ನು ಸನ್ಮಾನಿಸಲಾಯಿತು.

ಜಾತಿ ಜನಗಣತಿಯಲ್ಲಿ 'ಕುರುಬ' ಎಂದೇ ನಮೂದಿಸಿ

ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ

ಹೆಚ್.ಡಿ.ಕೋಟೆ, ಸೆ.18– ಸೆಪ್ಟೆಂಬರ್ 22 ರಿಂದ ನಡೆಯುವ ಜಾತಿ ಜನಗಣತಿಯಲ್ಲಿ ಕಡ್ಡಾಯವಾಗಿ ಜಾತಿ ಕಾಲಂ ನಂ.9ರಲ್ಲಿ 0809 'ಕುರುಬ' ಎಂದೇ ನಮೂದಿಸಬೇಕು ಎಂದು ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮನವಿ ಮಾಡಿದರು.

ಪಟ್ಟಣದ ಕನಕ ಭವನದಲ್ಲಿ ತಾಲೂಕು ಕುರುಬ ಸಂಘ ಮತ್ತು ಕರ್ನಾಟಕ ಪ್ರದೇಶ ಕುರುಬರ ಸಂಘದಿಂದ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಆಯೋಗ ರಚನೆ ಮಾಡಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ರಾಜ್ಯಾದ್ಯಂತ ಮಾಡುತ್ತಿರುವುದರಿಂದ ಗಣತಿದಾರರು ತಮ್ಮ ಮನೆಗೆ ಬಂದಾಗ ಸಮಾಜದ ಬಂಧುಗಳು ಸಾಮಾಜಿಕ, ಆರ್ಥಿಕ, ಶಿಕ್ಷಣ ಹಾಗೂ ಉದ್ಯೋಗ ಇತ್ಯಾದಿ ಸರ್ಕಾರದ ಮೀಸಲಾತಿ ಸೌಲಭ್ಯಗಳನ್ನು ಪಡೆಯಲು ಜಾತಿ ಕಾಲಂ ನಂ.9ರಲ್ಲಿ ಸರ್ಕಾರದ ಗೆಜೆಟ್ ನಂಬರ್ 0809 ಕುರುಬ ಎಂಬುದಾಗಿ ಕಡ್ಡಾಯವಾಗಿ ಬರೆಸಿ ಉಪಜಾತಿ ಕಾಲಂನಲ್ಲಿಯೂ ಕುರುಬ ಎಂದು ಜಾತಿ ಬರೆಸಬೇಕು. ಇನ್ನಿತರ ಯಾವುದೇ ಪರ್ಯಾಯ ಜಾತಿಗಳ ಪದನಾಮಗಳನ್ನು ಬರೆಸಬಾರದು ಎಂದು ಮನವಿ ಮಾಡಿದರು.

ಸಮೀಕ್ಷೆ ಸಂದರ್ಭ ಕುರುಬ ಸಂಘದ ನಿಕಟಪೂರ್ವ ಅಧ್ಯಕ್ಷರು, ತಾಲೂಕು ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಸಮಾಜದ ಮುಖಂಡರು, ಗ್ರಾಮದ ಯಜಮಾನರು, ಯುವಕರು ಸರ್ಕಾರಕ್ಕೆ ಮಾಹಿತಿ ಒದಗಿಸುವಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂದರು.

ಈ ವೇಳೆ ತಾಲೂಕು ಕುರುಬ ಸಂಘದ ಅಧ್ಯಕ್ಷ ಎಂ.ಬಿ.ಆನಂದ್, ನಾಗೇಗೌಡ, ಸಿ.ಚನ್ನೇಗೌಡ, ರಾಜೇಗೌಡ, ಕುಮಾರ್, ಆರ್.ಎನ್.ಚಂದ್ರೇಗೌಡ, ಶಿವಮಲ್ಲಪ್ಪ, ಗೋವಿಂದರಾಜು, ಪ್ರಕಾಶ್, ಕೋಮರೇಗೌಡ, ಪ್ರಭು, ರಮೇಶ್, ಸಂತೋಷ್, ಬಸಪ್ಪ, ಕಾಂಜೇಗೌಡ, ಮಹಾದೇವೇಗೌಡ, ಮಹದೇವ, ಬೀರೇಗೌಡ, ಸೋಮೇಗೌಡ, ಗಿರೀಶ್ ಕುಮಾರ್, ಕಾರ್ತಿಕ್ ಬೀರೇಗೌಡ, ಕುಮಾರಸ್ವಾಮಿ, ಮಲ್ಲಿಕಾರ್ಜುನ, ಎಂ.ರಾಜೇಗೌಡ, ಚನ್ನೇಗೌಡ, ಕಲ್ಲಿರೇಗೌಡ, ಶಿವಣ್ಣ, ಕುಮಾರ್, ಕೃಷ್ಣಪ್ಪ, ಪ್ರಭು, ರಮೇಶ್, ದೊಡ್ಡಸ್ವಾಮಿಗೌಡ, ಆಟೋ ರಮೇಶ್ ಸೇರಿದಂತೆ ಇನ್ನಿತರರಿದ್ದರು.


ಸಭೆಯಲ್ಲಿ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿದರು.

ಡಾ.ಮೆಹಬೂಬ್ ಖಾನ್ ಹುಟ್ಟುಹಬ್ಬ ಆಚರಣೆ

ಕೆ.ಆರ್.ನಗರ, ಸೆ.18– ನೊಂದವರು, ಬಡವರು ಸೇರಿದಂತೆ ತೀವ್ರ ಸಂಕಷ್ಟಕ್ಕೀಡಾದವರ ಬೆನ್ನೆಲುಬಾಗಿ ನಿಂತು ಅವರ ಕಷ್ಟಗಳಿಗೆ ಪಟ್ಟಣದ ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್ ಸ್ಪಂದಿಸಲಿದ್ದಾರೆ ಎಂದು ಮುಸ್ಲಿಂ ಮುಖಂಡ ಇರ್ಷಾದ್ ತಿಳಿಸಿದರು.

ಪಟ್ಟಣದ ಖ್ಯಾತ ಮೂಳೆ ತಜ್ಞ ಹಾಗೂ ಸಮಾಜ ಸೇವಕ ಡಾ.ಮೆಹಬೂಬ್ ಖಾನ್ ಅವರ ಹುಟ್ಟುಹಬ್ಬ ಅಂಗವಾಗಿ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆ ಮತ್ತು ತಾಲೂಕು ಕಾರಾಗೃಹದಲ್ಲಿ ಹಣ್ಣು ಹಂಪಲು ವಿತರಿಸಿ ಮಾತನಾಡಿದ ಅವರು ಜಾತಿಭೇದ ಮರೆತು, ಬಲಗೈಯಿಂದ ಕೊಟ್ಟ ದಾನ ಎಡಗೈ ಗೊತ್ತಾಗಾದಂತೆ ಎಲೆಮರೆ ಕಾಯಿಯಂತೆ ಕಷ್ಟದಲ್ಲಿರುವ ವರ ಸಂಕಷ್ಟಕ್ಕೆ ಡಾ.ಮೆಹಬೂಬ್ ಖಾನ್ ಸದಾ ಸ್ಪಂದಿಸುವ ಸಮಾಜ ಸೇವಕರು ಎಂದು ಬಣ್ಣಿಸಿದರು.

ಡಾ.ಮೆಹಬೂಬ್ ಖಾನ್ ಅವರ ಸಮಾಜಸೇವೆ ಜನಮನ್ನಣೆ ಪಡೆದಿದೆ. ಕಳೆದ 12 ವರ್ಷಗಳಿಂದ ಅವರ ಅಭಿಮಾನಿ ಬಳಗದಿಂದ ಹುಟ್ಟುಹಬ್ಬದಂದು ವಿವಿಧ ಸಮಾಜ ಸೇವಾ ಕಾರ್ಯಗಳನ್ನು ನಡೆಸಿ ಕೊಂಡು ಬರಲಾಗುತ್ತಿದೆ. ಹಾಗಾಗಿ ಇಂದು ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆ, ಕಾರಾ ಗೃಹ ಮತ್ತು ಡೋರನಹಳ್ಳಿಯಲ್ಲಿರುವ ವಿಕಲಚೇತನರ ಶಾಲೆಗಳಿಗೆ ಹಣ್ಣು ಹಂಪಲು ವಿತರಣೆ ಮಾಡಿದ್ದೇವೆ. ಈ ಕಾರ್ಯಕ್ಕೆ ಹಲವು ಸ್ನೇಹಿತರು ಸಹಕಾರ ನೀಡಿದ್ದಾರೆ ಎಂದರು.

ಈ ವೇಳೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ವೈದ್ಯ ಡಾ.ದಿವ್ಯ, ಡಾ.ಫಹಾದ್ ಉಲ್ಲಾ ಖಾನ್, ಖಾದ್ರಿಯಾ ಉರುಸ್ ಕಮಿಟಿ ಅಧ್ಯಕ್ಷ ಶಾಕೀರ್, ಉಪಾಧ್ಯಕ್ಷ ಮುಹಮ್ಮದ್ ಶಫೀ, ವಸೀಂ ಉಲ್ಲಾ ಖಾನ್, ನಯೀಂ, ಮುಖಂಡರಾದ ಸೈಯದ್ ಶಾಕೀರ್, ವಸೀಂ ತಾಜ್, ನಜೀಬ್, ಲೋಕೇಶ್, ಮುದ್ದಸೀರ್, ಫತಾ, ಮುಬಾರಕ್, ನಾಸೀರ್ ಹಾಗೂ ವಸೀಂ ಸೇರಿದಂತೆ ಇನ್ನಿತರರಿದ್ದರು.


ಡಾ.ಮೆಹಬೂಬ್ ಖಾನ್ ಹುಟ್ಟುಹಬ್ಬ ಅಂಗವಾಗಿ ಹಣ್ಣು ಹಂಪಲು ವಿತರಿಸಲಾಯಿತು.

ರೈತರು, ಕಾರ್ಮಿಕರು ದೇಶದ ಸಂಪತ್ತಿನ ಸೃಷ್ಟಿಕರ್ತರು

ರೈತ ಕೃಷಿ ಕಾರ್ಮಿಕರ ಅಧ್ಯಯನ ಶಿಬಿರದಲ್ಲಿ ಕೆ.ರಾಧಾಕೃಷ್ಣ

ನಂಜನಗೂಡು, ಸೆ.18– ದುಡಿಯುವ ಜನರು, ರೈತರು ಮತ್ತು ಕಾರ್ಮಿಕರು ದೇಶದ ಸಂಪತ್ತಿನ ಸೃಷ್ಟಿಕರ್ತರು. ಅವರ ದುಡಿಮೆಯಿಂದ ಸೃಷ್ಟಿಸಿದ ಸಂಪತ್ತನ್ನು ಕೆಲವು ಮಂದಿ ಬಂಡವಾಳಗಾರರು ಕಸಿದುಕೊಳ್ಳುತ್ತಿದ್ದಾರೆ. ಅಂತಹ ಶೋಷಣೆಯ ವಿರುದ್ಧ ಕಾರ್ಮಿಕರು ಮತ್ತು ರೈತರು ಒಂದಾಗಿ ಹೋರಾಡಬೇಕು ಎಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪಾಲಿಟ್ಬ್ಯೂರೊ ಸದಸ್ಯ ಕಾಮ್ರೇಡ್ ಕೆ.ರಾಧಾಕೃಷ್ಣ ಹೇಳಿದರು.

ನಗರದ ನಂದಿನಿ ಕನ್ವೆನ್ಷನ್ ಹಾಲ್‌ನಲ್ಲಿ ಗುರುವಾರ ನಡೆದ ರೈತ ಕೃಷಿ ಕಾರ್ಮಿಕರ ಅಧ್ಯಯನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ನೇಪಾಳದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಹೋರಾಟದಂತಹ ಹೋರಾಟಗಳು ನಡೆಯಬೇಕೆಂದು ಜನರು ಬಯಸುತ್ತಿದ್ದಾರೆ. ಅಲ್ಲಿನ ಹೋರಾಟದಲ್ಲಿ ಯುವಜನರು ಮತ್ತು ವಿದ್ಯಾರ್ಥಿಗಳು ಜೀವ ಕೊಟ್ಟಿದ್ದಾರೆ. ಅಧಿಕಾರದಲ್ಲಿದ್ದ ಸರ್ಕಾರ ಉರುಳಿ ಹೊಸ ಸರ್ಕಾರ ರಚನೆಯಾಗಿದೆ. ಆದರೆ ಸಮಸ್ಯೆಗಳು ಬಗೆಹರಿಯುತ್ತವೆಯೇ ಎನ್ನುವುದು ಮುಖ್ಯ. ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ಚಿಂತಕ ಕಾಮ್ರೇಡ್ ಶಿವದಾಸ್ ಘೋಷ್ ಬಹಳ ಹಿಂದೆಯೇ ಹೇಳಿದಂತೆ ಹೋರಾಟಗಳು ಅಲೆಗಳಂತೆ ಒಂದಾದ ಮೇಲೊಂದು ಬರುತ್ತವೆ. ಆದರೆ ಬಂಡವಾಳಶಾಹಿ ವ್ಯವಸ್ಥೆ ಕಿತ್ತೊಗೆಯದಿದ್ದರೆ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅದಕ್ಕಾಗಿ ರೈತರು ಹಳ್ಳಿ ಹಳ್ಳಿಗಳಲ್ಲಿ ಸಂಘಟನೆ ಕಟ್ಟಬೇಕು. ಕಾರ್ಮಿಕರ ನಾಯಕತ್ವದಲ್ಲಿ ರಷ್ಯಾ, ಚೈನಾಗಳಲ್ಲಾದಂತೆ ಸಮಾಜವಾದಿ ಕ್ರಾಂತಿ ನಡೆಯಬೇಕು ಎಂದರು.

ಸಾಮಾಜಿಕ ಹೋರಾಟಗಾರ ಉಗ್ರನರಸಿಂಹೇಗೌಡ ಮಾತನಾಡಿ, ರೈತರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಭವಿಷ್ಯ ರೂಪಿಸುವ ಹೋರಾಟ ಕಟ್ಟಲು ಸೇರಿರುವುದು ಸಂತೋಷದ ವಿಷಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರೋಗ್ಯ, ಶಿಕ್ಷಣ, ಮೂಲ ಸೌಕರ್ಯ ಮತ್ತು ಕೃಷಿ ಅಭಿವೃದ್ಧಿ ಖಚಿತಪಡಿಸುವ ಯೋಜನೆಗಳನ್ನು ರೂಪಿಸುತ್ತಿಲ್ಲ. ನಮ್ಮ ಜನರು ಕಟ್ಟುವ ತೆರಿಗೆ ಹಣ ಅದಾನಿ, ಅಂಬಾನಿಗಳಂತಹ ಉದ್ಯಮಿಗಳ ತೆರಿಗೆ ವಿನಾಯಿತಿಯಲ್ಲಿ ಹರಿದು ಹೋಗುತ್ತಿದೆ. ಬಂಡವಾಳಗಾರರ ಸೇವೆ ಸಲ್ಲಿಸುವ ಕಾಂಗ್ರೆಸ್, ಬಿಜೆಪಿ ಪಕ್ಷಗಳನ್ನು ನಂಬದೆ ರೈತರು ಗಟ್ಟಿ ಹೋರಾಟ ರೂಪಿಸಬೇಕು ಎಂದರು.

ಎಐಕೆಕೆಎಂಎಸ್ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಭಗವಾನ್‌ರೆಡ್ಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಐಕೆಕೆಎಂಎಸ್ ರಾಜ್ಯಾಧ್ಯಕ್ಷ ಕಾಮ್ರೇಡ್ ಶಶಿಧರ್, ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಬಿ.ರವಿ, ಹೆಚ್.ಎಂ.ಬಸವರಾಜು ಉಪಸ್ಥಿತರಿದ್ದರು.


ಶಿಬಿರವನ್ನು ಕಾಮ್ರೇಡ್ ಕೆ.ರಾಧಾಕೃಷ್ಣ ಉದ್ಘಾಟಿಸಿ, ಮಾತನಾಡಿದರು.

ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ: ಅಭಿನಂದನೆ


ವಿದ್ಯಾರ್ಥಿಗಳನ್ನು ಶಾಲೆ ವತಿಯಿಂದ ಅಭಿನಂದಿಸಲಾಯಿತು.

ಸರಗೂರು, ಸೆ.18– ಸರಗೂರು ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಪಟ್ಟಣದ ದೇವರಾಜಸ್ವಾಮಿ ಹಿರಿಯ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳನ್ನು ಶಾಲೆ ವತಿಯಿಂದ ಅಭಿನಂದಿಸಲಾಯಿತು.

ಶಾಲೆ ಅಧ್ಯಕ್ಷ ಡಾ.ಷಡಕ್ಷರ ಸ್ವಾಮೀಜಿ ಮಾತನಾಡಿ, ಮಕ್ಕಳಿಗೆ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳು ಅವಶ್ಯಕ. ಕ್ರೀಡೆಯಿಂದ ಮಾನಸಿಕ, ದೈಹಿಕ ಆರೋಗ್ಯ ಸದೃಢಗೊಳ್ಳುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾ ಕೂಟಗಳಲ್ಲಿ ಭಾಗವಹಿಸಬೇಕು ಎಂದರು.

ಶಾಲಾ ಕಾರ್ಯದರ್ಶಿ ಗುರುಸ್ವಾಮಿ ಮಾತನಾಡಿದರು. ಇದೇ ವೇಳೆ ಬಾಲಕರ ವಿಭಾಗ 100 ಮೀ. ಓಟ ಪ್ರಥಮ, ಗುಂಡು ಎಸೆತ ಪ್ರಥಮ, ಚಕ್ರ ಎಸೆತ ದ್ವಿತೀಯ, ರೀಲೆ ದ್ವಿತೀಯ, ಉದ್ದ ಜಿಗಿತ ಪ್ರಥಮ, ಎತ್ತರ ಜಿಗಿತ ದ್ವಿತೀಯ, 200 ಮೀ ಓಟ ತೃತೀಯ, ಬಾಲಕಿಯರ ವಿಭಾಗ 100 ಮೀ. ಓಟ ಪ್ರಥಮ, ಗುಂಡು ಎಸೆತ ಪ್ರಥಮ, ಚಕ್ರ ಎಸೆತ ಪ್ರಥಮ, ಎತ್ತರ ಜಿಗಿತ ಪ್ರಥಮ, ಉದ್ದ ಜಿಗಿತ ದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಈ ವೇಳೆ ಮುಖ್ಯ ಶಿಕ್ಷಕಿ ಅನ್ನಪೂರ್ಣ, ದೈಹಿಕ ಶಿಕ್ಷಕ ಜಯಚಂದ್ರ, ಶಿಕ್ಷಕರಾದ ಅಯ್ಯಮ್ಮ, ಪುಟ್ಟಮ್ಮ, ಲೀಲಾವತಿ, ಮಹಾಲಕ್ಷ್ಮಿ, ಯಶಸ್ವಿನಿ, ಶಾಲಿನಿ, ಸುಮ, ಕೃಷ್ಣವೇಣಿ, ಸುನೀತಾ, ಚಾಮರಾಜು, ಪ್ರಭಾವತಿ, ಭೂಮಿ, ರುಕ್ಮಿಣಿ, ಗರಿಮಾ ಆಗರ್ವಾಲ್, ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಹಾಲು ಉತ್ಪಾದಕರು ಸಂಘ ಸದೃಢಗೊಳಿಸಿ

ವ್ಯಾಸರಾಜಪುರ ಡೇರಿ ಅಧ್ಯಕ್ಷ ಟಿ.ರಂಗಸ್ವಾಮಿ ಮನವಿ

ತಿ.ನರಸೀಪುರ, ಸೆ.18– ಗುಣಮಟ್ಟದ ಹಾಲು ಪೂರೈಕೆ ಮಾಡುವುದರಿಂದ ಉತ್ಪಾದಕರು ಉತ್ತಮ ಬೆಲೆ ಪಡೆಯುವ ಜೊತೆಗೆ ಸಹಕಾರ ಸಂಘವನ್ನು ಆರ್ಥಿಕವಾಗಿ ಸದೃಢಗೊಳಿಸಬಹುದು ಎಂದು ವ್ಯಾಸರಾಜಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಟಿ.ರಂಗಸ್ವಾಮಿ ತಿಳಿಸಿದರು.

ತಾಲೂಕಿನ ವ್ಯಾಸರಾಜಪುರ ಡೇರಿ ಆವರಣದಲ್ಲಿ ಗುರುವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಬಹುತೇಕ ಅನ್ನದಾತರು ಜೀವನ ನಿರ್ವಹಣೆಗಾಗಿ ಹೈನುಗಾರಿಕೆ ಅವಲಂಬಿಸಿದ್ದಾರೆ. ಇನ್ನೂ ಕೆಲವು ರೈತರು ದೊಡ್ಡ ಮಟ್ಟದಲ್ಲಿ ಹೈನೋದ್ಯಮ ಮಾಡಿಕೊಂಡಿದ್ದಾರೆ. ಗುಣಮಟ್ಟದ ಹಾಲು ಪೂರೈಕೆಯೇ ಈ ಉದ್ಯಮದ ಆಧಾರ ಸ್ತಂಭವಾಗಿದೆ. ಆದ್ದರಿಂದ ಉತ್ಪಾದಕರು ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಹಕಾರ ಸಂಘವನ್ನು ಸದೃಢಗೊಳಿಸಬೇಕು ಎಂದು ಮನವಿ ಮಾಡಿದರು.

ಸಿಇಓ ಎಸ್.ಅಂದಾನಿಗೌಡ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, 2024–25ನೇ ಸಾಲಿನಲ್ಲಿ ಸಂಘ ಉತ್ತಮ ವಹಿವಾಟು ನಡೆಸುವ ಮೂಲಕ 2,62,025 ರೂ. ನಿವ್ವಳ ಆದಾಯ ಗಳಿಸಿ ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿದೆ ಎಂದರು.

ಸಭೆಯಲ್ಲಿ ಗ್ರಾಮದ ಚೈತನ್ಯ ಚಾರಿಟಬಲ್ ಟ್ರಸ್ಟ್‌ಗೆ ನಿತ್ಯ 1.5 ಲೀಟರ್ ಹಾಲನ್ನು ಉಚಿತವಾಗಿ ನೀಡಲು, ಹಾಲು ಉತ್ಪಾದಕರು ಆಕಸ್ಮಿಕವಾಗಿ ಮರಣ ಹೊಂದಿದರೆ ಅವರ ಕುಟುಂಬಕ್ಕೆ 3 ಸಾವಿರ ರೂ.ಗಳ ಮರಣ ನಿಧಿ ಹಾಗೂ ಸಂಕ್ರಾಂತಿ ಹಬ್ಬಕ್ಕೆ ನಿವ್ವಳ ಲಾಭಾಂಶದಲ್ಲಿ 1,20,727 ರೂ.ಗಳನ್ನು ಬೋನಸ್ ರೂಪದಲ್ಲಿ 160 ಹಾಲು ಉತ್ಪಾದಕರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲು ತೀರ್ಮಾನಿಸಲಾಯಿತು.

ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ವ್ಯಾಸರಾಜಪುರದ ಶಂಕರ, ಸಿದ್ದನಹುಂಡಿ ಎಂ.ಮುದ್ದಯ್ಯ, ಎಸ್.ಕೆಬ್ಬೆಹುಂಡಿ ಎನ್.ಜಯರಾಮು, ಜಗಜೀವನ ಗ್ರಾಮದ ದೊಡ್ಡರಾಜು ಹಾಗೂ ಗದ್ದೆಮೋಳೆ ಗ್ರಾಮದ ಶಿವಮ್ಮ ಅವರಿಗೆ ಬಹುಮಾನ ವಿತರಿಸಲಾಯಿತು.

ಮೈಮುಲ್ ತಾಲೂಕು ಮೇಲ್ವಿಚಾರಕ ಆರ್.ಪ್ರಮೋದ್, ಸಂಘದ ಉಪಾಧ್ಯಕ್ಷ ಸಿದ್ದಪ್ಪಾಜಿ, ನಿರ್ದೇಶಕರಾದ ಎಂ.ಮುದ್ದಯ್ಯ, ಶಂಕರ, ಪುಟ್ಟಸ್ವಾಮಿ, ಸಿದ್ದೇಗೌಡ, ನಾಗ, ಎಸ್.ಗಂಗಾಧರ, ರಾಜಣ್ಣ, ಎಸ್.ರಾಧ, ಚಿಕ್ಕತಾಯಮ್ಮ, ತಾಪಂ ಮಾಜಿ ಅಧ್ಯಕ್ಷ ಶಿವಸ್ವಾಮಿ, ಸೋಸಲೆ ಗ್ರಾಪಂ ಉಪಾಧ್ಯಕ್ಷ ಜೆ.ರಂಗಸ್ವಾಮಿ, ಸಂಘದ ಮಾಜಿ ಅಧ್ಯಕ್ಷ ಚೋಟಯ್ಯ, ಗ್ರಾಪಂ ಮಾಜಿ ಸದಸ್ಯ ನಟರಾಜು, ಸುರೇಶ್, ಗ್ರಾಪಂ ಮಾಜಿ ಅಧ್ಯಕ್ಷ ಅಣ್ಣಯ್ಯ, ಮಲ್ಲಿಕಾರ್ಜುನಸ್ವಾಮಿ, ಕೆಬ್ಬೆಹುಂಡಿ ಜಯರಾಮ್, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಎಸ್.ಸುಂದರ ನಾಯಕ್, ರಾಮಚಂದ್ರ, ಹಾಲು ಪರೀಕ್ಷಕ ರಾಜೇಶ್, ಸಹಾಯಕ ಎಸ್.ಪ್ರಕಾಶ್ ಇದ್ದರು.


ಹೆಚ್ಚು ಹಾಲು ಸರಬರಾಜು ಮಾಡಿದ ಹಾಲು ಉತ್ಪಾದಕರನ್ನು ಸನ್ಮಾನಿಸಲಾಯಿತು.

ಕೊಣಸೂರಲ್ಲಿ ವಿಜೃಂಭಣೆಯ ವಿಶ್ವಕರ್ಮ ಜಯಂತಿ


ಕೊಣಸೂರಲ್ಲಿ ವಿಶ್ವಕರ್ಮ ಜಯಂತಿ ನಡೆಯಿತು.

ಬೆಟ್ಟದಪುರ, ಸೆ.18– ಇಲ್ಲಿನ ಕೊಣಸೂರು ಗ್ರಾಮದಲ್ಲಿ ಗುರುವಾರ ವಿಶ್ವಕರ್ಮ ಜಯಂತಿ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದಲ್ಲಿ ಮಾಜಿ ಜಿಪಂ ಸದಸ್ಯ ಕೆ.ಸಿ.ರಾಜಶೇಖರಯ್ಯ ಮಾತನಾಡಿ, ಕಲೆಯನ್ನೇ ಉಸಿರಾಗಿಸಿಕೊಂಡಿರುವ ವಿಶ್ವಕರ್ಮ ಸಮುದಾಯದವರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದಾರೆ. ಸಮುದಾಯದವರಿಗೆ ಸಾಲ ಸೌಲಭ್ಯ ದೊರಕುತ್ತಿಲ್ಲ. ಜೊತೆಗೆ ಶೈಕ್ಷಣಿಕವಾಗಿ ಯಾವುದೇ ಸವಲತ್ತು ದೊರಕುತ್ತಿಲ್ಲ. ಆದ್ದರಿಂದ ಸಮುದಾಯದ ಜನರು ಸಮಾಜದ ಮುಖ್ಯವಾಹಿನಿಗೆ ಬರುವ ಸಲುವಾಗಿ ಸಂಘಟಿತರಾಗುವ ಜೊತೆಗೆ ತಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿಸಬೇಕು ಎಂದರು.

ಗ್ರಾಮದ ಮುಖಂಡ ವೀರಪ್ಪ ಮಾತನಾಡಿದರು. ಇದೇ ವೇಳೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಕನಕ ನಗರದ ಶಿಕ್ಷಕ ರಘು ಆಚಾರ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ವಿಶ್ವಕರ್ಮ ಸಮಾಜದ ಅಧ್ಯಕ್ಷ ಪುಟ್ಟರಾಜಾಚಾರ್, ಗ್ರಾಪಂ ಅಧ್ಯಕ್ಷೆ ಪವಿತ್ರ ರವಿ, ಮುಖಂಡರಾದ ಯೋಗೇಶ್ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

ನಟ ಡಾ.ವಿಷ್ಣುವರ್ಧನ್ ಹುಟ್ಟುಹಬ್ಬ ಆಚರಣೆ



ನಂಜನಗೂಡಿನ 16ನೇ ಕ್ರಾಸ್‌ನಲ್ಲಿ ವಿಷ್ಣು ಅಭಿಮಾನಿ ಬಳಗದ ಸದಸ್ಯರು ನಟ ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಕೇಕ್ ಕತ್ತರಿಸುವ ಮೂಲಕ ನಟ ಡಾ.ವಿಷ್ಣುವರ್ಧನ್ ಅವರ 75ನೇ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು. ಈ ವೇಳೆ ಮಂಜು, ಮಹೇಶ್, ರವಿ, ಕೆ.ಮಹದೇವ, ನಾರಾಯಣ, ವಸಂತ, ವಿನಯ, ಶಿವು, ಮಹದೇವಸ್ವಾಮಿ, ಮಲ್ಲೇಶ್, ರಾಜು, ನಯಾಜ್ ಉಪಸ್ಥಿತರಿದ್ದರು.

ಡಿವೈಎಸ್ಪಿ ಮನೋಜ್ ಕುಮಾರ್‌ಗೆ ಸನ್ಮಾನ



ಬನ್ನೂರು ಪೊಲೀಸ್ ಠಾಣೆ ಸಿಪಿಐ ಮನೋಜ್ ಕುಮಾರ್ ಅವರು ಡಿವೈಎಸ್‌ಪಿಯಾಗಿ ಪದೋನ್ನತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಎಂ.ಎಲ್.ಹುಂಡಿ ಪೀಠಾಧ್ಯಕ್ಷ ಶ್ರೀಗೌರಿಶಂಕರ ಸ್ವಾಮೀಜಿ, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಬಸವ ಬಳಗದ ಒಕ್ಕೂಟದ ಅಧ್ಯಕ್ಷ ಪಟೇಲ್ ಪರಮೇಶ, ಕೇತುಪುರ ಶಿವಕುಮಾರ್, ಉಪನ್ಯಾಸಕ ಕುಮಾರಸ್ವಾಮಿ ಸನ್ಮಾನಿಸಿದರು.

ನದಿಗೆ ಹಾರಿ ವಿದ್ಯಾರ್ಥಿನಿ ಆತ್ಮಹತ್ಯೆ


ದೀಪಿಕಾ

ಹುಣಸೂರು, ಸೆ.18– ವಿದ್ಯಾರ್ಥಿನಿಯೊಬ್ಬಳು ಡೆತ್ ನೋಟ್ ಬರೆದಿಟ್ಟು ಲಕ್ಷ್ಮಣ ತೀರ್ಥ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಪಂಪ್ ಹೌಸ್ ಬಳಿ ನಡೆದಿದೆ.

ತಾಲೂಕಿನ ಹರವೆ ಗ್ರಾಮದ ನಿವಾಸಿ ನಂಜುಂಡಸ್ವಾಮಿ ಅವರ ಪುತ್ರಿ ದೀಪಿಕಾ (18) ಆತ್ಮಹತ್ಯೆ ಮಾಡಿಕೊಂಡವರು. ಈಕೆ ಮೈಸೂರಿನ ಕುವೆಂಪು ಕಾಲೇಜಿನಲ್ಲಿ ದ್ವಿತೀಯ ಬಿಎ ವ್ಯಾಸಾಂಗ ಮಾಡುತ್ತಿದ್ದು, ಹಾಸ್ಟೆಲ್‌ನಲ್ಲಿದ್ದಳು. ಆದರೆ ಗುರುವಾರ ಕಾಲೇಜಿಗೆ ಹೋಗದ ಈಕೆ ಮೈಸೂರಿನಿಂದ ಹುಣಸೂರಿಗೆ ಆಗಮಿಸಿ ಪಂಪ್‌ಹೌಸ್ ಬಳಿ ಕಾಲೇಜು ಬ್ಯಾಗ್ ಹಾಗೂ ಗುರುತಿನ ಚೀಟಿ ಇಟ್ಟು ಲಕ್ಷ್ಮಣ ತೀರ್ಥ ನದಿಗೆ ಹಾರಿದ್ದಾಳೆ. ಈ ವೇಳೆ ನದಿ ದಡದ ಸ್ಮಶಾನದಲ್ಲಿ ವೈಕುಂಠ ಸಮಾರಾಧನೆ ನಡೆಸುತ್ತಿದ್ದವರು ದೀಪಿಕಾ ನದಿಗೆ ಹಾರುವುದನ್ನು ನೋಡಿ ಕೂಗಿಕೊಂಡಿದ್ದಾರೆ. ಈ ಸಂದರ್ಭ ಪಂಪ್ ಹೌಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಹೋಗಿ ನೋಡುವಷ್ಟರಲ್ಲಿ ಈಕೆ ಸಾವನ್ನಪ್ಪಿದ್ದಾಳೆ. ಸಾರ್ವಜನಿಕರು ಕಾಲೇಜು ಬ್ಯಾಗ್ ಹಾಗೂ ಐಡಿ ಕಾರ್ಡ್‌ನಲ್ಲಿದ್ದ ಮೊಬೈಲ್ ನಂಬರ್‌ಗೆ ಕರೆ ಮಾಡಿ ವಿದ್ಯಾರ್ಥಿನಿ ತಂದೆ ನಂಜುಂಡಸ್ವಾಮಿ ಅವರಿಗೆ ವಿಷಯ ಮುಟ್ಟಿಸಿದ್ದಾರೆ.

ಈ ವೇಳೆ ಸ್ಥಳಕ್ಕಾಗಮಿಸಿದ ದೀಪಿಕಾ ತಂದೆ ನಂಜುಂಡಸ್ವಾಮಿ ಪ್ರಕರಣ ಸಂಬಂಧ ಹುಣಸೂರು ನಗರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮುಂದಿನ ತನಿಖೆ ಕೈಗೊಂಡಿದ್ದಾರೆ. ದೀಪಿಕಾ ಡೆತ್‌ನೋಟ್‌ನಲ್ಲಿ ನನ್ನ ಸಾವಿಗೆ ನಾನೇ ಕಾರಣ. ನಾನು ನನ್ನ ತಂದೆ–ತಾಯಿಗೆ ಮೋಸ ಮಾಡಿದ್ದೇನೆ. ಅವರಿಷ್ಟದಂತೆ ನಾನು ಬದುಕಲು ಸಾಧ್ಯವಾಗಲಿಲ್ಲ. ನನ್ನನ್ನು ಕ್ಷಮಿಸಿ ಎಂದು ಬರೆದಿದ್ದು, ಪೊಲೀಸರು ಡೆತ್‌ನೋಟ್ ವಶಕ್ಕೆ ಪಡೆದು ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.

ಷೇರುದಾರರ ಸಹಕಾರದಿಂದ ಸಂಘ ಉತ್ತಮವಾಗಿ ನಡೆಯುತ್ತಿದೆ

ಸಾಲಕ್ಕಾಗಿ ನೋಂದಾಯಿಸಿಕೊಳ್ಳಿ: ತಾಯೂರು ಪಿಎಸಿಎಸ್ ಅಧ್ಯಕ್ಷ ಆರ್.ಜ್ಞಾನೇಶ್

ತಿ.ನರಸೀಪುರ, ಸೆ.18– ಷೇರುದಾರರು ಸಹಕಾರ ಸಂಘದಿಂದ ಸಾಲ ಪಡೆಯಲು ಮೊದಲು ಆಧಾರ ಮತ್ತು ಸ್ಥಿರಾಧಾರ ಪತ್ರಗಳನ್ನು ನಮೂದು ಮಾಡಿ ನೋಂದಣಿ ಮಾಡಿಕೊಳ್ಳಬೇಕು ಎಂದು ತಾಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹರಿಹರಪುರ ಆರ್.ಜ್ಞಾನೇಶ್ ತಿಳಿಸಿದರು.

ವರುಣ ವಿಧಾನಸಭಾ ವ್ಯಾಪ್ತಿಗೊಳಪಡುವ ತಾಯೂರು ಪಿಎಸಿಎಸ್ ಆವರಣದಲ್ಲಿ ಗುರುವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘ ಸ್ಥಾಪನೆಯಾಗಿ ಒಂದೂವರೆ ವರ್ಷ ಕಳೆದಿದೆ. ಸದಸ್ಯರ ಸಹಕಾರ, ಷೇರುದಾರರ ಷೇರು ಹಣದಿಂದ ಸಂಘ ಉತ್ತಮವಾಗಿ ನಡೆಯುತ್ತಿದೆ. ಸಂಘದ ಆರಂಭದಲ್ಲಿ ಸಂಘದ ನಿರ್ದೇಶಕರು ಹಾಗೂ ಸದಸ್ಯರು ಮುಂಗಡ ಹಣ ಹಾಕಿ ಸಂಘವನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಸಂಘದಲ್ಲಿ 7.16 ಲಕ್ಷ ರೂ.ಗಳ ನವೀಕರಣ ಸಾಲವಿದೆ. ಇದನ್ನೇ ಸಂಘದ ಸದಸ್ಯರಿಗೆ ನೀಡಿ ಅವರಿಂದ ಮತ್ತೆ ಪಡೆಯಲಾಗಿದ್ದು, ನವೀಕರಣದ ಸಾಲ ನೀಡಿರುವುದು ದೊಡ್ಡ ವಿಷಯವೇನಲ್ಲ. ಈಗ ನಾವು ಜಿಲ್ಲಾ ಬ್ಯಾಂಕ್‌ನಿಂದ ರೈತರಿಗೆ ಸಾಲ ವಿತರಿಸುವ ಉದ್ದೇಶದಿಂದ 4.90 ಕೋಟಿ ರೂ.ಗಳನ್ನು ಅನುಮೋದಿಸಿಕೊಂಡಿದ್ದೇವೆ. ಅದನ್ನು ರೈತರಿಗೆ ಕೊಟ್ಟ ಮೇಲೆ ನಮ್ಮ ಸಂಘ ಚಾಲ್ತಿಯಲ್ಲಿದೆ. ಊರ್ಜಿತವಾಗಿದೆ ಎಂಬ ಭಾವನೆ ನಮ್ಮದಾಗಿದೆ ಎಂದರು.

ನವೀಕರಣ ಸಾಲ ನೀಡಲು ಸಹ ಮೊದಲು ಸಂಘದ ಸದಸ್ಯರಾಗಿ ದಾಖಲಾತಿಗಳನ್ನು ನೀಡಿದ ನಂತರವೇ ಸಾಧ್ಯವಾಗುತ್ತದೆ. ಆದರೆ ದಾಖಲಾತಿ ನೀಡದೇ ನವೀಕರಣ ಸಾಲ ನೀಡಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲಾ ಷೇರುದಾರರು ಮೊದಲು ಸದಸ್ಯರಾಗಿ ದಾಖಲಾತಿಗಳನ್ನು ನೀಡಬೇಕೆಂದು ಮನವಿ ಮಾಡಿದರು.


ಸಂಘದಲ್ಲಿ ಮೊದಲು 180 ಸದಸ್ಯರಿದ್ದರು. ಪ್ರಸ್ತುತ 400 ಸದಸ್ಯರಿದ್ದಾರೆ. ಈ ಪೈಕಿ 46 ಸದಸ್ಯರು ಮಾತ್ರ ಸಾಲಕ್ಕಾಗಿ ದಾಖಲಾತಿಗಳನ್ನು ಕಚೇರಿಗೆ ತಲುಪಿಸಿದ್ದಾರೆ. ಜಿಲ್ಲಾ ಬ್ಯಾಂಕ್‌ನಿಂದ ಮಂಜೂರು ಮಾಡಿಸಿರುವ 4.90 ಕೋಟಿ ರೂಗಳ ಸಾಲವನ್ನು 4 ಹಂತಗಳಲ್ಲಿ ವಿತರಿಸಲು ನಿರ್ಧರಿಸಲಾಗಿದೆ. ಹಾಗಾಗಿ ರೈತರು ಸಂಘಕ್ಕೆ ಎನ್‌ಸಿಆರ್ ಹಾಗೂ ಸರ್ಕಾರಕ್ಕೆ ಬರೆದು ಕೊಡಬೇಕಾದ ಆಸ್ತಿ, ಸ್ಥಿರಾಧಾರ ಪತ್ರಗಳನ್ನು ನಮೂದು ಮಾಡಿ ನೋಂದಣಿ ಮಾಡಿಕೊಳ್ಳಬೇಕು. ಆನಂತರವೇ ಎಲ್ಲಾ ಸದಸ್ಯರಿಗೂ ಸಾಲ ಕೊಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಂಘದ ಸಿಇಓ ಆರ್.ಪ್ರಮೋದ್ ಕುಮಾರ್ ಸಂಘದ ವಾರ್ಷಿಕ ವರದಿ ಮಂಡಿಸಿದರು. ಸಭೆಯಲ್ಲಿ 2025–26ನೇ ಸಾಲಿನ ಅಂದಾಜು ಬಜೆಟ್ ಹಾಗೂ ಮುಂದಿನ ಆರ್ಥಿಕ ವರ್ಷಕ್ಕೆ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡುವ ವಿಚಾರದ ಬಗ್ಗೆ ಚರ್ಚೆ ನಡೆಯಿತು.

ಈ ವೇಳೆ ಗ್ರಾಮದ ಹಿರಿಯ ನಾಗರಿಕರನ್ನು ಸಂಘದಿಂದ ಸನ್ಮಾನಿಸಲಾಯಿತು. ಸಂಘದ ಉಪಾಧ್ಯಕ್ಷ ಹಾರೋಪುರ ಶಿವಣ್ಣ, ನಿರ್ದೇಶಕರಾದ ಜಿ.ಪಿ.ಮಹದೇವಪ್ರಸಾದ್, ಎಂ.ಬಸವರಾಜು, ಟಿ.ಸಿ.ಮಹೇಶ್, ಕುಮಾರ್, ಟಿ.ಆರ್.ಲೋಕೇಶ್, ಪುಟ್ಟಸ್ವಾಮಿ, ಮುದ್ದಮಾದೇಗೌಡ, ಜಿ.ಎಂ.ಮಹದೇವಸ್ವಾಮಿ, ಸಾಕಮ್ಮ, ಚಾಮಮ್ಮ, ಸಂಘದ ಸಹಾಯಕ ಆರ್.ಕಿಶೋರ್ ಕುಮಾರ್ ಹಾಜರಿದ್ದರು.


ವಾರ್ಷಿಕ ಮಹಾಸಭೆಯಲ್ಲಿ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಶತಾಯುಷಿ ಲಕ್ಕಪ್ಪ ಸ್ವಾಮೀಜಿ ನಿಧನ



ಹುಣಸೂರು, ಸೆ.18– ತಾಲೂಕಿನ ರತ್ನಪುರಿ ಗ್ರಾಮದ ವಿಶ್ವಶಾಂತಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಶತಾಯುಷಿ ಲಕ್ಕಪ್ಪ ಸ್ವಾಮೀಜಿ ಬುಧವಾರ ರಾತ್ರಿ ನಿಧನರಾದರು. ಮೃತರ ಅಂತ್ಯಕ್ರಿಯೆ ಗುರುವಾರ ವಿಶ್ವ ಶಾಂತಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ನೆರವೇರಿತು. ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ನಿಂಗರಾಜಪ್ಪ



ಬೆಟ್ಟದಪುರ, ಸೆ.18– ಪಿರಿಯಾಪಟ್ಟಣ ತಾಲೂಕಿನ ಮರೂರು ಗ್ರಾಮದ ನಿವಾಸಿ ನಿಂಗರಾಜಪ್ಪ(75) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ನಾಲ್ವರು ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಜಮೀನಿನಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವೀರಶೈವ ಲಿಂಗಾಯತ ಸಮಾಜದ ಬಂಧುಗಳು ಸಂತಾಪ ಸೂಚಿಸಿದ್ದಾರೆ.

ಮೈಸೂರು ದಸರಾ ಕುಸ್ತಿ ಪಂದ್ಯಾವಳಿ

ಪುಟಾಣಿ ಪೈಲ್ವಾನರಿಗೂ ಪರಾಕ್ರಮ ಪ್ರದರ್ಶಿಸುವ ಸದವಕಾಶ; ಅದಕ್ಕನುಸಾರ ಸಲ್ಲಲಿದೆ ಬಿರುದು-ಬಾವಲಿ

ಮೈಸೂರು, ಸೆ.18(ಎಂಕೆ)- ನಾಡಹಬ್ಬ ಮೈಸೂರು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಪುಟಾಣಿ ಪೈಲ್ವಾನರ ಪರಾಕ್ರಮ ಅನಾವರಣಕ್ಕೆ ವೇದಿಕೆ ಸಜ್ಜುಗೊಳಿಸಲಾಗಿದೆ...!

ಇದೇ ಮೊದಲ ಬಾರಿಗೆ ಕುಸ್ತಿ ಕಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 'ದಸರಾ ಕಂಠೀರವ', 'ದಸರಾ ಕೇಸರಿ', 'ದಸರಾ ಕಿಶೋರ', 'ದಸರಾ ಕಿಶೋರಿ', 'ದಸರಾ ಕುಮಾರ' ಜೊತೆಗೆ 'ಮೈಸೂರು ದಸರಾ ಬಾಲ ಕಂಠೀರವ', 'ಮೈಸೂರು ದಸರಾ ಬಾಲ ಕೇಸರಿ', 'ಮೈಸೂರು ದಸರಾ ಬಾಲ ಕಿಶೋರ', 'ಮೈಸೂರು ದಸರಾ ಬಾಲ ಕಿಶೋರಿ', 'ಮೈಸೂರು ದಸರಾ ಬಾಲ ಕುಮಾರ' ಮತ್ತು 'ಮೈಸೂರು ದಸರಾ ಬಾಲ ಕುಮಾರಿ' ಟೈಟಲ್ ಪ್ರಶಸ್ತಿಗಳನ್ನು ಪರಿಚಯಿಸಲಾಗಿದೆ.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಗಾದೆಯಂತೆ 15 ವರ್ಷದೊಳಗಿನ ಬಾಲಕರು ಹಾಗೂ 17 ವರ್ಷದೊಳಗಿನ ಬಾಲಕಿಯರಿಗೆ ಟೈಟಲ್ ಪಂದ್ಯಗಳನ್ನು ಆಯೋಜಿಸುವ ಮೂಲಕ ಕುಸ್ತಿ ಕಲೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ವರ್ಷ ಮಹತ್ವದ ಹೆಜ್ಜೆಯನ್ನಿಡಲಾಗಿದೆ.

ರೆಸ್ಲಿಂಗ್ ಫೆಡರೇಶನ್ ಆಫ್ ಇಂಡಿಯಾ, ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ನಿಯಮಗಳ ಆಧಾರದ ಮೇಲೆ ಕುಸ್ತಿ ಪಂದ್ಯಗಳು ನಡೆಯಲಿದ್ದು, ಟೈಟಲ್ ಪ್ರಶಸ್ತಿ ಪಂದ್ಯಗಳಲ್ಲಿ ಭಾಗವಹಿಸುವ ಬಾಲಕರ ವಯಸ್ಸು 2025ರ ಡಿ.31ರೊಳಗೆ 15 ಮತ್ತು 17 ವರ್ಷ ಮೀರಿರಬಾರದು. ಅಲ್ಲದೆ ಟೈಟಲ್ ಪ್ರಶಸ್ತಿ ಪಂದ್ಯಗಳಲ್ಲಿ ವಿಜಯಶಾಲಿಯಾಗುವ ಬಾಲಕ ಮತ್ತು ಬಾಲಕಿಯರಿಗೆ ಆಕರ್ಷಕ ಟ್ರೋಫಿ, ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಲು ದಸರಾ ಕುಸ್ತಿ ಉಪಸಮಿತಿ ನಿರ್ಧರಿಸಿದೆ.



ಪುಟಾಣಿ ಪೈಲ್ವಾನರ ಸಾಂದರ್ಭಿಕ ಚಿತ್ರ

> ದಸರಾ ಕುಸ್ತಿ ನೋಡಲು ಜನರು ಸೇರುತ್ತಿಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಅಲ್ಲದೆ ಮುಂದಿನ ಪೀಳಿಗೆಗೆ ಕುಸ್ತಿ ಕಲೆಯನ್ನು ಉಳಿಸುವ ಹಾಗೂ ಹೊಸ ಪೈಲ್ವಾನರ ಪ್ರೋತ್ಸಾಹಿಸುವ ದೃಷ್ಟಿಯಿಂದ ಬಾಲಕ ಮತ್ತು ಬಾಲಕಿಯರಿಗಾಗಿ ಹೊಸ ಟೈಟಲ್ ಪ್ರಶಸ್ತಿ ಪಂದ್ಯಗಳನ್ನು ಆಯೋಜನೆ ಮಾಡಲು ನಿರ್ಧರಿಸಲಾಗಿದೆ. ಇವತ್ತು ನೀರು ಹಾಕಿದರೆ, ಮುಂದೆ ಅದೇ ಗಿಡ-ಮರವಾಗಿ ಫಲಕೊಡುವಂತೆ ಕಿರಿಯ ಪೈಲ್ವಾನರನ್ನು ಪ್ರೋತ್ಸಾಹಿಸುವ ಮೊದಲ ಹೆಜ್ಜೆ ಇದಾಗಿದೆ.
> - ಎಲ್.ನಾಗೇಶ್, ಉಪವಿಶೇಷಾಧಿಕಾರಿ, ದಸರಾ ಕುಸ್ತಿ ಉಪಸಮಿತಿ

ಇದೇ ಮೊದಲು: ಮೈಸೂರು ದಸರಾ ಕುಸ್ತಿ ವೀಕ್ಷಣೆಗೆ ಬರುವ ಕುಸ್ತಿ ಅಭಿಮಾನಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅಲ್ಲದೆ ಹಿರಿಯ ಪೈಲ್ವಾನರು ಸಾಗಿದ ದಾರಿಯಲ್ಲಿ ಹೊಸ ಪೈಲ್ವಾನರನ್ನು ಬೆಳೆಸುವುದು ಮುಖ್ಯವಾಗಿದೆ. ಹಾಗೆಯೇ ಮಕ್ಕಳಲ್ಲಿ ಕುಸ್ತಿ ಮೇಲಿನ ಅಭಿಮಾನ ಹೆಚ್ಚಿಸುವ ದೃಷ್ಟಿಯಿಂದ ಇದೇ ಮೊದಲ ಬಾರಿಗೆ ದಸರಾ ಕುಸ್ತಿಯಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಟೈಟಲ್ ಪ್ರಶಸ್ತಿಗಳನ್ನು ನೀಡಲು ನಿರ್ಧರಿಸಲಾಗಿದೆ ಎಂದು ದಸರಾ ಕುಸ್ತಿ ಉಪಸಮಿತಿ ಉಪ ವಿಶೇಷಾಧಿಕಾರಿಯೂ ಆದ ಎಎಸ್‌ಪಿ ಎಲ್.ನಾಗೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರು ದಸರಾ ಬಾಲ ಕಿಶೋರ: 15 ವರ್ಷದೊಳಗಿನ ಬಾಲಕರ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಾಗಿದ್ದು, 38 ಕೆ.ಜಿ, 44 ಕೆ.ಜಿ ಹಾಗೂ 48 ಕೆ.ಜಿ ವಿಭಾಗದಲ್ಲಿ ಮೈಸೂರು ದಸರಾ ಬಾಲ ಕಿಶೋರ ಟೈಟಲ್ ಪ್ರಶಸ್ತಿಗೆ ಪಂದ್ಯಗಳು ನಡೆಯಲಿವೆ. ಹಾಗೆಯೇ 52 ರಿಂದ 57 ಕೆ.ಜಿ ಮತ್ತು 62 ಕೆ.ಜಿ ವಿಭಾಗದಲ್ಲಿ 'ಮೈಸೂರು ದಸರಾ ಬಾಲ ಕುಮಾರ' ಪ್ರಶಸ್ತಿಗೆ ಪಂದ್ಯಗಳು ನಡೆಯಲಿವೆ.

ಮೈಸೂರು ದಸರಾ ಬಾಲ ಕಿಶೋರಿ: 15 ವರ್ಷದೊಳಗಿನ ಬಾಲಕಿಯರಿಗಾಗಿ 39, 46, 50, 58 ಮತ್ತು 62 ಕೆ.ಜಿ ವಿಭಾಗದಲ್ಲಿ 'ಮೈಸೂರು ದಸರಾ ಬಾಲ ಕಿಶೋರಿ' ಹಾಗೂ 17 ವರ್ಷದೊಳಗಿನ ಬಾಲಕಿಯರಿಗೆ 49, 53, 57, 61 ಮತ್ತು 67 ಕೆ.ಜಿ ವಿಭಾಗದಲ್ಲಿ 'ಮೈಸೂರು ದಸರಾ ಬಾಲ ಕುಮಾರಿ' ಪಂದ್ಯಗಳು ನಡೆಯಲಿವೆ.

ಹಾಗೆಯೇ 17 ವರ್ಷದೊಳಗಿನ ಬಾಲಕರಿಗಾಗಿ 55, 60, 65 ಮತ್ತು 71 ಕೆ.ಜಿ ವಿಭಾಗದಲ್ಲಿ 'ಮೈಸೂರು ದಸರಾ ಬಾಲ ಕೇಸರಿ' ಹಾಗೂ 80 ರಿಂದ 92 ಕೆ.ಜಿ ವಿಭಾಗದಲ್ಲಿ 'ಮೈಸೂರು ದಸರಾ ಬಾಲ ಕಂಠೀರವ' ಪ್ರಶಸ್ತಿ ಪಂದ್ಯ ನಡೆಯಲಿದೆ

ಟೈಟಲ್ ಪ್ರಶಸ್ತಿಗಳ ಬಹುಮಾನ ವಿವರ

ಪಾಯಿಂಟ್ ಆಧಾರದಲ್ಲಿ ನಡೆಯುವ ರಾಜ್ಯಮಟ್ಟದ 'ದಸರಾ ಕಂಠೀರವ'(86 ಕೆ.ಜಿ ಮೇಲ್ಪಟ್ಟು ತೂಕ) ಪ್ರಶಸ್ತಿ ವಿಜೇತರಿಗೆ 15 ಸಾವಿರ ರೂ.ನಗದು ಬಹುಮಾನ ಹಾಗೂ ಒಂದು ಕಾಲು ಕೆ.ಜಿ ಬೆಳ್ಳಿಗದೆ, ದ್ವಿತೀಯ ಬಹುಮಾನ 12,500 ರೂ., ಮೊದಲ ತೃತೀಯ ಬಹುಮಾನ 10,500 ರೂ. ಹಾಗೂ ಎರಡನೇ ತೃತೀಯ ಬಹುಮಾನ 10 ಸಾವಿರ ರೂ.ನಗದು ಬಹುಮಾನ ನೀಡಲಾಗುವುದು. ಹಾಗೆಯೇ 'ದಸರಾ ಕೇಸರಿ'(74 ರಿಂದ 86 ಕೆ.ಜಿ) ಪ್ರಶಸ್ತಿ ವಿಜೇತರಿಗೆ 12,500 ರೂ.ನಗದು ಹಾಗೂ ಒಂದು ಕೆ.ಜಿ ಬೆಳ್ಳಿ ಗದೆ, 'ದಸರಾ ಕಿಶೋರ'(57 ರಿಂದ 65 ಕೆ.ಜಿ) 10 ಸಾವಿರ ರೂ. ಮತ್ತು ಅರ್ಧ ಕೆ.ಜಿ ಬೆಳ್ಳಿ ಗದೆ, 'ದಸರಾ ಕಿಶೋರಿ'(57 ರಿಂದ 76 ಕೆ.ಜಿ) 10 ಸಾವಿರ ರೂ. ಮತ್ತು ಅರ್ಧ ಕೆ.ಜಿ ಬೆಳ್ಳಿ ಗದೆ ಹಾಗೂ ಮೈಸೂರು ವಿಭಾಗ ಮಟ್ಟದ 'ದಸರಾ ಕುಮಾರ'(86 ಕೆ.ಜಿ ಮೇಲ್ಪಟ್ಟು) ಪ್ರಶಸ್ತಿ ವಿಜೇತರಿಗೆ 10 ಸಾವಿರ ರೂ. ಮತ್ತು ಮುಕ್ಕಾಲು ಕೆ.ಜಿ ಬೆಳ್ಳಿ ಗದೆ ನೀಡಲಾಗುವುದು.

ಇನ್ನರ್‌ವ್ಹೀಲ್ ಕ್ಲಬ್‌ನಿಂದ ದಸರಾ ಗಜಪಡೆ ಪರಿವಾರಕ್ಕೆ ಬೆಡ್‌ಶೀಟ್, ಬಟ್ಟೆ ವಿತರಣೆ



ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ವತಿಯಿಂದ ಬೆಡ್ ಶೀಟ್ ಮತ್ತು ಬಟ್ಟೆ ವಿತರಿಸಲಾಯಿತು.

ಮೈಸೂರು,ಸೆ.18(ಎಂಟಿವೈ)- ದಸರಾ ಗಜಪಡೆಯ ಮಾವುತರು, ಕಾವಾಡಿಗಳು ಕುಟುಂಬದ ಮಹಿಳೆಯರು ಹಾಗೂ ಮಕ್ಕಳಿಗೆ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ವತಿಯಿಂದ ಬೆಡ್ ಶೀಟ್ ಮತ್ತು ಬಟ್ಟೆ ವಿತರಿಸಲಾಯಿತು.

ಅರಮನೆ ಆವರಣದ ಆನೆ ಬಿಡಾರದ ಬಳಿ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸದಸ್ಯರು ಗಜಪಡೆಯ ಎಲ್ಲಾ 14 ಆನೆಗಳ ಮಾವುತರು, ಕಾವಾಡಿಗಳು ಹಾಗೂ ವಿಶೇಷ ಮಾವುತರ ಕುಟುಂಬದ ಮಹಿಳೆಯರಿಗೆ ಬೆಡ್‌ಶೀಟ್ ಹಾಗೂ ದೈನಂದಿನ ಬಳಕೆಯ ಬಟ್ಟೆ ಮಕ್ಕಳಿಗೆ ಆಟಿಕೆ ಹಾಗೂ ಲೇಖನ ಸಾಮಗ್ರಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಅಧ್ಯಕ್ಷೆ ಎ.ಜಿ.ಭಾರತಿ, ಕಾರ್ಯದರ್ಶಿ ಜ್ಯೋತಿ ಅಶೋಕ್, ಸದಸ್ಯರಾದ ವಿದ್ಯಾ, ಶರ್ಮಿಳಾ, ಸಂಧ್ಯಾ, ಕವಿತಾ, ಡಾ.ಅನುಶ್ರೀ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ 'ನಮ್ಮ ಮೈಸೂರು ಸ್ವಚ್ಛ ಮೈಸೂರು' ವಾಹನ ಜಾಥಾ

ಮೈಸೂರು,ಸೆ.18(ಜಿಎ)-ದಸರಾ ವೇಳೆ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲು 'ನಮ್ಮ ಮೈಸೂರು ಸ್ವಚ್ಛ ಮೈಸೂರು' ವಾಹನ ಜಾಥಾ ಸೆ.20ರಂದು ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟಾ ರಾಕ್ಟರ್ ಸದಸ್ಯ ವೆಲ್ಕಿನ್ ಶೆಲೆಫ್ ಈ ವಿಷಯ ತಿಳಿಸಿ, ದಸರಾ ಸಮೀಪಿಸುತ್ತಿದ್ದು, ನಗರದಲ್ಲಿ ತ್ಯಾಜ್ಯ ಬಿಸಾಡುವ ಸಾಧ್ಯತೆ ಇರುತ್ತದೆ. ಇದು ನಗರದ ಸ್ವಚ್ಛತೆಗೆ ಅಡ್ಡಿಯುಂಟು ಮಾಡುತ್ತದೆ. ಹೀಗಾಗಿ ರೋಟರಿ ಸಂಸ್ಥೆಯ ಚಾಮುಂಡಿ ವಲಯದಿಂದ ಸೆ.20ರಂದು ನಗರದಲ್ಲಿ ನಮ್ಮ ಮೈಸೂರು ಸ್ವಚ್ಛ ಮೈಸೂರು ವಾಹನ ಜಾಥಾ ಹಮ್ಮಿಕೊಳ್ಳಲಾಗುತ್ತಿದೆ. ಅಂದು ಬೆಳಗ್ಗೆ 8ಕ್ಕೆ ಮುಡಾ ಬಳಿಯ ಐಡಿಯಲ್ ಜಾವಾ ರೋಟರಿ ಶಾಲೆ ಬಳಿ ಜಾಥಾಕ್ಕೆ ಜಿಲ್ಲಾ ಗವರ್ನರ್ ಪಿ.ಕೆ.ರಾಮಕೃಷ್ಣ ಚಾಲನೆ ನೀಡಲಿದ್ದಾರೆ. ಇದರಲ್ಲಿ ದ್ವಿಚಕ್ರ ಸೇರಿದಂತೆ ಸುಮಾರು 150 ವಾಹನಗಳು ಪಾಲ್ಗೊಳ್ಳಲಿವೆ. ಮೈಸೂರು ಲೇಡಿಸ್ ತಂಡದ ಹೆಣ್ಣು ಮಕ್ಕಳು ಸಹಾ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಚರಿತಾಗೌಡ, ಶಕುಂತಲಾ ಎಲಿ ಜಬೆತ್, ಯಶ್ವಂತ್, ಗೌತಮ್ ಇದ್ದರು.

ದೀಪಾಲಂಕಾರದ ನಡುವೆ ಭೀಕರ ಬೈಕ್ ವ್ಹೀಲಿಂಗ್! ಪುಂಡರ ಹಾವಳಿಗೆ ಬ್ರೇಕ್ ಹಾಕಲೇಬೇಕಿದೆ!

ಮೈಸೂರು, ಸೆ.18(ವಿವಿಹೆಚ್)- ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾಡಹಬ್ಬ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಇತ್ತ ಸುರಕ್ಷಾ ಹಾಗೂ ಸುಂದರ ದಸರಾ ಬಗ್ಗೆ ಪೊಲೀಸ್ ಇಲಾಖೆ ಕಾರ್ಯೋನ್ಮುಖರಾಗಿದ್ದರೆ, ಮತ್ತೊಂದೆಡೆ ಪುಂಡ ಪೋಕರಿಗಳ ಹಾವಳಿ ಹೆಚ್ಚಾಗಿದೆ.

ರಾಜ್ಯ ರಾಜಧಾನಿ ಬೆಂಗಳೂರು ಮಾದರಿಯಲ್ಲಿ ಮೈಸೂರಿನಲ್ಲಿಯೂ ವ್ಹೀಲಿಂಗ್ ಹಾವಳಿ ಹೆಚ್ಚಾಗಿದೆ. ಮೈಸೂರಿನ ಜಂಬೂ ಸವಾರಿ ಮಾರ್ಗ ಸಯ್ಯಾಜಿ ರಾವ್ ರಸ್ತೆಯಲ್ಲಿ ಗುರುವಾರ ಸಂಜೆ 7.30ರ ವೇಳೆಗೆ ಪುಂಡ ಪೋಕರಿಗಳು ಬೈಕ್‌ನಲ್ಲಿ ವ್ಹೀಲಿಂಗ್ ಮಾಡುವುದು ಕಂಡುಬಂದಿದೆ.

ದಸರಾ ಮಹೋತ್ಸವ ಅಂಗವಾಗಿ ಎಲ್ಲೆಡೆ ದೀಪಾಲಂಕಾರ ಮಾಡುತ್ತಿದ್ದು, ಅವುಗಳ ಪರೀಕ್ಷಾ ಕಾರ್ಯವೂ ಭರದಿಂದ ಸಾಗಿವೆ. ಇದನ್ನು ವೀಕ್ಷಿಸಲು ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಸಂಜೆ ವೇಳೆ ನೆರೆದಿದ್ದಾರೆ. ಅಲ್ಲದೇ ಕಚೇರಿ ಕೆಲಸ ಮುಗಿಸಿ ಮನೆಗೆ ತೆರಳುವವರ ಸಂಖ್ಯೆಯೂ ಈ ವೇಳೆ ಅಧಿಕವಾಗಿರುತ್ತದೆ. ಈ ವೇಳೆ ಪ್ರಮುಖ ರಸ್ತೆಯಲ್ಲಿಯೇ ವ್ಹೀಲಿಂಗ್ ಮಾಡಿ ಎಲ್ಲರನ್ನು ಭಯಭೀತಗೊಳಿಸಲಾಗುತ್ತಿದೆ.

ನಡೆದದ್ದೇನು: ಎರಡು ಬೈಕ್‌ಗಳಲ್ಲಿ ಐವರು ಹೆಲ್ಮೆಟ್ ಧರಿಸದೇ ವೇಗವಾಗಿ ವಾಹನ ಚಲಾಯಿಸುತ್ತಾರೆ. ಒಂದು ಬೈಕ್‌ನಲ್ಲಿ ಇಬ್ಬರು ಕುಳಿತು ವ್ಹೀಲಿಂಗ್ ಮಾಡುತ್ತಿದ್ದರೇ, ಮತ್ತೊಂದು ಬೈಕ್‌ನಲ್ಲಿ ಕುಳಿತಿದ್ದವರು ಅವರಿಗೆ ಸಹಕರಿಸುತ್ತಾ ವೀಡಿಯೋ ಚಿತ್ರೀಕರಣ ಮಾಡುತ್ತಿದ್ದರು. ಅವರ ವೇಗಕ್ಕೆ ಅಕ್ಕಪಕ್ಕದಲ್ಲಿ ತೆರಳುತ್ತಿದ್ದ ವಾಹನ ಸವಾರರು ಬೆಚ್ಚಿ ಹಿಂದೆ ಸರಿದದ್ದು ಕಂಡುಬಂದಿತು.

ದಸರಾ ವೇಳೆ ವ್ಹೀಲಿಂಗ್ ಪುಂಡರ ಹಾವಳಿ ಹೆಚ್ಚಾಗಿಯೇ ಇರುತ್ತದೆ. ದೀಪಾಲಂಕಾರ ವೀಕ್ಷಣೆಗೆ ಬರುವ ನೆಪದಲ್ಲಿ ವ್ಹೀಲಿಂಗ್ ಮಾಡುವುದು ಕಂಡುಬರುತ್ತಿದೆ. ಪೊಲೀಸ್ ಇಲಾಖೆ ಈ ಸಂಬಂಧ ಕಾನೂನು ಕ್ರಮ ಕೈಗೊಳ್ಳಬೇಕಿದೆ. ಆ ಮೂಲಕ ಪುಂಡರ ಹಾವಳಿಗೆ ಬ್ರೇಕ್ ಹಾಕಬೇಕಿದೆ.

ಸಹಜ ರಂಗ ತರಬೇತಿ ಶಿಬಿರ ಸಮಾರೋಪ

ನಿರಂತರ ರಂಗ ತಂಡದಿಂದ 'ಜನಗಣಮನ' ನಾಟಕ ಪ್ರದರ್ಶನ



ಮೈಸೂರು, ಸೆ.18- ನೈತಿಕತೆ ಇಲ್ಲವಾದರೆ ಬದುಕು ಶಿಥಿಲವಾಗುತ್ತದೆ ಎಂದು ಹಿರಿಯ ಲೇಖಕ ತುಕಾರಾಂ ಹೇಳಿದರು.

ನಗರದ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಗುರುವಾರ ನಡೆದ ನಿರಂತರ ಫೌಂಡೇಶನ್‌ನ 'ಸಹಜ ರಂಗ ತರಬೇತಿ ಶಿಬಿರ'ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನೈತಿಕತೆ ಬದುಕನ್ನು ಗಟ್ಟಿಗೊಳಿಸುತ್ತದೆ. ಆದರೆ ಆ ಮೌಲ್ಯವೇ ಇಲ್ಲವಾದರೆ ಒಳ-ಹೊರ ಬದುಕು ಶಿಥಿಲವಾಗುತ್ತದೆ. ಆದರೆ ನಿರಂತರ ತಂಡವು ಕಾಲಕ್ಕೆ ಕನ್ನಡಿ ಹಿಡಿಯುವ ಕೆಲಸ ಮಾಡುತ್ತಿದೆ ಎಂದು ಪ್ರಶಂಸಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ರಂಗಭೂಮಿಯ ಶಕ್ತಿ ಸಮಾಜಕ್ಕೆ ದಾರಿದೀಪವಾಗಬಲ್ಲದು. ಸಹಜ ರಂಗ ಮತ್ತು ನಿರಂತರ ಎಂಬ ಹೆಸರೇ ರಂಗಭೂಮಿಯ ಧ್ಯೇಯವನ್ನು ಪ್ರತಿಬಿಂಬಿಸುತ್ತವೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ಸಲಹೆಗಾರ ಬಸವರಾಜ ದೇವನೂರು ಮಾತನಾಡಿ, ಜಾತಿ ಸಮಸ್ಯೆ ಗಾಢವಾಗಿರುವ ಈ ಕಾಲದಲ್ಲಿ, ಈ ರಂಗ ಸಂಸ್ಥೆ ವ್ಯವಸ್ಥೆಯೊಂದಿಗೆ ರಾಜಿಯಾಗದೆ ಬೆಳೆಯುತ್ತಿರುವುದು ಶ್ಲಾಘನೀಯ. ಜನಾಂಗೀಯ ಭಾವೈಕ್ಯತೆ ಸಾರುವ ನಾಟಕಗಳನ್ನು ಸಮಾಜಕ್ಕೆ ಹೆಚ್ಚಾಗಿ ನೀಡಬೇಕಾಗಿದೆ ಎಂದು ಹೇಳಿದರು.

ಶಿಬಿರದ ನಿರ್ದೇಶಕರಾದ ಎಂ.ಎಂ.ಸುಗುಣ ಮಾತನಾಡಿ, ರಂಗಭೂಮಿಗೆ ಭೂಮಿ ತೂಕದ ಶಕ್ತಿ ಇದೆ ಎಂಬ ಆಶಯದೊಂದಿಗೆ ಆರಂಭವಾದ ಸಹಜ ರಂಗ, ಈ ಬಾರಿ 'ಸಂವಿಧಾನ ಮತ್ತು ಅದರ ಮೌಲ್ಯಗಳು' ವಿಷಯವನ್ನು ಕೇಂದ್ರೀಕರಿಸಿ, ಶಿಬಿರಾರ್ಥಿಗಳಿಗೆ ವಿಶೇಷ ರಂಗ ರೂಪಕವನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಬಳಿಕ ನಿರಂತರ ರಂಗತಂಡದಿಂದ 'ಜನಗಣಮನ' ನಾಟಕ ಪ್ರದರ್ಶನವಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತನಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ) + ಕಿಸ್ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಜಾಲಿ ಎಲ್‌ಎಲ್‌ಬಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಏಳುಮಲೈ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಶಕ್ತಿ ತಿರುಮಗನ್ (ತ)	4 ಪ್ರದರ್ಶನಗಳು
ಸಂಗಂ	
ಕಮಲ್ ಶ್ರೀದೇವಿ (ಕ)	4 ಪ್ರದರ್ಶನಗಳು
ಲಿಡೋ	
ಸು ಫ್ರಮ್ ಸೋ (ಕ) + ತನಾಲ್ (ತ)	2+2 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಎಕ್ಕ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ -2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ -2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ -2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಮಾನ್ಸೂನ್ ರೇಸ್

6ನೇ ದಿನ, ಶುಕ್ರವಾರ, 19-09-2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಕುಮಾರಧಾರ ಪ್ಲೇಟ್-1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಅಡೋರ್‌ನಮೆಂಟ್ 2. ಸದರನ್ ಅರಿಸ್ಟೋಕ್ರಾಟ್

II. ಸಿದ್ದಾಪುರ್ ಪ್ಲೇಟ್ ಡಿII-1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಇಮ್ಮೊರ್ಟಲ್ ಬ್ಯೂಟಿ 2. ವರ್ಸಸ್

III. ಸಿವಿಲ್ ಸರ್ವಿಸಸ್ ಟ್ರೋಫಿ-1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1 ಫ್ಲಾಮಿಂಗ್ ಸೋರ್ಡ್ 2 ಸದರನ್ ಫೋರ್ಸ್

IV. ಮಹಾರಾಜಸ್ ಕಪ್-1600 ಮೀ. 4 ವರ್ಷ (ಟರ್ಮ್ಸ್) ಮ.4.00ಕ್ಕೆ
1. ಮೇನ್ ಮ್ಯಾಜಿಕ್ 2. ಆಫ್ರಿಕನ್ ಗೋಲ್ಡ್

V. ಸಿದ್ದಾಪುರ್ ಪ್ಲೇಟ್ ಡಿI-1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಮಲ್ಟಿ ಸೈಡ್ ಡೆ 2. ಸ್ಮೈಲ್ ಬ್ಯೂಟಿ

VI. ಸೈಚ್ಚಿಸ್ ಸ್ಟ್ರೆಂಥ್ ಪ್ಲೇಟ್-1600 ಮೀ. ರೇಟೆಡ್ 20 ರಿಂದ 45. ಮೈಸೂರ್ ಬೇಸ್ಡ್ ಹಾರ್ಸ್. ಸಂ.5.00ಕ್ಕೆ
1 ಟೈಗರ್ ಕಿಂಗ್ 2 ಕೂರ್ಗ್ ಜನರಲ್

ದಿನದ ಅತ್ಯುತ್ತಮ	ಮೇನ್ ಮ್ಯಾಜಿಕ್
ಡಬ್ಬಲ್	ಅಡೋರ್‌ನಮೆಂಟ್, ಫ್ಲಾಮಿಂಗ್ ಸೋರ್ಡ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5 ಮತ್ತು 6
I ಟ್ರಬಲ್	1, 2 ಮತ್ತು 3
II ಟ್ರಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ಇ-ಖಾತೆಯಲ್ಲಿ ಮೈಸೂರು ರಾಜ್ಯದಲ್ಲೇ ನಂಬರ್ ಒನ್

60 ಸಾವಿರ ಗಡಿ ದಾಟಿ ಸಾಧನೆ

ಮೈಸೂರು, ಸೆ.18- 'ಇ-ಖಾತೆ' ರಚಿಸುವಲ್ಲಿ ರಾಜ್ಯದಲ್ಲೇ ಮೈಸೂರು ಅಗ್ರಸ್ಥಾನ ಕಾಯ್ದುಕೊಂಡಿದ್ದು, ಇಂದು 60 ಸಾವಿರದ ಗಡಿ ದಾಟುವ ಮೂಲಕ ಸಾಧನೆ ಮಾಡಿದೆ.

ಇಂದು 411 ಎ-ಖಾತೆ ಹಾಗೂ 138 ಬಿ-ಖಾತೆ ನೋಂದಣಿಯಾಗಿದ್ದು, ಈವರೆಗೆ 41,161 ಎ-ಖಾತೆ ಹಾಗೂ 18,949 ಬಿ-ಖಾತೆ ಸೇರಿ ಒಟ್ಟು 60,110 ಇ-ಖಾತೆ ನೋಂದಣಿಯಾಗಿದೆ. ಇದರೊಂದಿಗೆ ಅಗ್ರಸ್ಥಾನ ಕಾಯ್ದುಕೊಂಡಿದೆ.

ಈವರೆಗೆ ಹಾಸನದಲ್ಲಿ 15,286, ಮಂಡ್ಯದಲ್ಲಿ 10346, ಕೊಡಗಿನಲ್ಲಿ 3703 ಹಾಗೂ ಚಾಮರಾಜನಗರದಲ್ಲಿ 2896 ಇ-ಖಾತೆ ನೀಡಲಾಗಿದೆ. ಬೆಳಗಾವಿ 54,693 ಇ-ಖಾತೆಗಳೊಂದಿಗೆ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದ್ದು, ಬೆಂಗಳೂರು ನಗರ 46,829 ಇ-ಖಾತೆಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 4,06,391 ಎ-ಖಾತೆ ಹಾಗೂ 2,97,998 ಬಿ-ಖಾತಾ ಸೇರಿ ಒಟ್ಟು 7,04,389 ಖಾತೆ ನೋಂದಣಿಯಾಗಿದೆ.

ಮೈಸೂರಲ್ಲಿ ಉತ್ತಮ ಸ್ಪಂದನೆ: ಇ-ಆಸ್ತಿ ತಂತ್ರಾಂಶದಲ್ಲಿ ನೋಂದಣಿ ಮಾಡಿಸಿ, ಇ-ಖಾತೆ ಪಡೆಯುವುದು ಕಡ್ಡಾಯವಾದಾಗಿನಿಂದಲೂ ಮೈಸೂರು ಮುಂಚೂಣಿಯಲ್ಲೇ ಇದೆ. ಕಳೆದ ವರ್ಷಾಂತ್ಯದಲ್ಲಿ ಸುಮಾರು 22 ಸಾವಿರ ಆಸ್ತಿ ಮಾಲೀಕರು ಮಾತ್ರ ಇ-ಖಾತೆ ಪಡೆದಿದ್ದರು. ಇ-ಖಾತೆ ಅಭಿಯಾನ ಆರಂಭವಾದಾಗಿನಿಂದ ನೋಂದಣಿ ಸಂಖ್ಯೆ ಹೆಚ್ಚುತ್ತಾ ಬಂದಿದೆ. ಅದರಲ್ಲೂ ಇ-ಖಾತೆಗೆ ಅಗತ್ಯವಾದ ದಾಖಲೆಗಳ ಮಾಹಿತಿಯುಳ್ಳ ಕರಪತ್ರವನ್ನು ಮನೆ ಮನೆಗೆ ಹಂಚುತ್ತಿರುವುದರಿಂದ ಇ-ಖಾತೆ ಪಡೆಯಲು ಹೆಚ್ಚು ಮಂದಿ ಮುಂದೆ ಬರುತ್ತಿದ್ದಾರೆ.

ಮಹಾನಗರ ಪಾಲಿಕೆ, ಪುರಸಭೆ ಇನ್ನಿತರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಆಸ್ತಿ ನೋಂದಣಿ ಮಾಡಲು ಇ-ಖಾತಾ ಪಡೆಯುವುದು ಕಡ್ಡಾಯವಾಗಿರುವುದರಿಂದ ಆಸ್ತಿ ಮಾರಾಟ ಹಾಗೂ ಖರೀದಿಗೆ ಈ ದಾಖಲೆ ಅತ್ಯಗತ್ಯವಾಗಿದೆ. ಇ-ಖಾತೆ ಮಾಡಿಸಿಕೊಳ್ಳುವವರು ತಮ್ಮ ಆಸ್ತಿಯ ಎಲ್ಲಾ ಬಾಕಿ ಕಂದಾಯ ಹಾಗೂ ಇನ್ನಿತರ ಶುಲ್ಕಗಳನ್ನು ಪಾವತಿಸುವುದರಿಂದ ಸ್ಥಳೀಯ ಸಂಸ್ಥೆಗಳ ಆದಾಯವೂ ಹೆಚ್ಚಳವಾಗಿದೆ.

ನಾಳೆ ಆಧ್ಯಾತ್ಮಿಕ ಚಿಂತನ-ಮಂಥನ

ಮೈಸೂರು, ಸೆ.18- ನಗರದ ಸುಯೋಗ್ ನರ್ಸಿಂಗ್ ಕಾಲೇಜ್ ಹಾಗೂ ಸುಯೋಗ್ ಕ್ಲಿನಿಕಲ್ ಸೊಸೈಟಿ ಸಹಯೋಗದಲ್ಲಿ ಸುಯೋಗ್ ಆಸ್ಪತ್ರೆ ಆವರಣದಲ್ಲಿ ಸೆ.20ರಂದು ಬೆಳಗ್ಗೆ 11ಕ್ಕೆ ಆಧ್ಯಾತ್ಮಿಕ ಚಿಂತನ-ಮಂಥನ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಆಧ್ಯಾತ್ಮಿಕ ಚಿಂತಕ, ಯೋಗಿ ಶ್ರೀ ಶ್ರೀನಿವಾಸ ಅರ್ಕ ಅವರು 'ಆಧ್ಯಾತ್ಮಿಕ ಆರೋಗ್ಯಕ್ಕಾಗಿ ದೇಹ, ಮನಸ್ಸು ಮತ್ತು ಆತ್ಮಗಳ ಪರಸ್ಪರ ಸಂಯೋಜನೆ ಹೇಗೆ?' ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮ ಉದ್ಘಾಟಿಸಲಿರುವ ವಿಧಾನಪರಿಷತ್‌ನ ನೂತನ ಸದಸ್ಯರಾದ ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಅವರನ್ನು ಆಸ್ಪತ್ರೆ ವತಿಯಿಂದ ಅಭಿನಂದಿಸಲಾಗುವುದು. ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಟ್ರಸ್ಟಿ ಸುಧಾ ಯೋಗಣ್ಣ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಜಾತಿ ಸಮೀಕ್ಷೆ ವೇಳೆ 'ಲಿಂಗಾಯತ ಪಂಚಮಸಾಲಿ'; ಧರ್ಮದ ಕಾಲಂನಲ್ಲಿ 'ಹಿಂದೂ' ಎಂದು ನಮೂದಿಸಿ

ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಪಂಚಮಸಾಲಿ ಲಿಂಗಾಯತರಿಗೆ ಸಲಹೆ

ಮೈಸೂರು, ಸೆ.18(ಬಿಎಲ್‌ಯು)- ಸೆಪ್ಟೆಂಬರ್ 22 ರಿಂದ ಆರಂಭವಾಗುವ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆಯಲ್ಲಿ ಪಂಚಮಸಾಲಿ ಲಿಂಗಾಯತರು ಧರ್ಮದ ಕಾಲಂನಲ್ಲಿ ಹಿಂದೂ ಎಂತಲೂ, ಜಾತಿ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂದು ನಮೂದಿಸುವಂತೆ ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಬಿಜೆಪಿ ಮುಖಂಡ ಕೇಬಲ್ ಮಹೇಶ್ ಅವರ ಮನೆಗೆ ಆಗಮಿಸಿದ ಸಂದರ್ಭದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಮೀಕ್ಷೆ ಸಂದರ್ಭದಲ್ಲಿ ಕ್ರಮ ಸಂಖ್ಯೆ ಎ-0868 ಅನ್ನು ಪರಿಗಣಿಸುವಂತೆ ಮತ್ತೊಮ್ಮೆ ಸಲಹೆ ನೀಡಿದರು.

ಇಡೀ ರಾಜ್ಯದಲ್ಲಿ ಲಿಂಗಾಯತ ಪಂಚಮಸಾಲಿ ಸಮುದಾಯದವರು ಶೇಕಡ 80 ರಷ್ಟು ಇದ್ದಾರೆ. 1994 ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ 84 ಲಕ್ಷ ಲಿಂಗಾಯತ ಪಂಚಮಸಾಲಿ ಸಮುದಾಯದವರು ಇದ್ದರು. ಆದರೆ ಈಗ ಕೋಟಿ ದಾಟಿದೆ. ಇದರಿಂದ ಇದೂವರೆಗೆ ಲಿಂಗಾಯತ ಪಂಚಮಸಾಲಿ ಎಂದು ಗುರುತಿಸಿಕೊಂಡಿರುವ ನಮ್ಮ ಸಮುದಾಯದವರು ಧರ್ಮದ ವಿಚಾರ ಬಂದಾಗ ಹಿಂದೂ ಎಂತಲೂ, ಜಾತಿ ವಿಚಾರ ಬಂದಾಗ ಲಿಂಗಾಯತ ಪಂಚಮಸಾಲಿ ಎಂದು ಗುರುತಿಸಿಕೊಳ್ಳಬೇಕು ಎಂದು ಒತ್ತಿ ಹೇಳಿದರು.

- ▶ ರಾಜ್ಯದಲ್ಲಿ ಲಿಂಗಾಯತ ಪಂಚಮಸಾಲಿಯವರು ಶೇಕಡ 80 ರಷ್ಟಿದ್ದಾರೆ
- ▶ ಜಾತಿ ಕಾಲಂನಲ್ಲಿ ಯಾವ ಜಾತಿಯೆಂದು ನಮೂದಿಸಿ, ಇತರೆ ನಿರಾಕರಿಸಿ
- ▶ ಅಖಿಲ ಭಾರತ ವೀರಶೈವ ಮಹಾಸಭಾದಿಂದ ಗೊಂದಲ
- ▶ ಮತಾಂತರಗೊಂಡ ಕ್ರಿಶ್ಚಿಯನ್‌ರಲ್ಲಿ ಮೂಲ ಜಾತಿ ಉಲ್ಲೇಖಕ್ಕೆ ವಿರೋಧ

ಲಿಂಗಾಯತ ಪಂಚಮಸಾಲಿ ಸಮುದಾಯದವರು ಶೇಕಡ 80 ರಷ್ಟಿದ್ದರೆ, ವೀರಶೈವ ಸೇರಿದಂತೆ ಇತರೆ ಉಪ ಜಾತಿಯವರು ಶೇಕಡ 20 ರಷ್ಟು ಮಾತ್ರ ಇದ್ದಾರೆ. ಇದರಿಂದ ಲಿಂಗಾಯತರಲ್ಲಿ ಪಂಚಮಸಾಲಿ ಲಿಂಗಾಯತರ ಸಂಖ್ಯೆಯೇ ಹೆಚ್ಚು ಎಂದರು.

ಆದರೆ ಈ ವಿಚಾರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದವರು ಧರ್ಮದ ವಿಚಾರ ಪ್ರಸ್ತಾಪಿಸಿ ಗೊಂದಲ ಮೂಡಿಸುತ್ತಿದ್ದಾರೆ. ಸಮೀಕ್ಷೆ ವೇಳೆ ವೀರಶೈವ ಲಿಂಗಾಯತ ಎಂದು ನಮೂದಿಸುವಂತೆ ಸಲಹೆ ನೀಡುತ್ತಿದ್ದಾರೆ. ಈ ಮೂಲಕ ಲಿಂಗಾಯತರ ಒಗ್ಗಟ್ಟನ್ನು ಛಿದ್ರಗೊಳಿಸುತ್ತಿದ್ದಾರೆ ಎಂದು ಸ್ವಾಮೀಜಿ ಆರೋಪಿಸಿದರು.

ವೀರಶೈವ ಮಹಾಸಭಾದವರು ನೀಡುವ ಸಲಹೆಯನ್ನು ತಿರಸ್ಕರಿಸಿ ಎಲ್ಲರೂ ಲಿಂಗಾಯತ ಪಂಚಮಸಾಲಿ ಎಂದು ಸಮೀಕ್ಷೆಯಲ್ಲಿ ನಮೂದಿಸಬೇಕು. ಇದರಿಂದ ಸಂಖ್ಯಾಬಲದಲ್ಲಿ ನಾವೇ ಅಗ್ರಸ್ಥಾನದಲ್ಲಿ ಇರುತ್ತೇವೆ. ಇದರಿಂದ ಸರ್ಕಾರದಿಂದ ದೊರೆಯುವ ಮೀಸಲಾತಿ, ಅನುದಾನ ಸೇರಿದಂತೆ ಎಲ್ಲಾ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ವಚನಾನಂದ ಶ್ರೀ

ಈ ವಿಚಾರವನ್ನು ನಾವು ಸುಖಾಸುಮ್ಮನೆ ಹೇಳುತ್ತಿಲ್ಲ. ಕರ್ನಾಟಕದ 16 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಲಿಂಗಾಯತ ಪಂಚಮಸಾಲಿಗಳ ಅಭಿಪ್ರಾಯ ಪಡೆದು ಸಲಹೆ ನೀಡುತ್ತಿದ್ದೇವೆ ಎಂದು ಹೇಳಿದರು.

ಲಿಂಗಾಯತ ಪಂಚಮ ಸಾಲಿಗೆ ಸಂಬಂಧಿಸಿದಂತೆ ಪರ್ಯಾಯವಾಗಿ ಯಾವುದೇ ಹೆಸರು ಇದ್ದರೂ ಎಲ್ಲರೂ ಅದನ್ನು ಉಲ್ಲೇಖಿಸದೆ ಲಿಂಗಾಯತ ಪಂಚಮಸಾಲಿ ಎಂದು ಉಲ್ಲೇಖ ಮಾಡಬೇಕು ಎಂದು ತಿಳಿಸಿದರು.

ನಾವು ಸನಾತನ ಹಿಂದೂ ಧರ್ಮದವರು ಎಂದು ಕೆಲವರು ವಾದ ಮಾಡುತ್ತಾರೆ. ಆದರೆ ಜಾತಿ ವಿಚಾರ ಬಂದಾಗ ಇತರೆ ಎಂದು ಹೇಳುತ್ತಾರೆ. ಆದರೆ ಯಾವುದೇ ಕಾರಣಕ್ಕೂ ಇತರೆ ಎಂದು ಉಲ್ಲೇಖಿಸಬಾರದು. ಇತರೆ ಎಂಬ ಕಾಲಂನಲ್ಲಿ ನಮೂದು ಮಾಡಿದರೆ ಅವರು ಯಾವುದೇ ಜಾತಿಗೂ ಸೇರದೆ ಅತಂತ್ರಕ್ಕೊಳಗಾಗಬೇಕಾಗುತ್ತದೆ ಎಂದು ಸ್ವಾಮೀಜಿ ಎಚ್ಚರಿಸಿದರು. ಸರ್ಕಾರದಿಂದ ಧರ್ಮಕ್ಕೆ ಮಾನ್ಯತೆ ಸಿಕ್ಕಾಗ ಬೇಕಾದರೆ ಧರ್ಮವನ್ನು ಪರಿಗಣಿಸಲಿ. ಆದರೆ ಈಗ ಜಾತಿ ಹೆಸರು ಬಿಟ್ಟು, ಧರ್ಮವನ್ನು ಮಾತ್ರ ಉಲ್ಲೇಖಿಸಿದರೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದರು.

ಇದರ ಮಧ್ಯೆ ಮತಾಂತರಗೊಂಡ ಕ್ರಿಶ್ಚಿಯನ್‌ರನ್ನು ಮೂಲ ಜಾತಿ ಮೂಲಕ ಉಲ್ಲೇಖಿಸಲಾಗುತ್ತಿದೆ. ಲಿಂಗಾಯತ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್ ಎಂದು ಸಮೀಕ್ಷೆಯಲ್ಲಿ ಉಲ್ಲೇಖಿಸಬಾರದು. ಇದಕ್ಕೆ ನಮ್ಮ ತೀವ್ರ ವಿರೋಧವಿದೆ. ಕ್ರಿಶ್ಚಿಯನ್ನರು ಯಾವ ಧರ್ಮದಲ್ಲಿರುತ್ತಾರೋ ಅಲ್ಲೇ ಇದ್ದು ಅವರ ಧರ್ಮವನ್ನು ಉಲ್ಲೇಖಿಸಿಕೊಳ್ಳಲಿ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಸಮೀಕ್ಷೆ ಅನವಶ್ಯಕವಾಗಿದೆ. ಇದರಿಂದ ಯಾರಿಗೂ ಪ್ರಯೋಜನ ಆಗುವುದಿಲ್ಲ. ಯಾವುದೇ ಹೊಸ ಜಾತಿ ಅಥವಾ ಧರ್ಮಕ್ಕೆ ಕಾನೂನು ಬದ್ಧವಾಗಿ ಸೇರ್ಪಡೆ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ. ಇದರಿಂದ ರಾಜ್ಯ ಸರ್ಕಾರದ ಸಮೀಕ್ಷೆಯಿಂದ ಯಾರಿಗೂ ಪ್ರಯೋಜನವಿಲ್ಲ ಎಂದು ಶ್ರೀ ವಚನಾನಂದ ಸ್ವಾಮೀಜಿ ಪುನರುಚ್ಚರಿಸಿದರು.

ಎಂಎಲ್‌ಸಿ ವಿಶ್ವನಾಥ್ ಉಂಡ ಮನೆಗೆ ದ್ರೋಹ ಬಗೆದವರು!

● ಕುರುಬ ಸಂಘದ ಮುಖಂಡ ಶಿವಣ್ಣ ಕಟು ಟೀಕೆ
● ಸಿಎಂ ಸಿದ್ದರಾಮಯ್ಯ ವಿರುದ್ಧ ಹೇಳಿಕೆಗೆ ಖಂಡನೆ

ಮೈಸೂರು, ಸೆ.18(ಎಂಟಿವೈ)– ಉಂಡ ಮನೆಗೆ ದ್ರೋಹ ಬಗೆಯುವ ಮತ್ತು ಮನೆಗೆ ಕಲ್ಲು ಹೊಡೆಯುವ ಮನಃಸ್ಥಿತಿಯುಳ್ಳ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅವರಿಗೆ ಪ್ರಚಾರದ ಗೀಳು ಹೆಚ್ಚಾಗಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟೀಕಿಸಿ ದೊಡ್ಡ ವ್ಯಕ್ತಿ ಆಗುತ್ತೇನೆ ಎಂಬ ಭ್ರಮೆಯಲ್ಲಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮುಖಂಡ, ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ ಟೀಕಿಸಿದ್ದಾರೆ.

ಎಂ.ಶಿವಣ್ಣ

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂಎಲ್‌ಸಿ ಅಡಗೂರು ಹೆಚ್.ವಿಶ್ವನಾಥ್ ಮಾತಿಗೆ ಸಮುದಾಯದಲ್ಲಿ ಯಾವುದೇ ಮಹತ್ವವಿಲ್ಲದಂತಾಗಿದೆ. ಬಾಯಿ ಚಪಲಕ್ಕಾಗಿ ವಿಶ್ವನಾಥ್ ಅವರು ಕಾಗಿನೆಲೆ ಪೀಠದ ಗುರುಗಳು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಟೀಕಿಸಿರುವುದನ್ನು ಕುರುಬ ಸಮುದಾಯ ಖಂಡಿಸುತ್ತದೆ. ವಿಶ್ವನಾಥ್ ಅವರನ್ನು ಇದುವರೆಗೂ ಒಬ್ಬ ಮುತ್ಸದಿ ರಾಜಕಾರಣಿ ಎಂದು ಕೊಂಡಿದ್ದೆವು. ಅವರು ಒಬ್ಬ ನಾಲಾಯಕ್ ರಾಜಕಾರಣಿಯಾಗಿದ್ದಾರೆ. ಪಕ್ಷಾಂತರ ಪಕ್ಷಿ, ಯಾವುದೇ ಪಕ್ಷಕ್ಕೆ ಹೋದರೂ ಅವರು ಅಲ್ಲಿ ಉಳಿಯುವುದಿಲ್ಲ. ಪಕ್ಷದ್ರೋಹ ಮಾಡಿ ಹೊರ ಬರುತ್ತಾರೆ. ಸ್ವಾಭಿಮಾನ ಕಳೆದುಕೊಂಡಿದ್ದಾರೆ.

ವಿಶ್ವನಾಥ್ ಅವರು ಉಂಡ ಮನೆಗೆ ಉಪಕಾರ ಮಾಡಿದವರಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನಾಡು ಕಂಡ ಅಪರೂಪದ ಜನ ನಾಯಕ. ಇವರ ಯೋಜನೆಗಳು ವಿಶ್ವ ಮಟ್ಟದಲ್ಲಿ ಕೀರ್ತಿ ಗಳಿಸಿವೆ. ಅವರ ನಾಯಕತ್ವದ ಆಡಳಿತದಲ್ಲಿ ನಾಡು ಸುಭಿಕ್ಷವಾಗಿದೆ. ಇದನ್ನು ಸಹಿಸದ ವಿಶ್ವನಾಥ್ ಪದೇ ಪದೆ ಸಿದ್ದರಾಮಯ್ಯ ವಿರುದ್ಧ ಟೀಕೆ ಮಾಡುತ್ತಾ ಈಗ ನಮ್ಮ ಸಮುದಾಯದ ಸ್ವಾಮೀಜಿ ವಿರುದ್ಧವೂ ಟೀಕೆಗೆ ಮುಂದಾಗಿರುವುದು ಸರಿಯಲ್ಲ. ಕುರುಬ ಸಮುದಾಯಕ್ಕೆ ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿದರು.

ವಿಶ್ವನಾಥ್ ಅವರದ್ದು ಕೇವಲ ಟೀಕೆ ಮಾಡುವ ಕೆಲಸ. ಸಿದ್ದರಾಮಯ್ಯ ಅವರು ಮಾಡಿರುವ ಸಹಾಯವನ್ನು ವಿಶ್ವನಾಥ್ ನೆನಪಿಸಿಕೊಳ್ಳಬೇಕು. ರಾಜಕೀಯ ಸಂಧ್ಯಾಕಾಲದಲ್ಲಿರುವ ವಿಶ್ವನಾಥ್ ಅವರು ತಮ್ಮ ಕುಟುಂಬದವರನ್ನು ರಾಜಕೀಯವಾಗಿ ಬೆಳೆಸಲು ಮುಂದಾಗದೇ ಪದೇ ಪದೆ ಸಿದ್ದರಾಮಯ್ಯರನ್ನು ಟೀಕೆ ಮಾಡಿದರೆ ನಿಮಗೆ ಏನೂ ಸಿಗುವುದಿಲ್ಲ ಎಂದರು.

ಕುರುಬ ಸಮುದಾಯಕ್ಕೆ ನಿಮ್ಮ ಕೊಡುಗೆ ಏನೂ ಇಲ್ಲ. ಮಠವನ್ನೂ ನೀವೊಬ್ಬರೇ ಕಟ್ಟಿಲ್ಲ. ಸಮುದಾಯದ ಎಲ್ಲರ ಕೊಡುಗೆ ಇದೆ. ಸ್ವಾಮೀಜಿಗಳಿಗೆ ಧಮ್ಕಿ ಹಾಕುವುದನ್ನು ಬಿಡಬೇಕು. ಸ್ವಾಮೀಜಿಗಳು ಸಮುದಾಯಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ಮುಖಂಡರಾದ ದೊಳ್ಳೇಗೌಡ, ಪರಮೇಶ್, ರಾಘವೇಂದ್ರ, ಕೆಂಚಪ್ಪ, ಮಹೇಶ್, ಲೋಕೇಶ್, ಕಾಳಪ್ಪ ಇತರರು ಇದ್ದರು.

ಆಕ್ಷೇಪಾರ್ಹ ಪದ ಬಳಸಿ ಸಿಎಂ ವಿರುದ್ಧ ಟೀಕೆ

ಕಾಂಗ್ರೆಸ್ ಕಾನೂನು ವಿಭಾಗದಿಂದ ಮೈಸೂರು ಪೊಲೀಸರಿಗೆ ದೂರು



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಆಕ್ಷೇಪಾರ್ಹ ಪದ ಬಳಸಿ, ಟೀಕಿಸಿರುವ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವಿರುದ್ಧ ಕೆಪಿಸಿಸಿ ಕಾನೂನು, ಮಾನವ ಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ರಾಜ್ಯ ಕಾರ್ಯದರ್ಶಿ ಕವಿತಾ ಕಾಳೆ, ಡಿಸಿಪಿ ಆರ್.ಎನ್.ಬಿಂಧುಮಣಿ ಅವರಿಗೆ ದೂರು ನೀಡಿದರು.

ಮೈಸೂರು, ಸೆ.18(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಆಕ್ಷೇಪಾರ್ಹ ಪದ ಬಳಸಿ ಟೀಕಿಸಿರುವ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವಿರುದ್ಧ ಕೆಪಿಸಿಸಿ ಕಾನೂನು, ಮಾನವ ಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ರಾಜ್ಯ ಕಾರ್ಯದರ್ಶಿ ಕವಿತಾ ಕಾಳೆ ಡಿಸಿಪಿ ಆರ್.ಎನ್.ಬಿಂಧುಮಣಿ ಅವರಿಗೆ ದೂರು ನೀಡಿದ್ದಾರೆ.

ಮೈಸೂರಿನ ನಜ಼ರ್‌ಬಾದ್‌ನ ಪೊಲೀಸ್ ಆಯುಕ್ತರ ಕಾರ್ಯಾಲಯದ ಡಿಸಿಪಿ ಕಚೇರಿಗೆ, ಕೆಪಿಸಿಸಿ ಕಾನೂನು, ಮಾನವ ಹಕ್ಕುಗಳು ಮತ್ತು ಮಾಹಿತಿ ಹಕ್ಕು ವಿಭಾಗದ ಲೆಟರ್ ಹೆಡ್‌ನಲ್ಲಿ ಲಿಖಿತ ದೂರು ನೀಡಿ, ಸಿಎಂ ಸಿದ್ದರಾಮಯ್ಯ ಅವರನ್ನು ನಿಂದಿಸುವ ಎಂಎಲ್ಸಿ ಎ.ಹೆಚ್.ವಿಶ್ವನಾಥ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಅಲ್ಲದೆ, ವಿಶ್ವನಾಥ್ ಅವರು ಸುದ್ದಿಗೋಷ್ಠಿಯಲ್ಲಿ ಸಿಎಂ ವಿರುದ್ಧ ಬಳಸಿದ ಆಕ್ಷೇಪಾರ್ಹ ಪದವುಳ್ಳ, ವಿವಿಧ ವಾಹಿನಿಗಳಲ್ಲಿ ಪ್ರಸಾರವಾಗಿರುವ ದೃಶ್ಯ ಮತ್ತು ವೆಬ್‌ಸೈಟ್ ಲಿಂಕ್‌ಗಳ ಮಾಹಿತಿಯುಳ್ಳ ಸಿಡಿಯನ್ನು ದೂರಿನೊಂದಿಗೆ ಸಲ್ಲಿಸಿದ್ದಾರೆ.

ದೌರ್ಜನ್ಯಕ್ಕೆ ಬಲಿಯಾದ ಎಸ್‌ಸಿ/ಎಸ್‌ಟಿ ವ್ಯಕ್ತಿಗಳ ಅವಲಂಬಿತರಿಗೆ ಸರ್ಕಾರಿ ನೌಕರಿ

● ಸಂಪುಟ ಸಭೆಯಲ್ಲಿ ನಿರ್ಧಾರ ● ಕೊಡಗು ಮೆಡಿಕಲ್ ಕಾಲೇಜಿನಲ್ಲಿ ಕಾರ್ಡಿಯಾಕ್ ಯೂನಿಟ್ ● ಬಿಸಿಯೂಟ ತಯಾರಿಕೆಗೆ ಹೊಸ ಪಾತ್ರೆಗಳಿಗೆ ವ್ಯವಸ್ಥೆ

ಬೆಂಗಳೂರು, ಸೆ.18– ದೌರ್ಜನ್ಯಕ್ಕೆ ಬಲಿಯಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳ ಅವಲಂಬಿತರಿಗೆ ಗ್ರೂಪ್–ಸಿ ಮತ್ತು ಗ್ರೂಪ್–ಡಿ ವೃಂದದ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ದೌರ್ಜನ್ಯಕ್ಕೊಳಗಾಗಿ ಮೃತಪಟ್ಟ ಒಟ್ಟು 87 ಪ್ರಕರಣಗಳನ್ನು ಅನುಕಂಪದ ಆಧಾರದ ಮೇಲೆ ವಿಶೇಷ ಪ್ರಕರಣಗಳೆಂದು ಒಂದು ಬಾರಿಗೆ ಮಾತ್ರ ಪರಿಗಣಿಸಿ, ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್–ಸಿ ಮತ್ತು ಗ್ರೂಪ್–ಡಿ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಅಪ್ರಾಪ್ತ ವಯಸ್ಸಿನ ಪ್ರಕರಣಗಳಲ್ಲಿ ಇನ್ನು ಮುಂದೆ ಅನುಕೂಲವಾಗುವಂತೆ ಕರ್ನಾಟಕ ನಾಗರಿಕ ಸೇವಾ (ದೌರ್ಜನ್ಯದಿಂದ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರಿತ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು 2022ರ ನಿಯಮ 4(1)ಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ನಿರ್ದೇಶನ ನೀಡಲು ಸಚಿವ ಸಂಪುಟ ನಿರ್ಣಯಿಸಿದೆ ಎಂದು ಎಚ್.ಕೆ.ಪಾಟೀಲ್ ತಿಳಿಸಿದರು.

ಕೊಡಗು ಮೆಡಿಕಲ್ ಕಾಲೇಜಲ್ಲಿ ಕಾರ್ಡಿಯಾಕ್ ಯೂನಿಟ್: ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿ.ಪಿ.ಪಿ ಮಾದರಿ) ಕಾರ್ಡಿಯಾಕ್ ಯೂನಿಟ್ ಸ್ಥಾಪಿಸಲು ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು 10.89 ಕೋಟಿ ರೂ. ತಗುಲಿದ್ದು, ಈ ವೆಚ್ಚವನ್ನು ರಾಜ್ಯ ಪರೀಕ್ಷಾ ಪ್ರಾಧಿಕಾರದಿಂದ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಮಂಜೂರು ಮಾಡಲಾಗಿರುವ 5 ಕೋಟಿ ರೂ. ಹಾಗೂ ಇನ್ನುಳಿದ 5.89 ಕೋಟಿ ರೂ.ಗಳ ಅನುದಾನವನ್ನು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಭರಿಸಲು ಸಚಿವ ಸಂಪುಟ ನಿರ್ಣಯಿಸಿದೆ.

ಬಿಸಿಯೂಟಕ್ಕೆ ಹೊಸ ಪಾತ್ರೆ: ರಾಜ್ಯದ 9337 ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸಿದ್ಧಪಡಿಸಲು ಹೊಸ ಪಾತ್ರೆ ಪರಿಕರಗಳನ್ನು ಸಿದ್ಧಪಡಿಸಲು ಅಗತ್ಯವಿರುವ ಅನುದಾನವನ್ನು ರಾಜ್ಯ ಸರಕಾರದ ಕ್ಷೀರಭಾಗ್ಯ ಯೋಜನೆಯಡಿ 21.55 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಭರಿಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಮುಂಭಡ್ತಿಗೆ ತರಬೇತಿ: ಅಧಿಕಾರಿ, ನೌಕರರು ಮುಂಭಡ್ತಿ ಹೊಂದಲು ತರಬೇತಿಯನ್ನು ಕಡ್ಡಾಯಗೊಳಿಸಲು ನಿರ್ಧರಿಸಲಾಗಿದೆ ಅದರಂತೆ, ರಾಜ್ಯ ನಾಗರಿಕ ಸೇವಾ (ಮುಂಭಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು, 2025ರ ಕರಡು ನಿಯಮವನ್ನು ಅಧಿಸೂಚಿಸಿ, ಬಾಧಿತರಿಂದ ಆಕ್ಷೇಪಣೆ ಸ್ವೀಕರಿಸಲು 15 ದಿನಗಳ ಕಾಲಾವಕಾಶ ನೀಡಲಾಗುವುದು. ಈ ಕರಡು ನಿಯಮಗಳಿಗೆ ಯಾವುದೇ ಆಕ್ಷೇಪಣೆ, ಸಲಹೆಗಳು ಸ್ವೀಕೃತವಾಗದಿದ್ದಲ್ಲಿ ಅಥವಾ ಆಕ್ಷೇಪಣೆ, ಸಲಹೆಗಳನ್ನು ಪರಿಗಣಿಸಿ ಕರಡು ನಿಯಮಗಳನ್ನು ಅಂತಿಮಗೊಳಿಸಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಎಚ್.ಕೆ.ಪಾಟೀಲ್ ತಿಳಿಸಿದರು..



ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು



ಹಸಿರು ನಮ್ಮ ಉಸಿರು





ಸಾರ್ವಜನಿಕ ಪ್ರಕಟಣೆ

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಬಿ.ಜಿ.ಪುರ ಹೋಬಳಿ, ಬೆಳಕವಾಡಿ ಗ್ರಾಮ, ಮನೆ ನಂ.774ಎ ರಲ್ಲಿ ವಾಸವಾಗಿರುವ ಲೇಟ್.ಅಣ್ಣಯ್ಯಪ್ಪ ಮತ್ತು ಶ್ರೀಮತಿ. ನಾಗಲಾಂಬ ಉರುಫ್ ನಾಗರತ್ನ ರವರ ಮಗನಾದ ಸುಮಾರು 63 ವರ್ಷ ವಯಸ್ಸಿನ ಶ್ರೀ ಎ.ಪ್ರಸಾದ್ ರವರಿಂದ ಮೈಸೂರು–570008. ವಿದ್ಯಾರಣ್ಯಪುರಂ, 2ನೇ ಮೇನ್, 10ನೇ ಕ್ರಾಸ್, ಮನೆ ನಂ.125 ರಲ್ಲಿ ವಾಸವಾಗಿರುವ ಲೇಟ್.ಸಿ.ಎಲ್.ಕೃಷ್ಣಮೂರ್ತಿ ರವರ ಮಗನಾದ ಸುಮಾರು 47 ವರ್ಷ ವಯಸ್ಸಿನ ಶ್ರೀ.ಸುಧೀಂದ್ರ ಸಿ.ಕೆ. ಮತ್ತು ಇವರ ಧರ್ಮಪತ್ನಿ ಸುಮಾರು 39 ವರ್ಷ ವಯಸ್ಸಿನ ಶ್ರೀಮತಿ.ನಾಗಬೃಂದ ಎಂ. ಆದ ನನ್ನ ಕಕ್ಷಿಗಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕುಭಾಧ್ಯತೆ ಇದ್ದಲ್ಲಿ ಈ ದಿನದಿಂದ 7 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 7 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು, 7 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮಕ್ಕೆ ಸೇರಿದ ಖುಷ್ಕಿ ಜಮೀನಿನ ಸರ್ವೆ ನಂ.258/2 (ಸರ್ವೆ ನಂಬರ್ ಎರಡುನೂರ ಐವತ್ತೆಂಟು ಪೋಡು ಎರಡು) ರ ವಿಸ್ತೀರ್ಣ 1 ಎಕರೆ 08 ಗುಂಟೆ (ಒಂದು ಎಕರೆ ಎಂಟು ಗುಂಟೆ) ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂ.258/2 ರ ರಾಚಪ್ಪ ಹಾಗೂ ಇತರರ ಜಮೀನು ; ಪಶ್ಚಿಮಕ್ಕೆ: ಶ್ರೀ.ಎಸ್. ಹೇಮಚಂದ್ರ ಮತ್ತು ಅವರ ಮಗನಿಗೆ ಸೇರಿದ ಸರ್ವೆ ನಂ.258/3 ರ ಜಮೀನು ; ಉತ್ತರಕ್ಕೆ : ಸರ್ಕಾರಿ ರಸ್ತೆ ಮತ್ತು ಪದ್ಮ ರವರ ಜಮೀನು; ದಕ್ಷಿಣಕ್ಕೆ: ಚಾಮಚಾರಿ ಮಕ್ಕಳು ಕಾಳಚಾರಿ ಮತ್ತಿ ವಗೈರೆಯವರ ಜಮೀನು

Sd/- S. PRADEEPKUMAR, M.B.A., LL.B,
Roll No. KAR/1332/2012, ADVOCATE, No: #2917/A, 1st Floor, Opp. TTL College Kantharaja Urs Road, Saraswathipuram MYSURU-570 009. Mob: 9740315184
ದಿನಾಂಕ .18.09.2025

ಸಾರ್ವಜನಿಕ ಪ್ರಕಟಣೆ

ಮೈಸೂರು, ಕುವೆಂಪುನಗರ, ಅನಿಕೇತನ ರಸ್ತೆ, ನಾರ್ತ್ 1ನೇ ಕ್ರಾಸ್, ಮನೆ ನಂ.1643 ರಲ್ಲಿ ವಾಸವಾಗಿರುವ ಲೇಟ್ ಶ್ರೀಕಂಠಯ್ಯ ರವರ ಮಗನಾದ ಸುಮಾರು 57 ವರ್ಷ ವಯಸ್ಸಿನ ಶ್ರೀ.ಎಸ್.ಹೇಮಚಂದ್ರ ಮತ್ತು ಇವರ ಮಗನಾದ ಸುಮಾರು 22 ವರ್ಷ ವಯಸ್ಸಿನ ಶ್ರೀ.ಹೆಚ್.ಹವಿಷ್ಮಾನ್ ರವರಿಂದ ಮೈಸೂರು –570008, ವಿದ್ಯಾರಣ್ಯಪುರಂ, 2ನೇ ಮೇನ್, 10ನೇ ಕ್ರಾಸ್, ಮನೆ ನಂ.125 ರಲ್ಲಿ ವಾಸವಾಗಿರುವ ಲೇಟ್.ಸಿ.–ಎಲ್.ಕೃಷ್ಣಮೂರ್ತಿ ರವರ ಮಗನಾದ ಸುಮಾರು 47 ವರ್ಷ ವಯಸ್ಸಿನ ಶ್ರೀ.ಸುಧೀಂದ್ರ ಸಿ.ಕೆ. ಮತ್ತು ಇವರ ಧರ್ಮಪತ್ನಿ ಸುಮಾರು 39 ವರ್ಷ ವಯಸ್ಸಿನ ಶ್ರೀಮತಿ.ನಾಗಾಂದ ಎಂ. ಆದ ನನ್ನ ಕಕ್ಷಿಗಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ, ಯಾವುದೇ ವಿಧವಾದ ಹಕ್ಕುಭಾಧ್ಯತೆ ಇದ್ದಲ್ಲಿ ಈ ದಿನದಿಂದ 7 (ಏಳು) ದಿನದೊಳಗೆ ತಮ್ಮ ಲಿಖಿತ ತಕರಾರುಗಳನ್ನು ದಾಖಲೆ ಸಮೇತ ಈ ಕೆಳಕಂಡ ನನಗೆ ಸಲ್ಲಿಸಬೇಕಾಗಿ ಪ್ರಕಟಿಸಲಾಗಿದೆ. ಒಂದು ವೇಳೆ 7 (ಏಳು) ದಿನಗಳ ಒಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು 0ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂದಿನ ಪ್ರಕ್ರಿಯೆಗಳನ್ನು ಮೇಲೆ ತಿಳಿಸಿದ ವ್ಯಕ್ತಿಗಳೊಡನೆ ನಡೆಸುತ್ತಾರೆ ಎಂದು ತಿಳಿಯುವುದು. 7 (ಏಳು) ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮಕ್ಕೆ ಸೇರಿದ ಖುಷ್ಕಿ ಜಮೀನಿನ ಸರ್ವೆ ನಂ.258/3 (ಸರ್ವೆ ನಂಬರ್ ಎರಡುನೂರ ಐವತ್ತೆಂಟು ಪೋಡು ಮೂರು) ರ ವಿಸ್ತೀರ್ಣ 1 ಎಕರೆ 08 ಗುಂಟೆ (ಒಂದು ಎಕರೆ ಎಂಟು ಗುಂಟೆ) ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಶ್ರೀ.ಎ.ಪ್ರಸಾದ್ ರವರಿಗೆ ಸೇರಿದ ಸರ್ವೆ ನಂ.250/2 ರ ಜಮೀನು; ಪಶ್ಚಿಮಕ್ಕೆ: ಶ್ರೀ ಬೆಟ್ಟಚಾರಿಯವರಿಗೆ ಸೇರಿದ ಜಮೀನು ; ಉತ್ತರಕ್ಕೆ : ಸರ್ಕಾರಿ ರಸ್ತೆ ಮತ್ತು ಪದ್ಮ ರವರ ಜಮೀನು; ದಕ್ಷಿಣಕ್ಕೆ: ಚಾಮಚಾರಿ ಮಕ್ಕಳು ಕಾಳಚಾರಿ ಮತ್ತು ವಗೈರೆಯವರ ಜಮೀನು.

Sd/- S. PRADEEPKUMAR, M.B.A., LL.B,
Roll No. KAR/1332/2012, ADVOCATE, No: #2917/A, 1st Floor, Opp. TTL College Kantharaja Urs Road, Saraswathipuram MYSURU-570 009. Mob: 9740315184
ದಿನಾಂಕ .18.09.2025

ಶ್ರೀ ರಾಮಲಿಂಗ ಚೌಡೇಶ್ವರಿ ವೀವರ್ಸ್ ಕೋ ಆಪರೇಟಿವ್ ಸೊಸೈಟಿ ಲಿ.

ನಂ. 79, ಕೆ.ಟಿ. ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು

ಮೇಲ್ಕಂಡ ಸೊಸೈಟಿ 2024 –25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಎಸ್. ರವಿನಾಥ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ **20–9–2025ನೇ ಶನಿವಾರ** ಸಂಜೆ 4.30 ಘಂಟೆಗೆ ಕೆ.ಟಿ. ರಸ್ತೆಯಲ್ಲಿರುವ **ದೇವಾಂಗ ಭವನದಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರುಗಳು ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಸವಿನಯ ಪ್ರಾರ್ಥನೆ

ವಿಶೇಶ ಸೂಚನೆ : ಸದಸ್ಯರು ತಮ್ಮ ವಿಳಾಸ ಬದಲಾವಣೆ ಆಗಿದ್ದರೆ ನೂತನ ವಿಳಾಸವನ್ನು ತಿಳಿಸಬೇಕಾಗಿ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– **ಎನ್.ಪ್ರಭಾಕರ್,** ವೇತನಾ ಕಾರ್ಯದರ್ಶಿ

ನಂದಿ ರಾಯಲ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ.1136, ಸಿ.ಹೆಚ್ ನಂ.2/2, 3ನೇ ಮಹಡಿ, ಬಲ್ಲಾಳ್ ವೃತ್ತ, ಮಹೇಶ್ ಪ್ರಸಾದ್ ಹೋಟೆಲ್ ಹಿಂಭಾಗ, ಚಾಮರಾಜಪುರಂ, ಮೈಸೂರು – 570004

ವಾರ್ಷಿಕ ಮಹಾ ಸಭೆಯ ಅಹ್ವಾನ ಪತ್ರಿಕೆ

ಮೇಲ್ಕಂಡ ಸಂಘದ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: **27–09–2025ನೇ ಶನಿವಾರ ಸಂಜೆ 4.00 ಘಂಟೆಗೆ ಐಡಿಯಲ್ ಜಾವಾ ರೋಟರಿ ಸಭಾಂಗಣ,** ಮುಡಾ ಎದುರು, ಜೆ.ಎಲ್.ಬಿ. ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು – 570024 ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಆರ್. ರವಿ** ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೆ ಅಂಚೆ ಪ್ರಮಾಣ ಪತ್ರದ ಮೂಲಕ ರವಾನಿಸಲಾಗಿದೆ, ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಅರ್ಹ ಸದಸ್ಯರುಗಳು ಇದನ್ನೆ ಆಹ್ವಾನ ಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ಸುಗೊಳಿಸಲು ಕೋರಲಾಗಿದೆ.

ಸಹಿ/–
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **ಮೊ.ನಂ. 90197 60981** ಆರ್ ರವಿ, ಅಧ್ಯಕ್ಷರು

ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀಮತಿ ವಿನೋದಮ್ಮ, ಕೋಂ. ಲೇಟ್. ಕೆ.ಎಸ್ ನಾರಾಯಣಸ್ವಾಮಿ, ಶ್ರೀ. ಕೆ.ಎನ್. ರಾಘವೇಂದ್ರ ಮತ್ತು ಶ್ರೀ ಕೆ.ಎನ್. ಶೇಖರ್ ಬಿನ್. ಕೆ.ಎಸ್ ನಾರಾಯಣಸ್ವಾಮಿ, ಎಲ್ಲರ ವಾಸ: ಮನೆ ನಂ.101, 8ನೇ ಕ್ರಾಸ್, 4ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಮೈಸೂರು–570002 ರವರ ಸಂಪೂರ್ಣ ಹಕ್ಕು ಮಾಲೀಕತ್ವಕ್ಕೊಳಪಟ್ಟ ಹಾಗೂ ಯಾವುದೇ ಋಣಭಾರಗಳಿಲ್ಲದ ಷೆಡ್ಯೂಲ್ ಸ್ವತ್ತನ್ನು ಸದರಿ ಶ್ರೀಮತಿ ವಿನೋದಮ್ಮ, ಶ್ರೀ.ಕೆ.ಎನ್. ರಾಘವೇಂದ್ರ ಮತ್ತು ಶ್ರೀ ಕೆ.ಎನ್. ಶೇಖರ್ ರವರಿಂದ ಕ್ರಯಕ್ಕೆ ಪಡೆಯಲು ಹೊರಟಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಸದರಿ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳನ್ನು ಪುಷ್ಟೀಕರಿಸುವಂತಹ ಸೂಕ್ತ ದಾಖಲಾತಿಗಳೊಂದಿಗೆ ಈ ನೋಟೀಸು ಪ್ರಕಟವಾದ 7 (ಏಳು) ದಿನಗಳ ಒಳಗೆ ಕೆಳಕಂಡ ವಕೀಲರ ಕಛೇರಿಗೆ ಸಲ್ಲಿಸತಕ್ಕದ್ದು, ನಂತರ ಬರುವ ಆಕ್ಷೇಪಣೆಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಶೃತಪಡಿಸಿರುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಕೆ.ಆರ್ ನಗರ ಟೌನ್, ಮೈಸೂರು ಹಾಸನ ರಸ್ತೆ, ಸ್ವತ್ತಿನ ಸಂಖ್ಯೆ : 417, ಖಾತಾ ಸಂಖ್ಯೆ :1415, ಅಸೆಸ್‌ಮೆಂಟ್ ಸಂಖ್ಯೆ : 1454, ಹಾಲೀ ಪುರಸಭೆ, ಕೆ.ಆರ್ ನಗರ ರವರು ವಿತರಿಸಿರುವ ನಮೂನೆ–3 (ನಿಯಮ 20) ದಾಖಲೆ ಸಂಖ್ಯೆ : 23689153 ರ ಪ್ರಕಾರ ಸ್ವತ್ತಿನ ಸಂಖ್ಯೆ : 15–16–43, ವಾರ್ಡ್ ನಂ. 16, ನಿರ್ಧರಣಾ ಸಂಖ್ಯೆ : 3229/3148 ಏ ನೇ ನಂಬರ್ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ಗಲ್ಲಿ ರಸ್ತೆ ಮತ್ತು ಬಸಪ್ಪರವರ ಆಸ್ತಿ, ಪಶ್ಚಿಮಕ್ಕೆ : ಹಾಸನ ಮೈಸೂರು ರಸ್ತೆ, ಉತ್ತರಕ್ಕೆ : ಸಿ. ಎಂ ಚನ್ನಪ್ಪ ರವರ ಆಸ್ತಿ, ದಕ್ಷಿಣಕ್ಕೆ : ಮಾರಾಟಗಾರರ ಸ್ವತ್ತು.

ಈ ಮಧ್ಯೆ ಇರುವ ಪೂರ್ವ ಪಶ್ಚಿಮ : 30.480061 ಮೀಟರ್ ಮತ್ತು ಉತ್ತರ ದಕ್ಷಿಣ : 30.480061 ಮೀಟರ್ ಒಟ್ಟು 929.03 ಚದರ ಮೀಟರ್‌ಗಳುಳ್ಳ ಪೂರ್ತಾ ನಿವೇಶನ ಹಾಗು ಸದರಿ ನಿವೇಶನದಲ್ಲಿ ನಿರ್ಮಿಸಿರುವ ವಿದ್ಯುತ್, ನೀರು ಮತ್ತು ಸ್ಯಾನಿಟರಿ ಸಂಪರ್ಕಗಳುಳ್ಳ ನೆಲ ಮಹಡಿ ಯಲ್ಲಿರುವ 22.389623 ಚದರ ಮೀಟರ್‌ಗಳುಳ್ಳ ಮೊಸಾಯಿಕ್ ನೆಲಹಾಸು ಮತ್ತು ಆರ್.ಸಿ.ಸಿ ಛಾವಣಿಯುಳ್ಳ ವಾಣಿಜ್ಯ ಕಟ್ಟಡ ಮತ್ತು 27.8709 ಚದರ ಮೀಟರ್‌ಗಳುಳ್ಳ ಮೊಸಾಯಿಕ್ ನೆಲಹಾಸು ಮತ್ತು ಎ.ಸಿ ಶೀಟಿನ ಛಾವಣಿಯುಳ್ಳ ವಾಣಿಜ್ಯ ಕಟ್ಟಡ ಸೇರಿದಂತೆ ಪೂರ್ತಾ ಸ್ವತ್ತು.

ದಿನಾಂಕ : 17–09–2025

ಸಹಿ/–
ಸೋಮಣ್ಣ. ಎಂ.ಈ, ಬಿ.ಕಾಂ., ಎಲ್.ಎಲ್.ಬಿ.
ವಕೀಲರು ಮತ್ತು ನೋಟರಿ
ಕಛೇರಿ : ನಂ. 11, 1ನೇ ಮಹಡಿ, 3ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು – 570 009.

ಸ್ಥಾಪನೆ: 1931

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಪತ್ತಿನ ಸಹಕಾರ ಸಂಘ ನಿ. ಮೈಸೂರು

K.P.T.C.L. EMPLOYEES CREDIT CO-OPERATIVE SOCIETY LTD., MYSORE

ಸಂಖ್ಯೆ ಯು.ಬಿ.ಸಿ. 3/188/ ನೋಂದಣಿ34549/2004–05 ದಿನಾಂಕ: 03–03–2005
ಕೆ.ಪಿ.ಟಿ.ಸಿ.ಎಲ್. ಕಛೇರಿ ಕಟ್ಟಡ, ಶ್ರೀಹರ್ಷ ರಸ್ತೆ, ಮೈಸೂರು–570001, ದೂರವಾಣಿ: 0821–2437600

ಕೆಪಿಟಿಸಿಎಲ್ ನೌಕರರ ಕ್ರೆಡಿಟ್ ಸಹಕಾರ ಸಂಘ ಆಮಂತ್ರಣ: ಚಿತ್ತ ರೇಖೆಗಾಗಿ ಆಹ್ವಾನ

ಕೆಪಿಟಿಸಿಎಲ್ ನೌಕರರ ಕ್ರೆಡಿಟ್ ಸಹಕಾರ ಸಂಘ, ಎಂ.ಪಿ.ಎಲ್ ಕಾಂಪೌಂಡ್, ಶ್ರೀಹರ್ಷ ರಸ್ತೆ, ಮೈಸೂರು 570001. ಕಿರಿಯ ಮತ್ತು ಅನುಭವ ಹೊಂದಿರುವ ಸಾಫ್ಟ್‌ವೇರ್ ಕಂಪನಿಗಳಿಂದ ಸಂಸ್ಥೆಯ ಚಟುವಟಿಕೆಗಳ ನಿರ್ವಹಣೆಗೆ ಅಗತ್ಯವಿರುವ ಕಸ್ಟಮೈಸ್ ಸಾಫ್ಟ್‌ವೇರ್ ವಿನ್ಯಾಸ ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ಮುಚ್ಚಿದ ಕೋಟ್‌ಗಳನ್ನು ಆಹ್ವಾನಿಸುತ್ತದೆ.

ಕಾರ್ಯದ ವ್ಯಾಪ್ತಿ:
ಸಾಫ್ಟ್‌ವೇರ್‌ನಲ್ಲಿ ಕೆಳಗಿನ ಲಕ್ಷಣಗಳನ್ನು ಒಳಗೊಂಡಿರಬೇಕು (ಆದರೂ ಇಲ್ಲವೇ):
* ಸದಸ್ಯ ಖಾತೆ ನಿರ್ವಹಣೆ, * ಲೋನ್ ಪ್ರಕ್ರಿಯೆ ಮತ್ತು ವಿವಿಧ ಹಂತಗಳಲ್ಲಿ ಅದರ ಮೇಲ್ವಿಚಾರಣೆ, * ಠೇವಣಿ ಯೋಜನೆಗಳ ನಿರ್ವಹಣೆ ಮತ್ತು ಅವಧಿ ಪೂರ್ಣಗೊಳ್ಳುವುದರ ನಂತರದ ವ್ಯವಹಾರ ನಿರ್ವಹಣೆ, * ವರದಿಗೋಚಿ ಮತ್ತು ಅನುಕೂಲತ ವೈಶಿಷ್ಟ್ಯಗಳು * ಬಳಕೆದಾರ ಸ್ನೇಹಿ ಇಂಟರ್‌ಫೇಸ್ ಮತ್ತು ಡೇಟಾ ಸುರಕ್ಷತೆ.

ಮೊಬೈಲ್ ಆಪ್:
ಪ್ರತಿಯೊಬ್ಬ ಸದಸ್ಯನಿಗೆ ವೈಯಕ್ತಿಕ ಮತ್ತು ಸುರಕ್ಷಿತ ಲಾಗಿನ್ ವ್ಯವಸ್ಥೆಯೊಂದಿಗೆ ಮೊಬೈಲ್ ಆ್ಯಪ್ ಅಭಿವೃದ್ಧಿ, ಮಾಡುವುದು ಆ್ಯಪ್‌ನಲ್ಲಿ ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿರಬೇಕು.
* ಖಾತೆ ವಿವರಗಳನ್ನು ವೀಕ್ಷಿಸುವುದು, * ಲೋನ್ ಅರ್ಜಿ ಸಲ್ಲಿಸುವುದು, * ಪಾವತಿ ನಿರೀಕ್ಷಣೆ
* ಹೇಳಿಕೆ ಮತ್ತು ಸೂಚನೆಗಳ ವೈಶಿಷ್ಟ್ಯಗಳು

ಅರ್ಹತೆಗಳು:
* ಕಂಪನಿಗೆ ಹಣಕಾಸು ಅಥವಾ ಬ್ಯಾಂಕಿಂಗ್ ಸಂಬಂಧಿ ಸಾಫ್ಟ್‌ವೇರ್ ಅಭಿವೃದ್ಧಿಯಲ್ಲಿ ಪೂರ್ವ ಅನುಭವ ಇರಬೇಕು. * ಕಂಪನಿಯು ಅದೇ ರೀತಿಯ ಕೆಲಸಕ್ಕಾಗಿ ಕನಿಷ್ಠ 5 ಗ್ರಾಹಕರ ಶಿಫಾರಸ್ಸು ಪತ್ರಗಳನ್ನು ನೀಡಬೇಕು. * ಕಂಪನಿ ಜಿ.ಎಸ್.ಟಿ. ನೋಂದಾಯಿಸಿರಬೇಕು

ಸಮರ್ಪಣೆ ವಿವರಗಳು:
ಕೋಟ್‌ಗಳನ್ನು ಮುಚ್ಚಿದ ಲೆಟ್ಟರ್‌ನಲ್ಲಿ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿದೆ:
ವಿಳಾಸ: ಪ್ರಮೋದ್, ಕೆಪಿಟಿಸಿಎಲ್ ನೌಕರರ ಕ್ರೆಡಿಟ್ ಸಹಕಾರ ಸಂಘ. ಎಂ.ಪಿ.ಎಲ್. ಕಾಂಪೌಂಡ್, ಶ್ರೀಹರ್ಷ ರಸ್ತೆ, ಮೈಸೂರು–570001. ಫೋನ್ ಸಂಖ್ಯೆ: +91 9900083706

ಕೋಟ್ ಸಲ್ಲಿಸುವ ಕೊನೆಯ ದಿನಾಂಕ: 30ನೇ September 2025
ಯಾವುದೇ ವಿಚಾರಣೆಗೆ, ದಯವಿಟ್ಟು ಸಂಪರ್ಕಿಸಿ:
ಅದಿಲ್ ಶರೀಫ್ ಹೆಚ್ ಎಂ, ಫೋನ್: +91 9845579236
ಸಹಿ/– ಮುಖ್ಯ ಕಾರ್ಯ ನಿರ್ವಹಣಾಧಿಕಾರಿ